ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 13 ಮಾರ್ಚ್ 24-30, 1997 ಬೆಲೆ ರೂ. 2.00

ಹೊಣೆಜಾರಿಕೆಯ ಚಿದಂಬರಂ ದಾರಿಯಲ್ಲೇ ಸಾಗಿರುವ ರಾಜ್ಯ ಬಜೆಟ್

ಮಾರ್ಚ್ 18ರಂದು ಉಪಮುಖ್ಯಮಂತ್ರಿಗಳು ಮಂಡಿಸಿದ ರಾಜ್ಯ ಬಜೆಟ್ ಕರ್ನಾಟಕ ರಾಜ್ಯದ ಅಭಿವೃದ್ಧಿ ಹಾಗೂ ಜನಸಾಮಾನ್ಯರಿಗೆ ಬೇಕಾದ ವಿವಿಧ ಸೇವೆಗಳ ವಿಷಯದಲ್ಲಿ ಸರಕಾರ ಹೊಣೆಯಿಂದ ಜಾರಿಕೊಳ್ಳುವ ಹಾಗೂ ಅವೆಲ್ಲವನ್ನೂ ಖಾಸಗಿಯವರ ಕೈಗೊಪ್ಪಿಸಿ ಕೈತೊಳೆದುಕೊಳ್ಳುವ ಆತುರವನ್ನು ತೋರಿಸುವ ಬಜೆಟ್ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಟೀಕಿಸಿದೆ.

ರಾಜ್ಯದಲ್ಲಿ ಹೊಸ ಸಂಪನ್ಮೂಲಗಳನ್ನು ಹುಡುಕುವ, ಆ ಸಂಪನ್ಮೂಲಗಳನ್ನು ರಾಜ್ಯದ ಅಭಿವೃದ್ಧಿಗಾಗಿ ಬಳಸುವ ಯಾವುದೇ ಪ್ರಯತ್ನವನ್ನು ಕೈಬಿಟ್ಟು ಖಾಸಗಿ ಬಂಡವಾಳದಾರರಿಗೆ ವಿಪುಲ ರಿಯಾಯಿತಿಗಳನ್ನು, ಅತ್ಯಧಿಕ ಲಾಭವನ್ನು ಖಾತರಿಗೊಳಿಸುವುದು ಮಾತ್ರವೇ ಸರಕಾರದ ಜವಾಬ್ದಾರಿ ಎಂಬ ಐಎಂಎಫ್ ಹಾಗೂ ಚಿದಂಬರಂ ದಾರಿಯಲ್ಲಿ ನಿರ್ಭೀಡೆಯಿಂದ ಈ ಬಜೆಟ್ ಸಾಗಿದೆ. ಆ ದಾರಿಯಲ್ಲಿ ಸರಕಾರಿ ಹುದ್ದೆಗಳನ್ನು ಕಡಿತಗೊಳಿಸ ಹೊರಟಿದೆ ಎಂದು ಸಿಪಿಐ(ಎಂ) ಖಂಡಿಸಿದೆ. ಹೀಗಾಗಿ ರಾಜ್ಯದಲ್ಲಿ ಹೆಚ್ಚುತ್ತಿರುವ ಬಡತನದ ಬಗ್ಗೆ, ಬೆಲೆ ಏರಿಕೆಯ ಬಗ್ಗೆ ಉದ್ಯೋಗ ಸೃಷ್ಟಿಸುವ ಬಗ್ಗೆ, ಬಡವರ ದುಡಿಮೆಗೆ ತಕ್ಕ ಫಲ ನೀಡುವ ಕನಿಷ್ಟ ಕೂಲಿಯ ಬಗ್ಗೆ, ಅಂಗನವಾಡಿ, ಪಂಚಾಯತ್ ನೌಕರರು ಅತ್ಯಂತ ಕನಿಷ್ಟ ವೇತನಗಳಲ್ಲಿ ಸೇವೆಗಳನ್ನು ಸಲ್ಲಿಸಿದರೂ ಅವರ ನೌಕರಿಯ ಖಾಯಮಾತಿ, ವೇತನಗಳ ಏರಿಕೆ ಬಗ್ಗೆ ಈ ಬಜೆಟ್ಟಿನಲ್ಲಿ ಹುಡುಕಾಡಿದರೂ ಒಂದೇ ಒಂದು ಮಾತಿಲ್ಲ. ಆದರೆ ಸರಕಾರದ ಎಲ್ಲಾ ಸೇವೆಗಳ - ನೀರಾವರಿ, ವಿದ್ಯುತ್‌ಗಳ ಬೆಲೆಯನ್ನು ಇನ್ನು ಮುಂದೆಯೂ ಏರಿಸುವ ಬಗ್ಗೆ ನೇರ ಸೂಚನೆಗಳು ಹಾಗೂ ಅದರಿಂದ ಬಜೆಟ್ಟೇತರ ಮೂಲಗಳು-ಆಂತರಿಕ ಸಂಪನ್ಮೂಲಗಳು ಎಂಬ ಹೆಸರಿನಲ್ಲಿ ಸಾವಿರಾರು ಕೋಟಿ ರೂ. ಹೆಚ್ಚು ಹೊರೆಯನ್ನು ವಿಧಿಸುವ ಹುನ್ನಾರವಂತೂ ಸ್ಪಷ್ಟವಾಗಿದೆ ಎಂದು ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಅಭಿಪ್ರಾಯಪಟ್ಟಿದೆ.

ವಿದ್ಯುತ್ ತಯಾರಿಕೆ, ಸರಕಾರಿ ಉದ್ದಿಮೆಗಳ ಪೂರ್ಣ ಜವಾಬ್ದಾರಿಯಾಗಿ ಇರುವವರೆಗೂ ಅತಿ ಹೆಚ್ಚಿನ ಶೇ. 12ರಿಂದ 20ರಷ್ಟು ತೆರಿಗೆಗಳನ್ನು ವಿದ್ಯುತ್ ತಯಾರಿ ಯಂತ್ರೋಪಕರಣಗಳ ಮೇಲೆ ಹಾಕಿ ಸರಕಾರಿ ಉದ್ದಿಮೆಗಳ ಕಷ್ಟ ನಷ್ಟಕ್ಕೆ ಕಾರಣವಾದ ಸರಕಾರ ಈಗ ಕೊಜೆಂಟ್ರಿಕ್ಸ್ ಮತ್ತಿತರ ಖಾಸಗಿ ಉತ್ಪಾದಕರ ಲಾಬಿಗೆ ಮಣಿದು ಅದನ್ನು ದಿಢೀರನೆ ಶೇ. 4ಕ್ಕೆ ಇಳಿಸಿರುವುದನ್ನು ಖಂಡಿಸಿರುವ ಸಿಪಿಐ(ಎಂ) ಅದೇ ರೀತಿಯಲ್ಲಿ ಸಾರಿಗೆಗೆ ಸಂಬಂಧಪಟ್ಟಂತೆಯೂ ಸರಕಾರ ವರ್ತಿಸಿದೆ ಎಂದು ಖೇದ ವ್ಯಕ್ತಪಡಿಸಿದೆ.

ರಾಜ್ಯಗಳಿಗೆ ಹೆಚ್ಚಿನ ಆರ್ಥಿಕ ಅಧಿಕಾರಗಳನ್ನು ಕೇಳುವ ಪ್ರಸ್ತಾಪ ಬಜೆಟ್ಟಿನಲ್ಲಿರುವುದು ಸ್ವಾಗತಾರ್ಹ. ಹಾಗೆಯೇ ವೃತ್ತಿತೆರಿಗೆ ರಸಗೊಬ್ಬರಗಳ ತೆರಿಗೆಯಂತಹ ಕೆಲವು ಸಾಮಾನ್ಯ ಜನರಿಗೆ ಅಗತ್ಯವಾದ ವಸ್ತುಗಳ ಮೇಲಿನ ತೆರಿಗೆ ಇಳಿಕೆಯನ್ನು ವೃದ್ಧಾಪ್ಯ ವೇತನ, ವಿಧವಾ ವೇತನಗಳ ಏರಿಕೆಯನ್ನು ಸಿಪಿಐ(ಎಂ) ಸ್ವಾಗತಿಸಿದೆ. ಆದರೆ ಇಂತಹ ಜನಪರ ಅಂಶಗಳು ಗಣನೀಯವಾಗಿಲ್ಲ.

ಒಟ್ಟಾರೆಯಾಗಿ ಬಜೆಟ್‌ನಿಂದಾಗಿ ರಾಜ್ಯದಲ್ಲಿ ಜನತಾದಳದ ಬಗ್ಗೆ ಹೆಚ್ಚುತ್ತಿರುವ ಅತೃಪ್ತಿ ಮತ್ತಷ್ಟು ಹೆಚ್ಚಲಿದೆ ಎಂದು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಬೇಸರ ವ್ಯಕ್ತಪಡಿಸಿದೆ.

ಪ್ರಧಾನಿಗಳಿಗೆ ಎಡಪಕ್ಷಗಳ ಪತ್ರ

"ಜನಗಳ ಹಿತಾಸಕ್ತಿ ಗಮನಿಸಿ ಧೋರಣೆ ರೂಪಿಸಿ"

ಭ್ರಷ್ಟಾಚಾರ ತಡೆಯಲು ಲೋಕಪಾಲ, ನ್ಯಾಯಾಧೀಶರನೇಕ, ಪೆಟ್ರೋಲ್ ಪಂಪ್-ಗ್ಯಾಸ್ ಏಜೆಂಸಿಗಳ ನೀಡಿಕೆಯಲ್ಲಿ ಸ್ವೇಚ್ಛಾಚಾರ, ವಿದ್ಯುತ್ ವಿತರಣೆಯಲ್ಲಿ ಖಾಸಗಿಯವರಿಗೆ ಅವಕಾಶ ಕೊಡುವ ಮಸೂದೆ, ಮಹಿಳಾ ಮೀಸಲಾತಿಯಲ್ಲಿ ಸತತ ವಿಳಂಬ ಹಾಗೂ ಕೃಷಿಕೂಲಿಕಾರರಿಗೆ ಸಮಗ್ರಶಾಸನ ತರುವಲ್ಲಿ ಮುಂದುವರಿಯುತ್ತಿರುವ ವಿಳಂಬ ಕುರಿತಂತೆ ಸಂಯುಕ್ತ ರಂಗ ಸರಕಾರದ ನಿಲುವುಗಳ ಬಗ್ಗೆ ಬೇಸರ, ಖೇದ ವ್ಯಕ್ತಪಡಿಸಿ ನಾಲ್ಕು ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಫಾರ್ವರ್ಡ್‌ಬ್ಲಾಕ್ ಹಾಗೂ ಆರ್.ಎಸ್.ಪಿ.ಯ ಪ್ರಧಾನ ಕಾರ್ಯದರ್ಶಿಗಳು ಪ್ರಧಾನ ಮಂತ್ರಿ ದೇವೇಗೌಡರಿಗೆ ಮಾರ್ಚ್ 16 ರಂದು ಒಂದು ಪತ್ರ ಬರೆದಿದ್ದಾರೆ. ಈ ವಿಷಯಗಳಲ್ಲಿ ಸಂಯುಕ್ತ ರಂಗ ಸರ್ಕಾರ ಜನತೆಯ ಹಿತಾಸಕ್ತಿಗಳಿಗೆ ಅನುಗುಣವಾದ ಹಾಗೂ 'ಸಮಾನ ಕನಿಷ್ಟ ಕಾರ್ಯಕ್ರಮ'ದಲ್ಲಿ ನೀಡಿದ ವಚನಗಳಿಗೆ ಅನುಗುಣವಾದ ಧೋರಣೆಗಳನ್ನು ಅನುಸರಿಸಬೇಕು ಎಂದು ಎಡಪಕ್ಷಗಳ ಮುಖಂಡರು ಒತ್ತಾಯಿಸಿದ್ದಾರೆ.

ಈಗಿನ ಲೋಕಪಾಲ್ ಮಸೂದೆ ಭ್ರಷ್ಟಾಚಾರ ತಡೆಯುವುದಿಲ್ಲ

ಉನ್ನತ ಅಧಿಕಾರದ ಸ್ಥಾನಗಳಲ್ಲಿ ಭ್ರಷ್ಟಾಚಾರಗಳನ್ನು ತಡೆಯಲೆಂದು 'ಲೋಕಪಾಲ' ನೇಮಕ, ಸಂಯುಕ್ತ ರಂಗ ತನ್ನ 'ಸಮಾನ ಕನಿಷ್ಟ ಕಾರ್ಯಕ್ರಮ' ದಲ್ಲಿ ನೀಡಿರುವ ಒಂದು ಭರವಸೆ. ಆದರೆ ಸಂಸತ್ತಿನಲ್ಲಿ ಮಂಡಿಸಿದ, ಈಗ ಗೃಹ ಇಲಾಖೆಯ ಸ್ಥಾಯೀ ಸಮಿತಿಯ ಮುಂದಿರುವ ಲೋಕಪಾಲ್ ಮಸೂದೆ ಬಹಳ ತಪ್ಪುಗಳಿಂದ ಕೂಡಿದೆ. ಇದು ತಪ್ಪು ದಾರಿಹಿಡಿದ ಮಸೂದೆ ಎಂದು ಎಡಪಕ್ಷಗಳ ಮುಖಂಡರು ಟೀಕಿಸಿದ್ದಾರೆ. ಈ ಮಸೂದೆ ಭ್ರಷ್ಟಾಚಾರವನ್ನು ದಮನ ಮಾಡಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸುವ ಬದಲು ಭ್ರಷ್ಟ ಆಚರಣೆಗಳಲ್ಲಿ ತೊಡಗಿರುವ ಯಾವುದೇ ಸಾರ್ವಜನಿಕ ಹುದ್ದೆ ಹೊಂದಿರುವ ವ್ಯಕ್ತಿಯನ್ನು ರಕ್ಷಿಸುವಲ್ಲಿ ನೆರವಾಗುತ್ತದೆ ಎಂದಿರುವ ಎಡಪಕ್ಷಗಳ ಪ್ರಧಾನ ಕಾರ್ಯದರ್ಶಿಗಳು ಈ ಮಸೂದೆಯಲ್ಲಿ ಆಕ್ಷೇಪಾರ್ಹವಾಗಿರುವ ಅಂಶಗಳು ಕೇವಲ ಒಂದೆರಡಲ್ಲವಾದ್ದರಿಂದ ಈ ಶಾಸನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಕುರಿತಂತೆ ಸರಿಯಾದ ಒಂದು ಚರ್ಚೆಯ ನಂತರ ಈ ಇಡೀ ಮಸೂದೆಯ ಕರಡನ್ನು ಹೊಸದಾಗಿ ತಯಾರಿಸಬೇಕು ಎಂದು ಅವರು ತಮ್ಮ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ನಾಯಾಧೀಶರ ನೇಮಕ ಸ್ವತಂತ್ರ ಆಯೋಗ ಅಗತ್ಯ

ನ್ಯಾಯಾಧೀಶರ ನೇಮಕ ಕುರಿತಂತೆ 1993 ರ ಮೊದಲು ಇದ್ದ ವ್ಯವಸ್ಥೆಯನ್ನು ಮತ್ತೆ ತರುವ ಅಂದರೆ ಕಾರ್ಯಾಂಗವೇ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರೊಡನೆ ಸಮಾಲೋಚನೆ ನಡೆಸಿ ನೇಮಿಸುವ ಪದ್ಧತಿಯನ್ನು ಮತ್ತೆ ತರುವಂತೆ ಒಂದು ಸಂವಿಧಾನ ತಿದ್ದುಪಡಿ ಮಸೂದೆಯನ್ನು ಸರಕಾರ ತರ ಬಯಸುತ್ತದೆ ಎಂಬ ವರದಿಗೆ ಪ್ರತಿಕ್ರಿಯಿಸುತ್ತಾ ಈ ಬಗ್ಗೆ ತಮ್ಮ ಭಿನ್ನಾಭಿಪ್ರಾಯವನ್ನು ಎಡಪಕ್ಷಗಳ ಪ್ರಧಾನ ಕಾರ್ಯದರ್ಶಿಗಳು ವ್ಯಕ್ತಪಡಿಸಿದ್ದಾರೆ. ನೇಮಕ ಮಾಡುವ ಅಧಿಕಾರ ಕಾರ್ಯಾಂಗಕ್ಕೋ, ನ್ಯಾಯಾಂಗಕ್ಕೋ ಎಂಬ ಪ್ರಶ್ನೆಯಾಗಿ ಇದನ್ನು ಕಾಣಲಾಗುತ್ತಿದೆ. ನ್ಯಾಯಾಂಗದ ಮಹತ್ವ ಹಾಗೂ ಅದರ ಸ್ವಾತಂತ್ರ್ಯ ಮತ್ತು ವಿಶ್ವಾಸಾರ್ಹತೆಯನ್ನು ರಕ್ಷಿಸುವುದು ಅಗತ್ಯ ಎಂಬ ಸಾರ್ವತ್ರಿಕ ಅಭಿಪ್ರಾಯದ ಬೆಳಕಿನಲ್ಲಿ ನೋಡಬೇಕು ಎಂದಿರುವ ಎಡಪಕ್ಷಗಳ ಮುಖಂಡರು ಈಗ ಬೇಕಾಗಿರುವುದು ಒಂದು ಸ್ವತಂತ್ರ ನ್ಯಾಯಾಂಗ ಆಯೋಗ, ಇದು ಒಂದು ಸುಸಂಬದ್ಧವಾದ ನೀತಿ-ನಿಯಮಾವಳಿಗಳ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಿ ನ್ಯಾಯಾಧೀಶರನ್ನು ನೇಮಿಸುವ

ಪುಟ 5ಕ್ಕೆ

ಬಸ್ ದರ ಏರಿಕೆ: ಕೊನೆಗೂ ಸರಕಾರ ಮಣಿಯಬೇಕಾಯಿತು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪ್ರಯಾಣ ದರಗಳನ್ನು ವಿಪರೀತವಾಗಿ ಏರಿಸಿದ್ದಕ್ಕೆ ಎಲ್ಲೆಡೆಯಿಂದ ಜನಗಳ ಪ್ರತಿಭಟನೆ ಎದುರಾದಾಗ ಸಾರಿಗೆ ಮಂತ್ರಿಗಳು ಯಾವುದೇ ಕಾರಣಕ್ಕೂ ಈ ಏರಿಕೆಗಳನ್ನು ಇಳಿಸುವುದಿಲ್ಲ ಎಂದು ಸಾರಿದ್ದರು. ಈ ಹಿಂದೆಯೂ ಇದೇ ಪಟೇಲ್ ಸರಕಾರ ಜನಗಳ ಪ್ರತಿಕ್ರಿಯೆ ಗಳಿಗೆ ಸ್ಪಂದಿಸುವುದಿಲ್ಲ ಎಂಬ ಪ್ರಜಾಪ್ರಭುತ್ವ-ವಿರೋಧಿ ನಿಲುವನ್ನು ತಳೆದು ಕೊನೆಗೆ ಈ ನಿಲುವನ್ನು ಎದುರಿಸಬೇಕಾಗಿ ಬಂದಿತ್ತು. ಈ ಬಾರಿ ಮತ್ತೆ ಹಾಗೆಯೇ ಆಗಿದೆ. ಕೊನೆಗೂ ಬಸ್ ದರ ಏರಿಕೆಗಳಲ್ಲಿ ಸ್ವಲ್ಪಮಟ್ಟಿನ ಇಳಿಕೆ ಮಾಡಲು ಅದು ಒಪ್ಪಿಕೊಳ್ಳಬೇಕಾಗಿ ಬಂದಿದೆ.

ಮಾರ್ಚ್ 18ರಿಂದ ಉಪ ಮುಖ್ಯಮಂತ್ರಿ ವಿಧಾನಸಭೆಯಲ್ಲಿ ಬಜೆಟ್ ಭಾಷಣ ಆರಂಭಿಸುವ ಮೊದಲು ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿ, ವಾಟಾಳ್ ಪಕ್ಷದ ಶಾಸಕ ವಾಟಾಳ್ ನಾಗರಾಜ್ ನಿಂತು ಬಜೆಟ್ ಮೊದಲೇ ಸಾರಿಗೆ ದರಗಳನ್ನು ವಿಪರೀತ ಏರಿಸಿದ್ದನ್ನು ಖಂಡಿಸಿ ದರಗಳನ್ನು ಇಳಿಸಿಯೇ ಮೇಲೆ ಬಜೆಟ್ ಮಂಡಿಸಿ ಎಂದು ಸತತ ಪ್ರತಿಭಟನೆ ನಡೆಸಿದರು. ನಂತರ ಶ್ರೀರಾಮ ರೆಡ್ಡಿಯವರೂ ಸೇರಿದಂತೆ ವಿರೋಧ ಪಕ್ಷಗಳ ಮುಖಂಡರ ಧರಣಿಗೆ ಮಣಿದ ಮುಖ್ಯಮಂತ್ರಿಗಳು ಮರುದಿನ ಪ್ರತಿ ಪಕ್ಷಗಳ ಮುಖಂಡರೊಂದಿಗೆ ಮಾತುಕತೆ ನಡೆಸಿದ ಫಲಿತಾಂಶವಾಗಿ ಸರಕಾರ ಮಾರ್ಚ್ 24ರಿಂದ ಪರಿಷ್ಕೃತ ದರಗಳನ್ನು ಜ್ಯಾರಿಗೆ ತರುವುದಾಗಿ ಒಪ್ಪಿಕೊಂಡಿದೆ.

ಮುಂಗಡ ಪತ್ರ ಮಂಡನೆಗೆ ಮೊದಲೇ ಬಸ್ ಪ್ರಯಾಣ ದರ ಏರಿಕೆ ಮಾಡಿರುವ ಸರಕಾರದ ಕ್ರಮವನ್ನು ವಿಧಾನಸಭೆಯಲ್ಲಿ ಸಿಪಿಐ(ಎಂ)ನ ಶ್ರೀರಾಮರೆಡ್ಡಿ, ವಾಟಾಳ್ ಪಕ್ಷದ ವಾಟಾಳ್ ನಾಗರಾಜ್, ರೈತ ಸಂಘದ ಪುಟ್ಟಣ್ಣಯ್ಯನವರು ಪ್ರತಿಭಟಿಸುತ್ತಿರುವುದು



ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

ಬೆಂಗಳೂರು

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಜನವಾದಿ ಮಹಿಳಾ ಸಂಘಟನೆ ಸುಮಂಗಲಿ ಸೇವಾಶ್ರಮ ಹಾಗೂ ಜಾಗೃತಿ ಮಹಿಳಾ ಅಧ್ಯಯನ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಮಾರ್ಚ್ 3ರಿಂದ ಮಾರ್ಚ್ 8ರವರೆಗೆ ಬೀದಿ ಬದಿ ಸಭೆಗಳನ್ನು ಹಾಗೂ ಬೀದಿ ನಾಟಕಗಳನ್ನು ಹಮ್ಮಿಕೊಳ್ಳಲಾಗಿತ್ತು. ಮಾರ್ಚ್ 3.3.97ರಂದು ಮೈಸೂರು ಬ್ಯಾಂಕ್ ಬಳಿ ಇರುವ ಶಾಲಾ ಆವರಣದಲ್ಲಿ ಬೀದಿ ನಾಟಕದ ಉದ್ಘಾಟನೆಯಾಯಿತು. ಮಹಿಳಾ ವಕೀಲರಾದ ಹೇಮಲತಾ ಮಹಿಷಿ ಸಭೆಯನ್ನು ಉದ್ಘಾಟಿಸಿ ಮಹಿಳಾ ಮೀಸಲಾತಿ ಕುರಿತಾದ ಸಂವಿಧಾನದ 81ನೇ ತಿದ್ದುಪಡಿಯನ್ನು ಅಂಗೀಕರಿಸಲು ವಿಫಲವಾಗಿರುವುದನ್ನು ಟೀಕಿಸಿ ಮೀಸಲಾತಿ ಮಹಿಳೆಯರನ್ನು ಮೇಲೆತ್ತಲು ಇಂದು ಅನಿವಾರ್ಯವಾಗಿದೆ ಎಂದು ಹೇಳಿದರು. ನಂತರ ಮೂರು ಸಂಘಟನೆಗಳ ಕಾರ್ಯಕರ್ತೆಯರು 'ನಾವು ಹಳಬರು ಕೇಳಿ, ನಾವೇ ಹೊಸ ಪೀಳಿಗೆ' ಎಂಬ ಬೀದಿ ನಾಟಕವನ್ನು ಮಾಡಿದರು.

ಮಾರ್ಚ್ 4ರ ಸಂಜೆ ನಗರದ ರಾಜಾಜಿನಗರದ ಬಡಾವಣೆಯಲ್ಲಿ ಬೀದಿ ನಾಟಕವನ್ನು ಮಾಡಲಾಯಿತು. ಮಾರ್ಚ್ 5ರಂದು ಇನ್ನೊಂದು ಬಡಾವಣೆ ಶ್ರೀನಗರದ ಬಸ್ ನಿಲ್ದಾಣದಲ್ಲಿ ಮಾರ್ಚ್ 8ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಪುರಭವನದ ಬಳಿ ಅಂತರಾಷ್ಟ್ರೀಯ ದಿನಾಚರಣೆಯನ್ನು ಆಚರಿಸಲಾಯಿತು. ಸಮಾರೋಪ ಸಮಾರಂಭಕ್ಕೆ ಹೇಮಲತಾ ಮಹಿಷಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿಧಾನಸಭಾ ಸದಸ್ಯರಾದ ಶ್ರೀರಾಮರೆಡ್ಡಿ ಆಗಮಿಸಿದ್ದರು. ಸ್ವಾಗತ ಹೇಮಲತಾ ಮಹಿಷಿ ಮಾತನಾಡಿ ಮಾರ್ಚ್ 8ರ ಔಚಿತ್ಯದ ಬಗ್ಗೆ ತಿಳಿಸುತ್ತಾ ಯಾವ ರಾಜಕೀಯ ಪಕ್ಷಗಳೂ ಶಾಸನಸಭೆಗಳಲ್ಲಿ ಮಹಿಳಾ ಮೀಸಲಾತಿ ಅಂಗೀಕರಿಸಲು ಸಮ್ಮತಿಸಲಿಲ್ಲ, ಮಹಿಳೆಯರೇ ಒಂದಾಗಿ ಮೀಸಲಾತಿಯನ್ನು ಪಡೆದುಕೊಳ್ಳಬೇಕಾಗಿದೆ ಎಂದು ಹೇಳುತ್ತಾ ಈ ಒಂದು ವ್ಯವಸ್ಥೆಯಲ್ಲಿ ಬಲಿ ಪಶು ಮಹಿಳೆ ಎಂದು ಹೇಳಿದರು.

'ನಾವು ಹಳಬರು ಕೇಳಿ, ನಾವೇ ಹೊಸ ಪೀಳಿಗೆ' ಎಂಬ ಬೀದಿ ನಾಟಕ ನಡೆಯಿತು. ನಂತರ ಶ್ರೀರಾಮ ರೆಡ್ಡಿಯವರು ಮಾತನಾಡಿ ಯಾವ ರಾಜಕೀಯ ಪಕ್ಷಗಳು ಶೇ. 33 ಮೀಸಲಾತಿಯನ್ನು ಅಂಗೀಕರಿಸಲು ಒಪ್ಪಲಿಲ್ಲ ಎಂಬ ಹೇಮಲತಾ ಮಹಿಷಿಯವರ ಮಾತನ್ನು ಪ್ರಸ್ತಾಪಿಸುತ್ತಾ ಮಹಿಳಾ ಮೀಸಲಾತಿಗೆ ಹೋರಾಟ ಮಾಡಿದ ವರೇ ಎಡಪಕ್ಷಗಳವರು ಎಂಬ ಸಂಗತಿಯನ್ನು ನೆನಪಿಸಿದರು. ಮಹಿಳೆಯರ ಐಕ್ಯ ಹೋರಾಟಕ್ಕೆ ಸಿಪಿಐ(ಎಂ) ಬೆಂಬಲವಿದೆ ಎಂಬ ಭರವಸೆಯನ್ನು ಪುನರುಚ್ಚರಿಸಿದರು.

ಗಾಯಿತ್ರಿ.ಎನ್. ಅವರ ವಂದನಾರ್ಪಣೆ ಮಾಡಿದರು.

ಶಿರಸಿ

ಇಂದು ಮಹಿಳೆಯರನ್ನು ಮರ್ಯಾದೆ ಎನ್ನುವ ಪರದೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಮುನ್ನಡೆಯದಂತೆ ಹಿಡಿದಿಟ್ಟಿದೆ ಎಂದು ಉಪನ್ಯಾಸಕಿ ವಿಜಯ ನಳಿನಿ ನುಡಿದರು. ಅವರು ಇಂದು ನಗರದಲ್ಲಿ ಅಂಗನವಾಡಿ ನೌಕರರ ಸಂಘ ಶಿರಸಿ, ಹಾಗೂ ವಿಮಾ ನೌಕರರ ಸಂಘ ಶಿರಸಿ, ಸಂಯುಕ್ತವಾಗಿ ಏರ್ಪಡಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನದ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ತಾನು ತನ್ನನ್ನು ರಕ್ಷಿಸಿಕೊಳ್ಳಬಲ್ಲೆ ಎನ್ನುವ ಮನೋಭಾವ ಬೆಳೆಯಲು ಸಂಘಟಿತರಾಗಿ ಹೋರಾಡುವುದು ಅವಶ್ಯಕವಾಗಿದೆ. ಮಹಿಳೆ ಹೊರ ಜಗತ್ತನ್ನು ತಿಳಿದುಕೊಳ್ಳುವುದಿಲ್ಲ, ಪತ್ರಿಕೆ ಓದುವುದಿಲ್ಲ, ಹೊಸ ವಿಚಾರಗಳನ್ನು ಗ್ರಹಿಸುವುದಿಲ್ಲ, ಕ್ಷುಲ್ಲಕ ವಿಚಾರಗಳಲ್ಲಿ ತೊಡಗುವುದು, ಇವೆಲ್ಲವನ್ನು ಬಿಟ್ಟು ಹೊರಬರುವುದು ಅವಶ್ಯಕ ಎಂದು ಡಾ|| ವಿಜಯ ನಳಿನಿಯವರು ನುಡಿದರು.

ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಡಿವೈಎಫ್‌ಐನ ಶಾಂತರಾಮ ನಾಯಕ ಭಾರತದಲ್ಲಿ ಅಪಾರ ಬಡತನ, ಕ್ರೂರ ಸಾಮಾಜಿಕ ಪದ್ಧತಿ, ಪುರುಷನ ಪಾಶವೀ ದಬ್ಬಾಳಿಕೆ, ಮಹಿಳೆಯನ್ನು ಅಕ್ಷರಶಃ ಒಂದು ಭಾರ ಹೊರುವ ಹೇಸರಗತ್ತೆಯನ್ನಾಗಿ ಮಾಡಿದೆ ಎಂದರು. ಮತ್ತು ಲೋಕಸಭೆಯಲ್ಲಿ ಮತ್ತು ವಿಧಾನ ಸಭೆಯಲ್ಲಿ ಶೇ 33 ಮಹಿಳಾ ಮೀಸಲಾತಿ ಮಸೂದೆಗೆ ಈ ಲೋಕಸಭಾ ಅಧಿವೇಶದಲ್ಲಿಯೇ ಒಪ್ಪಿಗೆ ಪಡೆಯಬೇಕೆಂದು ಒತ್ತಾಯಿಸಿದರು.

ಸಭೆಯ ಅಧ್ಯಕ್ಷತೆಯನ್ನು ಅಂಗನವಾಡಿ ನೌಕರರ ಸಂಘದ ಪದ್ಮಾವತಿ ಭಟ್ಟ ವಹಿಸಿದ್ದರು. ಹೇಮಾವತಿ ಭಟ್ಟ ಸ್ವಾಗತಿಸಿದರು. ಮಹಿಳಾ ದಿನಾಚರಣೆಯ ಇತಿಹಾಸದ ಕುರಿತು ಸುಜಾತ ಮಡಿವಾಳ ಪ್ರಸ್ತಾಪಿಸಿದರು. ವಿಮಾ ನೌಕರರ ಸಂಘದ ಕಾರ್ಯದರ್ಶಿ ಜೆ.ವಿ.ಪೈ ಅವರು ವಂದಿಸಿದರು.

ಪುರುಷರ ಗೋಸುಂಬೆತನ ಖಂಡನೆ

ಅಂತರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಜನವಾದಿ ಮಹಿಳಾ ಸಂಘಟನೆ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಹಮ್ಮಿಕೊಂಡಿದ್ದ ಸಂವಾದ ಹೊಸ ಚರ್ಚೆಗೆ ದಾರಿ ಮಾಡಿತು. ಶಾಸನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಬೇಕ ಬೇಕೆಂಬ ಅಭಿಪ್ರಾಯ ವ್ಯಕ್ತವಾಯಿತು.

ಮಹಿಳೆಯರಿಗೆ ರಾಜಕೀಯದಲ್ಲಿ ಮೀಸಲಾತಿ ಅಗತ್ಯ ಆದರೆ ಸೂಕ್ತ ಅಭ್ಯರ್ಥಿಗಳಿಲ್ಲ ಎಂದು ರಾಜಕೀಯ ಪಕ್ಷಗಳು ಅಭಿಪ್ರಾಯಪಟ್ಟರೆ, ಸೂಕ್ತ ಮಹಿಳಾ ಅಭ್ಯರ್ಥಿಗಳು ಇಲ್ಲ ಎಂದ ಪಕ್ಷಗಳ ಮುಖಂಡರನ್ನು ವಿವಿಧ ಸಂಘಟನೆಗಳ ಗಣ್ಯರು ತರಾಟೆಗೆ ತೆಗೆದುಕೊಂಡರು.

ಜನವಾದಿ ಮಹಿಳಾ ಸಂಘಟನೆಯ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಅಂತರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ 'ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿ' ಕುರಿತು ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಜಿಲ್ಲೆಯ ವಿವಿಧ ಸಂಘಟನೆಗಳ ಮುಖಂಡರು ಬರಹಗಾರರೊಂದಿಗೆ ಏರ್ಪಟ್ಟಿದ್ದ ಚರ್ಚೆ ಹಲವು ವಿಷಯಗಳ ಮೇಲೆ ಬೆಳಕು ಚೆಲ್ಲಿತು.

ಪುರುಷರು ಮಹಿಳೆಯರಿಬ್ಬರಿಗೂ ಮತದಾನದಲ್ಲಿ ಸಮಾನ ಅವಕಾಶ ನೀಡಿರುವಾಗ ರಾಜಕೀಯದಲ್ಲಿ ಈ ಸಮಾನತೆ ಏಕಿಲ್ಲ ಎಂದು ಕಾಂಗ್ರೆಸ್‌ನ ಮಹಿಳಾ ವಿಭಾಗದ ಅಧ್ಯಕ್ಷೆ ಪ್ರಭಾದೇವಿ ಪ್ರಶ್ನಿಸಿದರು. ಗೆಲ್ಲಲು ಮಹಿಳೆಯರ ಮತಗಳ ಮೇಲೆ ಕಣ್ಣಿಡುವ ರಾಜಕಾರಣಿಗಳಿಗೆ ಮಹಿಳೆ ರಾಜಕೀಯ ಪ್ರವೇಶಿಸುವುದು ಮಾತ್ರ ಏಕೆ ಬೇಡ ಎಂದು ಆಶ್ಚರ್ಯ ವ್ಯಕ್ತಪಡಿಸಿದರು.



ಮೀಸಲಾತಿ ಎಂಬುದು ಭಾರತದ ಮಹಿಳೆಯರ ಸಮಸ್ಯೆ ಮಾತ್ರವಾಗಿಲ್ಲ. ಇಡಿ ವಿಶ್ವದ ಸಮಸ್ಯೆಯಾಗಿದೆ. ಎಷ್ಟೋ ರಾಷ್ಟ್ರಗಳಲ್ಲಿ ಇನ್ನೂ ಮಹಿಳೆಯರಿಗೆ ಮತದಾನದ ಹಕ್ಕೂ ಇಲ್ಲದಂತಹ ಪರಿಸ್ಥಿತಿ ಇದೆ. ಮೀಸಲಾತಿ, ಮತದಾನದ ಹಕ್ಕು ಎರಡೂ ಇಂದಿನ ತುರ್ತು ಅಗತ್ಯ.

ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಎಷ್ಟು ಮಹಿಳೆಯರು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ್ದರು. ಆದರೆ ಮಹಿಳೆಯರಿಗೆ ಈಗ ಅವಕಾಶವೇ ಸಿಗದಂತಾಗಿದೆ. ವಿಜ್ಞಾನಯುಗ ಬರುತ್ತಿದ್ದಂತೆ, ವಿಚಾರಗಳು ವಿಶಾಲವಾಗುತ್ತಾ ಹೋಗಬೇಕು. ಬದಲಿಗೆ ವಿಚಾರಗಳು ಸಂಕುಚಿತಗೊಳ್ಳುತ್ತಿವೆ ಎಂದರು.

ಗೋಸುಂಬೆಗಳು: ಪುರುಷರು ಸಂಕುಚಿತ ಮನೋಭಾವವನ್ನು ತೊಡೆಯಬೇಕೆಂದು ರಾಷ್ಟ್ರಪತಿಗಳು ಕರೆ ನೀಡುತ್ತಿರುವಾಗಲೇ ಸಂಸತ್ತಿನಲ್ಲಿ ಮೀಸಲಾತಿ ವಿಷಯದಲ್ಲಿ ಪುರುಷರು ಗೋಸುಂಬೆಗಳಂತೆ ವರ್ತಿಸುತ್ತಿದ್ದಾರೆ. ಮಹಿಳೆಯರಿಗೆ ಮೀಸಲಾತಿ ನೀಡದವರು ಇನ್ನು ಹರಿಜನ ಗಿರಿಜನರಿಗೆ ಮೀಸಲಾತಿ ಕೊಟ್ಟಾರೆಯೆ? ಬಡವರು, ಹಿಂದುಳಿದವರ ಬಗ್ಗೆ ಮಾತನಾಡುವವರು ಬಂದರೆ ಮಾತ್ರ ಮಹಿಳೆಯರ ಪರವಾದ ಕೆಲಸಗಳೂ ನಡೆಯುತ್ತವೆ ಎಂದರು.

ಮಹಿಳೆಯರಲ್ಲಿ ವಿದ್ಯಾವಂತರೂ, ಪ್ರತಿಭೆ ಉಳ್ಳವರೂ ಇದ್ದಾರೆ. ಆದರೆ ಅವರಿಗೆ ಸೂಕ್ತ ಅವಕಾಶ ಸಿಗದೆ ಅವರ ಪ್ರತಿಭೆ ನಾಲ್ಕು ಕೋಣೆ ಮಧ್ಯೆಯೇ ಸೋರಿಹೋಗುತ್ತಿದೆ ಎಂದು ವಿಷಾದಿಸಿದರು.

ಸಿಪಿಎಂ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್ ಮಾತನಾಡಿ ಮೀಸಲಾತಿ ಬೇಕು ಎಂದು ದನಿ ಎತ್ತಲು ಸ್ವಾತಂತ್ರ್ಯ ಸಿಕ್ಕಿ 50 ವರ್ಷಗಳ ನಂತರ ಮಹಿಳೆಯರಿಗೆ ಅವಕಾಶ ನೀಡಲಾಯಿತು. ದೀರ್ಘ ಕಾಲ ಅಧಿಕಾರದ ಚುಕ್ಕಾಣಿ ಹಿಡಿದ ಪ್ರಮುಖ ಪಕ್ಷಗಳು ದೇಶದ ಮಹಿಳೆಯರ ಬಗ್ಗೆ ಕಿಂಚಿತ್ತೂ ಕಾಳಜಿ ವಹಿಸಲಿಲ್ಲ ಎಂದು ಟೀಕಿಸಿದರು.

ಮಹಿಳೆ ಎಲ್ಲಿದ್ದಾಳೆ?: ಜನತಾದಳ ಮತ್ತು ಬಿಜೆಪಿಯ ಮುಖಂಡರು ಮೀಸಲಾತಿಗೆ ಸಂಪೂರ್ಣ ಬೆಂಬಲ ಸೂಚಿಸಿದರೂ ಸಹ ರಾಜಕಾರಣಕ್ಕೆ ಬರಲು ಶಕ್ತಳಿರುವ ಮಹಿಳೆ ಎಲ್ಲಿದ್ದಾಳೆ ಎಂದು ಪ್ರಶ್ನಿಸಿದರು.

ಜನತಾದಳ ಜಿಲ್ಲಾ ಉಪಾಧ್ಯಕ್ಷ ಸುರೇಶ್ ಬಲ್ಲಾಳ್ ಅವರು ಗಂಡಸರಷ್ಟೇ ಜನಸಂಖ್ಯೆ ಇರುವ ಮಹಿಳೆಯರಿಗೆ ಕೇವಲ 33% ಮೀಸಲಾತಿ ಅಲ್ಲ ಶೇ50ರಷ್ಟು ಮೀಸಲಾತಿ ಸಿಗಬೇಕು. ಆದರೆ ಇಂದು ಮಹಿಳೆಯರು ರಾಜಕೀಯ ರಂಗಕ್ಕೆ ಬರುತ್ತಿಲ್ಲ. ಹೀಗಿರುವಾಗ ಮೀಸಲಾತಿ ನೀಡುವ ಪ್ರಶ್ನೆ ಎಲ್ಲಿ ಎಂದರು.

ಈ ಮಾತುಗಳನ್ನು ಬೆಂಬಲಿಸಿದ ಬಿಜೆಪಿಯ ನಾರಾಯಣ ಶೆಟ್ಟಿ ಅವರು ಬಿಜೆಪಿ ವಿಭಾಗ ಮಟ್ಟದಿಂದ ರಾಷ್ಟ್ರ ಮಟ್ಟದವರೆಗೆ ಮಹಿಳೆಯರಿಗೆ ಮನ್ನಣೆ ನೀಡಿದೆ. ಇಂತಿಷ್ಟು ಮಹಿಳೆಯರು ಇರಲೇಬೇಕು ಎಂದು ಬಿಜೆಪಿ ತನ್ನ ಸಂವಿಧಾನದಲ್ಲಿ ತಿಳಿಸಿದೆ. ಮಹಿಳಾ ಅಭ್ಯರ್ಥಿಗಳು ಸಿಗುವುದೇ ಕಷ್ಟ. ಓದು ಬರಹ ಬರದ ಮಹಿಳೆಯರಿದ್ದರೆ ಏನು ಪ್ರಯೋಜನ? ಎಂದರು.

ಪರ್ತಕರ್ತ ಇಸ್ಮಾಯಿಲ್ ಅವರು ಪ್ರತಿಕ್ರಿಯೆ ನೀಡಿ ರಾಜಕೀಯ ಪಕ್ಷಗಳಿಗೆ ತಮ್ಮ ಮಾತನ್ನು ಕೇಳುವ ಮಹಿಳಾ ಅಭ್ಯರ್ಥಿಗಳು ಸಿಗುತ್ತಿಲ್ಲ ಅಷ್ಟೇ. ಆದರೆ ಪ್ರತಿಭಾವಂತ ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ ಎಂದರು.


ಬಿಜೆಪಿಯು ತನ್ನ ಸಂವಿಧಾನದಲ್ಲಿ ಮಹಿಳೆಗೆ ಸಾಕಷ್ಟು ಮೀಸಲಾತಿ ಕೊಟ್ಟಿದ್ದರೂ ಸಹ ಆ ಪಕ್ಷಕ್ಕೆ ಮಹಿಳಾ ಅಭ್ಯರ್ಥಿಗಳು ಯಾಕೆ ಸಿಗುತ್ತಿಲ್ಲ. ಮೀಸಲಾತಿ ಮಸೂದೆ ಸಂಸತ್ತಿನಲ್ಲಿ ಚರ್ಚೆಯಾಗುವ ವೇಳೆ ಪಕ್ಷದ ಸಂಸತ್ ಸದಸ್ಯರಿಗೆ ಹಾಜರಿರಬೇಕೆಂದು ಏಕೆ ಗೊತ್ತಾಗುವುದಿಲ್ಲ? ಎಂದು ಜೀವವಿಮಾ ನಿಗಮದ ನೌಕರರ ಸಂಘದ ಪ್ರಾದೇಶಿಕ ಕಾರ್ಯದರ್ಶಿ ನಾಗೇಶ್ ಕುಮಾರ್ ಪ್ರಶ್ನಿಸಿದರು.

ಕರ್ನಾಟಕ ಲೇಖಕಿಯರ ಮತ್ತು ವಾಚಕಿಯರ ಸಂಘದ ಕಾರ್ಯದರ್ಶಿ ಗುಲಾಬಿ ಬಿಳಿಮಲೆ ಅವರು ಎಲ್ಲಾ ಪಕ್ಷಗಳೂ ಮಹಿಳಾ ಮೀಸಲಾತಿಗೆ ಸಂಬಂಧಿಸಿದಂತೆ ಒಂದೇ ಧೋರಣೆ ಹೊಂದಿವೆ ಎಂದು ಟೀಕಿಸಿದರು. ಮಾಜಿ ಮೇಯರ್ ಯೂನಿಸ್ ಬ್ರಿಟೋ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಮಾಧವ, ಡಿವೈಎಫ್‌ಐ ಜಿಲ್ಲಾ ಅಧ್ಯಕ್ಷ ಕೃಷ್ಣಪ್ಪ ಕೊಂಚಾಡಿ, ವಿಮರ್ಶಕ ಕೆ.ಫಣಿರಾಜ್, ಲೇಖಕಿ ಲಲಿತಾ ರೈ, ದಲಿತ ಸಂಘರ್ಷ ಸಮಿತಿಯ ಅಧ್ಯಕ್ಷ ರೋಹಿತಾಕ್ಷ, ಸಿದ್ಧರಾಜು ಅವರು ಚರ್ಚೆಯಲ್ಲಿ ಭಾಗವಹಿಸಿದ್ದರು. ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಅಧ್ಯಕ್ಷೆ ಸತ್ಯಾ. ಎಸ್ ಮಾತನಾಡಿದರು. ಮಂಜುಳಾ ಸುಕುಮಾರ್ ಸ್ವಾಗತಿಸಿದರು. ಪದ್ಮಾವತಿ ಶೆಟ್ಟಿ ವಂದಿಸಿದರು.

ಯುವಜನ ಯಶಸ್ವಿ ಡಿವೈಎಫ್‌ಐನ ಕೋಲಾರ ಜಿಲ್ಲಾ 6ನೇ ಯುವಜನ ಸಮ್ಮೇಳನ

ಇಂದಿನ ಶಿಕ್ಷಣ ಪದ್ಧತಿಯ ಲೋಪ ದೋಷಗಳಿಂದ ಸಮಗ್ರ ಭಾರತದ ಅಭಿವೃದ್ಧಿಯಾಗದೆ ಅಸಮಗ್ರವಾಗಿ ಚಿಂದಿ ಚಿಂದಿಯಾಗಿದ್ದು, ಶಿಕ್ಷಣದಲ್ಲಿನ ಈ ಕೊರತೆಯಿಂದಲೇ ದೇಶ ಅಧಃ ಪತನದ ಅಂಚಿಗೆ ಸಾಗಿರುವುದು ಮತ್ತು ಜಾತಿ ವ್ಯವಸ್ಥೆ ಮೇಲಾಗಿ ಅಸಮಾನತೆ ಬೆಳೆಯುತ್ತಿರುವುದು, ಇದರ ವಿರುದ್ಧ ಹೋರಾಡಬೇಕೆಂದು ಫೆ 23 ರಂದು ಖ್ಯಾತ ಪ್ರಗತಿಪರ ಚಿಂತಕರು, ಸಿನಿಮಾ ನಟರೂ ಆದ ಜಿ.ಕೆ.ಗೋವಿಂದರಾವ್‌ರು ಸಮ್ಮೇಳನವನ್ನು ಉದ್ಘಾಟನೆ ಮಾಡುತ್ತಾ ಯುವಜನತೆಗೆ ಕರೆ ಇತ್ತರು.

ಮುಖ್ಯ ಅತಿಥಿಗಳಾಗಿಮಾತನಾಡಿದ ರಂಗಾರೆಡ್ಡಿ ಕೋಡಿರಂಗಪ್ಪ ಯುವಜನತೆಯನ್ನು ದೇಶದ ಅಭಿವೃದ್ಧಿ ಕಾರ್ಯಗಳಲ್ಲಿ ಪರಿಣಾಮಕಾರಿಯಾಗಿ ಬಳಸುವುದು ಸಾಧ್ಯವಾಗುತ್ತಿಲ್ಲ ಎಂದರು. ಡಿವೈಎಫ್‌ಐನ ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್ ನಿರುದ್ಯೋಗ ಸಮಸ್ಯೆಯ ಕುರಿತು ಮಾತನಾಡಿದರು. ದಲಿತ ಸಂಘಟನೆಯ ಡಿಎಸ್‌ಎಸ್ ಮುಖಂಡರಾದ ಬಿ.ಗಂಗಾಧರಮೂರ್ತಿ ಸಹ ಅತಿಥಿಯಾಗಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ|| ರಂಗಾರೆಡ್ಡಿ ಕೋಡಿರಾಂಪುರ (ಖ್ಯಾತ ಪ್ರಗತಿಪರ ಬರಹಗಾರರು) ವಹಿಸಿ ಮಾತನಾಡಿ ಬಹುತೇಕ ರಾಜಕೀಯ ನಾಯಕರು ಅಕ್ಷರ ಸಂಸ್ಕೃತಿಯ ದ್ವೇಷಿಗಳಾಗಿರುವುದರಿಂದ ಅನೈಕ್ಯತೆ, ಅಸಮಗ್ರತೆ, ಅಪರಿಪೂರ್ಣತೆ ಬೆಳೆಯಲು ನೆರವು ನೀಡುತ್ತಿದ್ದಾರೆಂದರು. ಪ್ರಾಸ್ತಾವಿಕ ಭಾಷಣವನ್ನು ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಎಂ.ವಿ. ನಾರಾಯಣಸ್ವಾಮಿ ಮಾಡಿದರು.



ಪ್ರಾರಂಭದಲ್ಲಿ ಯುವಜನ ರ್‍ಯಾಲಿ ನ್ಯಾಷನಲ್ ಕಾಲೇಜು ವೃತ್ತದಿಂದ ಪ್ರಾರಂಭಗೊಂಡು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಸಮ್ಮೇಳನದ ಆವರಣ, ನ್ಯಾಷನಲ್ ಕಾಲೇಜು ಹಾಸ್ಟಲ್ ಆವರಣಕ್ಕೆ ಬಂದು ಸೇರಿತು.

ರಾವಿನದಿಯ ದಂಡೆಯಲ್ಲಿ: ಸಮ್ಮೇಳನದ ಅಂಗವಾಗಿ ಕೆಜಿಎಫ್ ಸಮುದಾಯ ತಂಡ "ಕೋಲಾರ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ" ರಾವಿ ನದಿಯ ದಂಡೆಯಲ್ಲಿ ನಾಟಕವನ್ನು ಪ್ರದರ್ಶಿಸಿತು. ನಾಟಕದ ಆರಂಭದಲ್ಲಿ ಪ್ರಾಸ್ತವಿಕವಾಗಿ ಮಾತನಾಡಿದ ಡಿವೈಎಫ್‌ಐ ಸ್ಥಾಪನಾ ಮುಖಂಡರೂ ಶಾಸಕರೂ ಆದ ಜಿ.ವಿ.ಶ್ರೀರಾಮ ರೆಡ್ಡಿಯವರು "ದೇಶದ ಸಮಗ್ರತೆ ಕಾಪಾಡಲು ಯುವಕರು ಒಂದಾಗಬೇಕೆಂದು ದೇಶವನ್ನು ಇಬ್ಭಾಗ ಮಾಡಿದ ಮತಾಂಧ ಶಕ್ತಿಗಳು ಸ್ವಾತಂತ್ರ ಬಂದ ಮೇಲೆ ಇನ್ನು ಹೆಚ್ಚು ಹೆಚ್ಚಾಗಿ ಸಂಘಟನೆಗೊಳ್ಳುತ್ತಿದ್ದು ಜನಾಂಗ, ವರ್ಣ, ಭಾಷೆ, ದೇಶಗಳ ಹೆಸರಿನಲ್ಲಿ ಜನ ಸಾಮಾನ್ಯರ ಸಾಮರಸ್ಯವನ್ನು ಸಾಮರಸ್ಯ ಸ್ಥಿತಿಯಿಂದ ಒಡೆಯುತ್ತಿದೆ. ಇವುಗಳನ್ನು ಅರ್ಥ ಮಾಡಿಕೊಂಡು ಇಂದಿನ ಯುವಕರು ಭಾವೈಕ್ಯತೆಯಿಂದ ಕೋಮುಸಾಮರಸ್ಯದಿಂದ ದೇಶದ ಸಮಗ್ರತೆ ಕಾಪಾಡಲು ಪಣ ತೊಡಬೇಕೆಂದರು. ಸಂಗೀತ, ಕಲೆ, ಸಾಂಸ್ಕೃತಿಕ ಚಟುವಟಿಕೆಗಳು ಈ ನಿಟ್ಟಿನಲ್ಲಿ ಶ್ರಮಿಸಬೇಕು. ಕೆಜಿಎಫ್ ಸಮುದಾಯ ತಂಡದವರು ಪ್ರದರ್ಶಿಸಿದ 'ರಾವಿ ನದಿ ದಂಡೆಯಲ್ಲಿ' ನಾಟಕ ಜನಪರವಾದ ಕೋಮು ಸಾಮರಸ್ಯ ಉಂಟು ಮಾಡುವುದರಲ್ಲಿ ಸಂಶಯವಿಲ್ಲ ಎಂದರು. ನಿರ್ದೇಶನವನ್ನು ಅಚುತ್ ನಿರ್ವಹಿಸಿದರು.

ಪ್ರತಿನಿಧಿ ಅಧಿವೇಶನ: ಫೆ21 ರಿಂದ 23 ತನಕ ಒಟ್ಟು ಮೂರುದಿನಗಳ ಕಾಲ ನಡೆದ ಈ ಸಮ್ಮೇಳನವು ಹೋರಾಟದ ಅಗತ್ಯತೆ, ಸಂಘಟನೆಯ ಅವಶ್ಯಕತೆ, ಸೈದ್ಧಾಂತಿಕ ನೆಲೆಯನ್ನು ಗುರಿತಿಸುವ ವಿಚಾರದ ಬಗ್ಗೆ "ಜಿಲ್ಲೆಯ ಸಮಗ್ರ ಅಭಿವೃದ್ಧಿಯ ಪೂರಕ ಉದ್ಯೋಗ ಅವಕಾಶಗಳ ಸೃಷ್ಟಿ ಕುರಿತು ಚರ್ಚೆ ನಡೆಯಿತು.

"ಡಿವೈಎಫ್‌ಐ ಸಂಘಟನೆ" ತರಗತಿಯನ್ನು ಎಐಕೆಎಸ್‌ನ ರಾಜ್ಯ ಮುಖಂಡರಾದಜಿ.ಸಿ.ಬಯ್ಯಾರೆಡ್ಡಿಯವರು ಮಾಡಿದರು. 'ಸಂವಿಧಾನ ಮತ್ತು ಕಾರ್ಯಕ್ರಮ' ತರಗತಿಯನ್ನು ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಗುರುಶಾಂತ್ ನೀಡಿದರು.

ಸದಸ್ಯತ್ವ ನೊಂದಾವಣೆ, ಪ್ರಾಥಮಿಕ ಘಟಕ ರಚನೆ ಮತ್ತು ಪ್ರಜಾಸತ್ತಾತ್ಮಕವಾಗಿ ಘಟಕವನ್ನು ನಡೆಸುವುದು, ಹೋರಾಟಗಳನ್ನು ರೂಪಿಸುವುದು, ವೈವಿದ್ಯಮಯ ಕಾರ್ಯಕ್ರಮಗಳನ್ನು ಸಂಘಟಿಸುವುದು, ವಿವಿಧ ಸಮಿತಿಗಳೊಂದಿಗೆ ಸಂಬಂಧ, ಪತ್ರ ವ್ಯವಹಾರ, ಡಾಕುಮೆಂಟೇಷನ್ ಈ ಐದು ವಿಚಾರಗಳ ಬಗ್ಗೆ ಸಂಘಟನೆ ವಿಸ್ತರಣೆ ಮತ್ತು ಕ್ರೋಢೀಕರಣದಲ್ಲಿ ಹೇಗೆ ಪರಿಣಾಮಕಾರಿಯಾಗಿ ಬಳಸಬೇಕು ಎಂದು ಪ್ರತಿನಿಧಿಗಳು 5 ತಂಡಗಳಾಗಿ ಒಂದೊಂದು ಆಯೋಗವು ಗಂಭೀರ ಚರ್ಚೆ, ಚಿಂತನೆ ನಡೆಸಿ ವರದಿ ಮಾಡಿತು.

ಬೆಂಗಳೂರಿನಲ್ಲಿ ರೈತ-ಕಾರ್ಮಿಕರ ವರ್ಣರಂಜಿತ ರ್‍ಯಾಲಿ

ಈಗ ಕರ್ನಾಟಕದ ಕಾರ್ಮಿಕ ಆಂದೋಲನದಲ್ಲಿ ಪ್ರಥಮ ಸ್ಥಾನ ಪಡೆದಿರುವ ಸಿಐಟಿಯುನ 7ನೇ ರಾಜ್ಯ ಸಮ್ಮೇಳನದ ಕೊನೆಯಲ್ಲಿ ಮಾರ್ಚ್ 16ರಂದು ಬೆಂಗಳೂರಿನಲ್ಲಿ ಒಂದು ವರ್ಣರಂಜಿತ ಮೆರವಣಿಗೆ ಹಾಗೂ ಬೃಹತ್ ಬಹಿರಂಗ ಸಭೆ ನಡೆಯಿತು. ಸಿಐಟಿಯುವಿನ ರಾಜ್ಯ ಅಧ್ಯಕ್ಷ ಎಸ್. ಸೂರ್ಯನಾರಾಯಣರಾವ್ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ವಿಜೆಕೆನಾಯರ್ ಸಮ್ಮೇಳನದ ನಿರ್ಣಯಗಳನ್ನು ಹಾಗೂ ಸಮ್ಮೇಳನ ರೂಪಿಸಿರುವ ಹೋರಾಟ ಕಾರ್ಯಕ್ರಮವನ್ನು ವಿವರಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಜಗನ್ನಾಥ್ ಹಾಗೂ ಸಿಪಿಐ(ಎಂ)ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರ ರಾವ್ ಅವರು ಮಾತನಾಡಿ ಸಿಐಟಿಯು ಹಮ್ಮಿಕೊಂಡಿರುವ ಹೋರಾಟದ ಕಾರ್ಯಕ್ರಮಗಳಿಗೆ ಬೆಂಬಲ ವ್ಯಕ್ತಪಡಿಸಿದರು.

ವಳ್ಳಿಯಪ್ಪ ಟೆಕ್ಸ್‌ಟೈಲ್ ಕಾರ್ಮಿಕರ ಹೋರಾಟದ ಸಂದರ್ಭದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜೆಕೆ.ನಾಯರ್ ಮತ್ತು ಇತರರ ಮೇಲೆ ಹಾಕಿರುವ ಸುಳ್ಳು ಅಪಾದನೆಗಳನ್ನು ಹಿಂತೆಗೆದುಕೊಳ್ಳಬೇಕು ಹಾಗೂ ಅವರ ಓಡಾಟಕ್ಕೆ ತಡೆಒಡ್ಡಿ ಹಾಕಲಾದ ಷರತ್ತುಗಳನ್ನು ಕೂಡಲೇ ರದ್ದು ಮಾಡಬೇಕು ಎಂದು ಒತ್ತಾಯಿಸಿ ಎಲ್ಲಾ ಕಾರ್ಮಿಕ ಸಂಘಗಳು ಮುಖ್ಯಮಂತ್ರಿಗಳಿಗೆ ತಂತಿಸಂದೇಶದ ಮೂಲಕ ಒತ್ತಾಯಿಸಲು ನಿರ್ಧರಿಸಲಾಯಿತು.

ಇದಕ್ಕೆ ಮೊದಲು 4 ದಿನ ನಡೆದ ಪ್ರತಿನಿಧಿ ಅಧಿವೇಶನ ಐಟಿಸಿ ಕಾರ್ಮಿಕರು ಹೊಸದಾಗಿ ಕಟ್ಟಿಸಿದ ಬಿ.ಟಿ.ಆರ್.ಭವನದಲ್ಲಿ ನಡೆಯಿತು. ರಾಜ್ಯದ ಎಲ್ಲಾ ಜಿಲ್ಲೆಗಳಿಂದ 250 ಪ್ರತಿನಿಧಿಗಳು ಭಾಗವಹಿಸಿದ್ದರು. ಅವರಲ್ಲಿ 60 ಜನ ಮಹಿಳೆಯರು 1992 ರಲ್ಲಿ ನಡೆದ 6ನೇ ರಾಜ್ಯ ಸಮ್ಮೇಳನದ ನಂತರ ರಾಜ್ಯಾದ್ಯಂತ ಸಿಐಟಿಯು ಸಂಯೋಜಿತ ಕಾರ್ಮಿಕ ಸಂಘಗಳು ನಡೆಸಿದ ಹೋರಾಟಗಳ ಮತ್ತು ಇತರ ಚಟುವಟಿಕೆಗಳ ವಿಮರ್ಶಾತ್ಮಕ ವರದಿಯನ್ನು ಪ್ರಧಾನ ಕಾರ್ಯದರ್ಶಿಗಳು ಮಂಡಿಸಿದರು. ಇದರ ಮೇಲೆ ಕೂಲಂಕುಷವಾದ ಚರ್ಚೆಯ ನಂತರ ಕೆಲವು ತಿದ್ದುಪಡಿಗಳೊಂದಿಗೆ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಸಮ್ಮೇಳನ ಅಂಗೀಕರಿಸಿದ 20 ಬೇಡಿಕೆಗಳ ಮೇಲಿನ ಹೋರಾಟದ ಮುಖ್ಯ ನಿರ್ಣಯದ ಬಗ್ಗೆ ಈಗಾಗಲೇ ನೀವು ಕಳೆದ ಸಂಚಿಕೆಯಲ್ಲಿ ಓದಿರುವಿರಿ ಇದಲ್ಲದೆ ಮಾರ್ಚ್ 27 ರಂದು ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯು ಕರೆಯಂತೆ ಕೇಂದ್ರ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ನಡೆಸಲಾಗುವ ರಸ್ತೆತಡೆ-ರೈಲುತಡೆ ಕಾರ್ಯಕ್ರಮಕ್ಕೆ, ಏಪ್ರಿಲ್ 25 ಸಾರ್ವಜನಿಕ ವಲಯದ ಕಾರ್ಮಿಕರ ಮುಷ್ಕರಕ್ಕೆ ಹಾಗೂ ಏಪ್ರಿಲ್ 4ರ ಬ್ಯಾಂಕ್ ನೌಕರರ ಮುಷ್ಕರಕ್ಕೆ ಸಮ್ಮೇಳನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿತು.

ಬೆಂಗಳೂರಿನಲ್ಲಿ ಎಲ್‌ಅಂಡ್‌ಟಿ ಕಾರ್ಖಾನೆ, ಜಿಎಫ್‌ಡಬ್ಲ್ಯೂ ಕಾರ್ಖಾನೆ ಕಾರ್ಮಿಕರು ನಡೆಸುತ್ತಿರುವ ಮುಷ್ಕರಗಳಿಗೆ ಸಮ್ಮೇಳನ ಬೆಂಬಲ ವ್ಯಕ್ತಪಡಿಸಿತು. ಕೋರಮಂಗಲದ ಕೃಪಾನಿಧಿ ಕಾಲೇಜು ವಿದ್ಯಾರ್ಥಿಗಳ ಮುಷ್ಕರಕ್ಕೂ ಬೆಂಬಲ ವ್ಯಕ್ತಪಡಿಸಿತು. ಅಂಗನವಾಡಿ ಕಾರ್ಯಕರ್ತೆಯರನ್ನು ಅವಮಾನಿಸಿ ಕೋ.ಚನ್ನಬಸಪ್ಪನವರು ನೀಡಿರುವ ಹೇಳಿಕೆಯನ್ನು ಖಂಡಿಸಿ, ಶಾಸನ ಸಭೆಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿ ಆಗ್ರಹಿಸಿ, ವಿದೇಶಗಳಿಂದ ಕಾಫಿ ಆಯಾತ ಮಾಡಲು ಮುಕ್ತ ಅವಕಾಶ ನೀಡುವ ಪ್ರಸ್ತಾಪವನ್ನು ವಿರೋಧಿಸಿ ಹಾಗೂ ಪರಿಸರ ರಕ್ಷಣೆಯ ಹೆಸರಿನಲ್ಲಿ ಘನ ಕೈಗಾರಿಕೆಗಳ ಸ್ಥಾಪನೆಯನ್ನು ತಡೆಯುವ ಪ್ರಯತ್ನದ ವಿರುದ್ಧ ಪ್ರತ್ಯೇಕ ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.□

ಸಿಐಟಿಯು ಮುಂದಿಟ್ಟಿರುವ ಒತ್ತಾಯಗಳು

1. ಸಾಮಾನ್ಯ ಜನತೆಯ ಸಂಚಾರ ಸ್ವಾತಂತ್ರ್ಯವನ್ನೇ ಮೊಟಕುಗೊಳಿಸಿರುವ ಬಸ್ ಪ್ರಯಾಣ ದರ ಹೆಚ್ಚಳವನ್ನು ಕೈ ಬಿಡಬೇಕು
2. ಬೀಡಿ ಕಾರ್ಮಿಕರಿಗಾಗಿ ಪರಿಷ್ಕರಿಸಿ ಪ್ರಕಟಿಸಲಾದ ಕನಿಷ್ಟ ವೇತನ ದರಗಳ ವಿರುದ್ಧ ಬೀಡಿ ಕಾರ್ಮಿಕರು ನ್ಯಾಯಾಲಯದಿಂದ ಪಡೆದುಕೊಂಡಿರುವ ತಡೆಯಾಜ್ಞೆಯನ್ನು ತೆರವು ಮಾಡಿಸಲು ಸರಕಾರ ಮುಂದಾಗಬೇಕು.
3. ತೋಟ ಕಾರ್ಮಿಕರಿಗೆ 1996 ರಲ್ಲಿ ಕನಿಷ್ಟ ವೇತನವನ್ನು ಪರಿಷ್ಕರಿಸುವಾಗ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು
4. ಹಂಚು ಕಾರ್ಮಿಕರ ಕನಿಷ್ಟ ವೇತನವನ್ನು ತಕ್ಷಣ ಪರಿಷ್ಕರಿಸಿ ಸರಿಪಡಿಸಬೇಕು.
5. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರಿಗೆ ಕೆಲಸ ಒದಗಿಸಲಾಗದ ದಿನಗಳಿಗೆ ಗ್ಯಾರಂಟೆಡ್ ವೇತನ ನೀಡಬೇಕು ಹಾಗೂ 1994 ರಿಂದ ಬಾಕಿ ಇರುವ ತುಟ್ಟಿ ಭತ್ತೆಯನ್ನು ನೀಡಬೇಕು.
6. ವಿದ್ಯುತ್ ಮಗ್ಗಗಳ ಸಂಕೀರ್ಣಗಳಿಗೆ ಕಾರ್ಖಾನೆಗಳ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಅನ್ವಯಿಸಬೇಕು.
7. ಆಟೋರಿಕ್ಷಾ ಚಾಲಕರಿಗೆ ಕಲ್ಯಾಣ ನಿಧಿ ಮತ್ತು ಪಿಂಚಣಿ ಯೋಜನೆಯನ್ನು ರೂಪಿಸಿ ಜಾರಿಗೊಳಿಸಬೇಕು.
8. ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಕೆಎಟಿ ತೀರ್ಪಿನ ಪ್ರಕಾರ ಸರಿಯಾದ ವೇತನ ಶ್ರೇಣಿಯನ್ನು ನಿಗದಿಗೊಳಿಸಿ ಜಾರಿಗೊಳಿಸಬೇಕು.
9. ಸಮಾನ ಕೆಲಸಕ್ಕೆ ಸಮಾನ ವೇತನದ ತತ್ವಕ್ಕೆ ಅನುಗುಣವಾಗಿ ಗ್ರಾಮ ಪಂಚಾಯತ್ ನೌಕರರಿಗೆ ನ್ಯಾಯವಾದ ವೇತನ ಮತ್ತು ಸೇವಾ ನಿಯಮಗಳನ್ನು ನಿಗದಿಪಡಿಸಬೇಕು.
10. ಖಾಯಂ ಸ್ವರೂಪದ ಕೆಲಸಗಳಲ್ಲಿ ಕಂಟ್ರಾಕ್ಟ್ ಪದ್ಧತಿಯನ್ನು ನಿಷೇಧಿಸಿ ಈಗಾಗಲೇ ಅಂತಹ ಕೆಲಸಗಳಲ್ಲಿ [illegible] ದುಡಿಯುತ್ತಿರುವ ಕಂಟ್ರಾಕ್ಟ್ ಕೆಲಸಗಾರರನ್ನು ಖಾಯಂ ಗೊಳಿಸಬೇಕು.
11. ಪೂರ್ವಪ್ರಾಥಮಿಕ ಶಾಲೆಗಳಲ್ಲಿ ದುಡಿಯುತ್ತಿರುವ ಆಯಾಗಳನ್ನು 4ನೇ ದರ್ಜೆಯ ನೌಕರರೆಂದು ಪರಿಗಣಿಸಿ ಖಾಯಂ ಗೊಳಿಸಬೇಕು.
12. ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸುವ ಮಾಲೀಕರನ್ನು ಬಂಧಿಸಬೇಕು
13. ರೋಗಗ್ರಸ್ತ ಕೈಗಾರಿಕೆಗಳನ್ನು ಪುನಃಶ್ಚೇತನಗೊಳಿಸಬೇಕು.
14. ಇಎಸ್‌ಐ ಆಸ್ಪತ್ರೆಗಳಲ್ಲಿ ಡಾಕ್ಟರುಗಳನ್ನು, ಲೇಡಿ ಡಾಕ್ಟರುಗಳನ್ನು ನೇಮಿಸಬೇಕು ಮತ್ತು ಅಗತ್ಯವಾದ ಔಷಧಿಗಳನ್ನು ಒದಗಿಸಬೇಕು.
15. ಕಾರ್ಮಿಕ ಇಲಾಖೆಯಲ್ಲಿ ಮತ್ತು ಕಾರ್ಮಿಕ ನ್ಯಾಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಬೇಕು.
16. ಕಾರ್ಮಿಕ ನ್ಯಾಯಾಲಯಗಳು ನೀಡುವ ಅವಾರ್ಡುಗಳು ಗೆಜೆಟ್‌ನಲ್ಲಿ ಪ್ರಕಟವಾಗುವವರೆಗೆ ಕಾಯುವಂತಾಗದೆ ತಕ್ಷಣ ಜಾರಿಗೆ ಬರುವಂತಾಗಬೇಕು.
17. ಕೈಗಾರಿಕೆಗಳಿಗೆ ಅವಶ್ಯವಾದ ವಿದ್ಯುಚ್ಛಕ್ತಿಯನ್ನು ಪೂರೈಸಿ ಅವುಗಳು ವಿದ್ಯುತ್ ಕೊರತೆಯಿಂದ ಮುಚ್ಚಿ ಹೋಗುವುದನ್ನು ತಡೆಯಬೇಕು.
18. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವನ್ನು ವಿಭಜಿಸುವ ತೀರ್ಮಾನವನ್ನು ಕೈ ಬಿಟ್ಟು ನಿಗಮದ ಆಡಳಿತಾಧಿಕಾರವನ್ನು ಕೆಳಹಂತಗಳಿಗೆ ವಿಕೇಂದ್ರಿಕರಿಸಿ ಬಲಪಡಿಸಬೇಕು.
19. ಕೈಗಾರಿಕಾ ವಿವಾದದಲ್ಲಿ ಮಾಲೀಕರ ಪರ ಪೋಲೀಸರ ಹಸ್ತಕ್ಷೇಪ ನಿಲ್ಲಬೇಕು .
20. ಫೆಬ್ರವರಿ 3 ರ ಗೋಲಿಬಾರ್ ನಲ್ಲಿ ಮಡಿದವರ ಸಂಬಂಧಿಕರಿಗೆ ತಲಾ ರೂ 5 ಲಕ್ಷ ಮತ್ತುಗಾಯಗೊಂಡವರಿಗೆ ತಲಾ ಒಂದು ಲಕ್ಷ ರೂ. ಪರಿಹಾರ ಕೊಡಬೇಕು. ಸಿಐಟಿಯು ಮುಖಂಡ ವಿ.ಜೆ.ಕೆ.ನಾಯರ್ ಮತ್ತು ಇತರರ ಮೇಲೆ ಹಾಕಲಾದ ಸುಳ್ಳು ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು ಮತ್ತು ಗೋಲಿಬಾರ್ ಮಾಡಿದ ಪೋಲೀಸ್ ಅಧಿಕಾರಿಗಳನ್ನು ಬಂಧಿಸಬೇಕು.

ಈಗಾಗಲೇ 'ಐಕ್ಯರಂಗ'ದಲ್ಲಿ ವರದಿಯಾಗಿರುವಂತೆ ಈ ಬೇಡಿಕೆಗಳ ಬಗ್ಗೆ ಮೇ 1 ರಿಂದ 7 ರವರೆಗೆ ಪ್ರಚಾರ-ಪ್ರಕ್ಷೋಭೆ ನಡೆಸಲು, ಮೇ 8ರಿಂದ 14 ರವರೆಗೆ ರಾಜ್ಯ ಸರಕಾರಿ ಕಚೇರಿಗಳ ಮುಂದೆ ಸಾಮೂಹಿಕ ಪಿಕೆಟಿಂಗ್, ಸರಕಾರ ಅಷ್ಟರೊಳಗೆ ಈ ಮೇಲಿನ ಬೇಡಿಕೆಗಳನ್ನು ಈಡೇರಿಸಲು ಮುಂದಾಗದಿದ್ದರೆ ಮೇ 15 ರಂದು ರಾಜ್ಯವ್ಯಾಪಿ ಕೈಗಾರಿಕಾ ಮುಷ್ಕರವನ್ನು ನಡೆಸಲು ಸಿಐಟಿಯು 7ನೇ ರಾಜ್ಯ ಸಮ್ಮೇಳನ ನಿರ್ಧರಿಸಿದೆ.

ಸಿಐಟಿಯುವಿನ ನೂತನ ರಾಜ್ಯ ಪದಾಧಿಕಾರಿಗಳು

ಅಧ್ಯಕ್ಷರು:
ಎಸ್.ಸೂರ್ಯನಾರಾಯಣ ರಾವ್

ಉಪಾಧ್ಯಕ್ಷರು:
ಸಿ.ನಂಜುಂಡಪ್ಪ
ನಿತ್ಯಾನಂದ ಸ್ವಾಮಿ
ಮಹಮ್ಮದ್ ದಸ್ತಗೀರ್
ಟಿ.ಎಸ್.ಮಣಿ
ಆರ್.ಶ್ರೀನಿವಾಸ್
ಬಿ.ಮಾಧವ

ಪ್ರಧಾನ ಕಾರ್ಯದರ್ಶಿ:
ವಿ.ಜೆ.ಕೆ.ನಾಯರ್

ಕಾರ್ಯದರ್ಶಿಗಳು:
ಕೆ.ಶಂಕರ್
ವಿ.ಸುಕುಮಾರ್
ಎಸ್.ಪ್ರಸನ್ನಕುಮಾರ್
ಇ.ಕೆ.ಎನ್.ರಾಜನ್
ರೋನಾಲ್ಡ್ ಡಾಜ್

ಸಹಕಾರ್ಯದರ್ಶಿಗಳು:
ಜೆ.ಬಾಲಕೃಷ್ಣ ಶೆಟ್ಟಿ
ಟಿ.ಎಸ್.ನಾಯರ್
ಮೋಹನ್ ಕುಮಾರ್
ಮೀನಾಕ್ಷಿ ಸುಂದರಂ

ಖಜಾಂಚಿ:
[illegible]

ಇಎಸ್‌ಐಗೆ ಮುತ್ತಿಗೆ

ಹುಬ್ಬಳ್ಳಿ: ಇಎಸ್‌ಐ ಹೊಸ ಸಂಯೋಜನೆ ಜಾರಿಗೆ ಬಂದು ಕಾರ್ಮಿಕರಿಂದ ಪುಷ್ಕಳವಾಗಿ ವಂತಿಗೆಯನ್ನು ಸರಕಾರ ವಸೂಲಿ ಮಾಡುತ್ತಿದೆ. ಆದರೆ ಇಎಸ್‌ಐ ಆಸ್ಪತ್ರೆಗಳಲ್ಲಿ ಕಾರ್ಮಿಕರಿಗೆ, ರೋಗಿಗಳಿಗೆ ಔಷಧಿ ಸಿಗುತ್ತಿಲ್ಲ ಸರಿಯಾದ ಉಪಚಾರ ಸಿಗುತ್ತಿಲ್ಲ. ರುಗ್ಣ ವಾಹನದ ಸೌಲಭ್ಯ ಇಲ್ಲ, ವಿದ್ಯುಚ್ಛಕ್ತಿ ನಿಲುಗಡೆಯಾದರೆ ಶಸ್ತ್ರಚಿಕಿತ್ಸೆ ನಡೆಯುತ್ತಿದ್ದರೆ ತಕ್ಷಣದಲ್ಲಿ ವಿದ್ಯುತ್ ನೀಡಲು ಬ್ಯಾಟರಿ ಇಲ್ಲ. ಸುಮಾರು ತಿಂಗಳಿಂದ ಔಷಧಿಯ ವ್ಯವಸ್ಥೆ ಇಲ್ಲ. ಬೇರೆ ಬೇರೆ ವಿಭಾಗಗಳಿಗೆ ತಜ್ಞವೈದ್ಯರು ಇಲ್ಲ. ಮುಂತಾದ ಸಮಸ್ಯೆಗಳಿಂದ ಕಾರ್ಮಿಕರು ನರಕಯಾತನೆ ಅನುಭವಿಸುತ್ತಿದ್ದಾರೆ.

ಈ ಸಮಸ್ಯೆಗಳನ್ನು ಪರಿಹರಿಸದೇ ಇರುವ ಕಾರ್ಮಿಕ ವಿರೋಧಿ ಸರಕಾರದ ನೀತಿಯನ್ನು ಪ್ರತಿಭಟಿಸಿ ಮಾರ್ಚ್ 3 ರಂದು ಸಿಐಟಿಯು ನೇತೃತ್ವದಲ್ಲಿ ಹಳೇ ಹುಬ್ಬಳ್ಳಿಯಲ್ಲಿರುವ ಇಎಸ್‌ಐ ಆಸ್ಪತ್ರೆಯ ಅಧೀಕ್ಷಕರಿಗೆ ನೂರಾರು ಕಾರ್ಮಿಕರು ಸೇರಿ ಘೆರಾವು ಮಾಡಿದರು. ನಂತರ ಆಸ್ಪತ್ರೆಯ ಸ್ಥಳೀಯ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಅಧಿಕಾರಿಗಳ ಮುಖಾಂತರ ರಾಜ್ಯ ಕಾರ್ಮಿಕ ಮಂತ್ರಿಗಳಿಗೆ ಮತ್ತು ಆರೋಗ್ಯ ಮಂತ್ರಿಗಳಿಗೆ ಮನವಿ ಕಳಿಸಲಾಯಿತು.

ಹೋರಾಟದ ನೇತೃತ್ವವನ್ನು ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಿ.ಜೆ.ಗೋಂದಕರ, ಎಂಕೆಇಎನ ಅಧ್ಯಕ್ಷರಾದ ಕೃಷ್ಣಪ್ರಭು, ಕಾರ್ಯದರ್ಶಿ ಪಿ.ಎಂ.ಜೋಶಿ, ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಮಹೇಶ್ ಪತ್ತಾರ್, ಎನ್.ವೈ.ನಾಯ್ಡು, ರಮೇಶ ಬೆನಕಟ್ಟಿ, ಆರ್.ಜಿ.ಪಾಟೀಲ, ಕೆ.ಪಿ.ಜೋಶಿ ಮುಂತಾದವರು ವಹಿಸಿದ್ದರು.

ಮನೆ ಮತ್ತು ನೀರಿನ ದರ ಹೆಚ್ಚಳಕ್ಕೆ ಖಂಡನೆ

ಉಡುಪಿನಗರ ಸಭೆಯ ಆಡಳಿತವು ನಗರಸಭಾ ವ್ಯಾಪ್ತಿಯೊಳಗೆ ಹೊಸದಾಗಿ ಸೇರ್ಪಡೆಗೊಳಿಸಿರುವ ಗ್ರಾಮಾಂತರ ಪ್ರದೇಶಗಳಲ್ಲಿ ಮನೆ ತೆರಿಗೆ ದರವನ್ನು ಏಕಪಕ್ಷೀಯವಾಗಿ ಮೂರರಿಂದ ನಾಲ್ಕು ಪಟ್ಟು ಏರಿಸಿ ವಸೂಲಿಗೆ ನೋಟೀಸು ಮಾಡುತ್ತಿರುವುದನ್ನು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಉಡುಪಿ ತಾಲ್ಲೂಕು ಸಮಿತಿ ಮಾರ್ಚ್ 9 ರಂದು ಸಭೆ ಸೇರಿ ತೀವ್ರವಾಗಿ ಖಂಡಿಸಿದೆ. ನಗರ ಸಭೆಯ ಆಡಳಿತದ ಈ ಕ್ರಮವನ್ನು ವಿರೋಧಿಸಿ, ಪ್ರತಿಭಟನೆ ಮಾಡಲು ನಿರ್ಧರಿಸಿದೆ.

ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ನಲ್ಲಿ ನೀರಿನ ದರವನ್ನು ಏರಿಸಿರುವುದು ಮತ್ತು ನೀರು ಸರಬರಾಜು ವ್ಯವಸ್ಥೆಯ ಅವ್ಯವಸ್ಥೆ ಜನವಿರೋಧಿ ಕ್ರಮವಾಗಿ[illegible] ಹಲವಾರು ಪ್ರದೇಶಗಳಲ್ಲಿ ನೀ[illegible] ಸರಬರಾಜು ಆಗದೆ ಜನರು ನೀರಿಗಾ[illegible] ಪರದಾಡ ಬೇಕಾದ ಪರಿಸ್ಥಿತಿ ಉಂ[illegible]ಗಿದೆ. ನೀರು ಸರಬರಾಜಿನಲ್ಲಿ ಕ[illegible] ಹಾಗೂ ನೀರು ದರ ಹೆಚ್ಚಳದಿಂದ ಜನರು ಬವಣೆಗೊಳಗಾಗಿದ್ದಾರೆ.

ಸಿಪಿಐ(ಎಂ) ಪಕ್ಷದ ಉಡು[illegible] ತಾಲ್ಲೂಕು ಸಮಿತಿಯು ಮನೆ ತೆ[illegible] ಮತ್ತು ನೀರು ದರ ಹೆಚ್ಚಳವ[illegible] ತೀವ್ರವಾಗಿ ಖಂಡಿಸುತ್ತಾ, ನಗರಸಭೆ[illegible] ಎಲ್ಲ ಪ್ರದೇಶಗಳಿಗೂ ಸರಿಯಾಗಿ ನೀ[illegible] ಸರಬರಾಜು ಮಾಡುವಂತೆ ನಗರ ಸ[illegible] ಆಡಳಿತವನ್ನು ಒತ್ತಾಯಿಸಿದೆ.

ರೈತ ಸಂಘದ ಯಶಸ್ವಿ ಹೋರಾಟ

ರಾಯಚೂರು: ಜಾಲಹಳ್ಳಿ ವಿಭಾಗದ ರೈತರಿಗೆ ವಿದ್ಯುತ್ ಅವರ ಜೀವನಾಡಿ. ಆ ಜೀವನಾಡಿಯೇ ನಿಂತು ಹೋದಾಗ ಪ್ರಾಣ ಹೋಗುವುದು ಸಹಜ. ಅಂತಹ ಸಂದಿಗ್ಧ ಪರಿಸ್ಥಿತಿಯನ್ನು ಜಾಲಹಳ್ಳಿ ವಿಭಾಗದ ರೈತರು ಎದುರಿಸುತ್ತಿದ್ದಾರೆ. ಏಕೆಂದರೆ ಬೆಳೆದ ಬೆಳೆಗೆ ನೀರುಣಿಸದೆ ಒಣಗಿ ಹೋಗುತ್ತಿದೆ. ಇಂತಹ ಬವಣೆಯನ್ನು ನಿವಾರಿಸಲು ಸರಕಾರ ಹೇಳುವ ಕನಿಷ್ಟ 8 ಗಂಟೆ ವಿದ್ಯುತ್ ಕೂಡ ಸರಿಯಾಗಿ ಸರಬರಾಜು ಆಗದೆ ಇರುವುದರಿಂದ ಕರ್ನಾಟಕ ಪ್ರಾಂತ ರೈತ ಸಂಘ [illegible] ಮಾರ್ಚ್ 5 ರಂದು ಕೆಇಬಿ ಗೆ ಮುತ್ತಿಗೆ ಹಾಕಲು ನಿರ್ಧರಿಸಿತು. ಆದರೆ ಕೆಇಬಿ ಸಹಾಯಕ ಕಾರ್ಯನಿರ್ವಾಹಕ ಹಜಾರೆಯವರು ಮಾರ್ಚ್ 3 ರಂದು ಸಂಘದ ಕಾರ್ಯದರ್ಶಿ ಬಸವನಗೌಡ ದೇಸಾಯಿ, ಶಿವನ ಗೌಡ ಪಾಟೀಲ್, ಜಿ.ಪಂ.ಸದಸ್ಯರಾದ ರಾಘವೇಂದ್ರ ಕೊಲ್ಲೂರ್, ವಿರೂಪಾಕ್ಷಪ್ಪ ಗೌಡ ಮುಂತಾದವರ ಜೊತೆ ಮಾತುಕತೆ ನಡೆಸಿದರು. ಅದು ಸಫಲವಾಗಲಿಲ್ಲ. ಮಾ.4 ರಂದು ಸಿಪಿಐ ಆರ್.ವೈ.ನಾ[illegible] ಹಾಗೂ ದೇವದುರ್ಗ ಪಿಎಸ್‌ಐ ಅ[illegible] ನೇತೃತ್ವದಲ್ಲಿ ಮಾತುಕತೆ ಮುಂದುವ[illegible] ಹೋರಾಟವನ್ನು ವಾಪ[illegible] ತೆಗೆದುಕೊಳ್ಳುವಂತೆ ಮನವೊಲಿಸಿ[illegible] ಕೆಲವು ನಿಬಂಧನೆಗಳೊಂದಿಗೆ ಕೆ[illegible] ಮುತ್ತಿಗೆಯನ್ನು ವಾಪ[illegible] ತೆಗೆದುಕೊಳ್ಳಲಾಯಿತು.

8 ತಾಸು ವಿದ್ಯುತ್ ನಿರಂತರ[illegible] ವೋಲ್ಟೇಜ್ ಸಹಿತ ನೀಡಬೇಕು. [illegible] 10 ಗಂಟೆಯಿಂದ ತೆಗೆಯುವ ವಿದ್ಯು[illegible] ಕಡಿತವನ್ನು ನಿಲ್ಲಿಸಬೇಕು. ವಿದ್ಯು[illegible] ತಂತಿ, ಕಂಬಗಳಿಗೆ ಅರ್ಜಿ ಸಲ್ಲಿ[illegible] ರೈತರಿಗೆ ಶೀಘ್ರದಲ್ಲಿ [illegible] ಒದಗಿಸಬೇಕು. ಈ ಮೇ[illegible] ಬೇಡಿಕೆಗಳನ್ನು ಒಪ್ಪಿಕೊಂಡು ಕೆ[illegible] ಇಂಜಿನಿಯರ್‌ರವರು ಪ್ರತಿ[illegible] ಹಳ್ಳಿಗೂ ಬಂದು ರೈತರ ಸಮಸ್ಯೆಗ[illegible] ಸ್ಪಂದಿಸಿದರು. ಇವರ ಜೊತೆ ಪ್ರಾ[illegible] ರೈತ ಸಂಘದ ಕಾರ್ಯದರ್ಶಿ ಬಸ[illegible] ಗೌಡ ದೇಸಾಯಿ, ಪಿ.ಗಿರಿಯ[illegible] ರಂಗಪ್ಪ ಲಿಂಗದಳ್ಳಿ, ಬಸವರ[illegible] ತೀರ್ಥರು ಇದ್ದರು.

ಕರ್ನಾಟಕದ 1997-98 ರ ಬಜೆಟ್

ಮಾತಿನಲ್ಲಿ ಗಾಂಧೀಜಿ ಉದ್ಗಾರ ಕೃತಿಯಲ್ಲಿ ಸಿರಿವಂತರಿಗಷ್ಟೇ ಪುರಸ್ಕಾರ

ಉಪಮುಖ್ಯಮಂತ್ರಿ ಹಾಗೂ ಹಣಕಾಸು, ಯೋಜನೆ ಮತ್ತು ಕಾರ್ಮಿಕ ಸಚಿವರಾದ ಸಿದ್ರಾಮಯ್ಯನವರು 1997-98ರ ವಾರ್ಷಿಕ ಬಜೆಟ್‌ನ್ನು 238 ಕೋಟಿ ಕರ ಭಾರದ ಹಾಗೂ 97 ಕೋಟಿ ರೂ. ಕೊರತೆಯ ಜನತಾದಳ ಸರಕಾರದ ಬಜೆಟ್‌ನ್ನು ಹೊಗಳಿದವರು ಯಾರೂ ಇಲ್ಲ. ಬದಲಾಗಿ ಈ ಬಜೆಟ್ 'ದುರ್ಬಲ ವರ್ಗದವರಿಗೆ ಏನೂ ಮಾಡದ, ದೂರದೃಷ್ಟಿಯಿರದ ನಿರಾಶಾಜನಕ, ಜನ ವಿರೋಧಿ' ಎಂಬೆಲ್ಲಾ ಟೀಕಾಸ್ತ್ರಗಳನ್ನೇ ಎದುರಿಸಿದೆ. ಕರ್ನಾಟಕ ರಾಜ್ಯದ ಅಭಿವೃದ್ಧಿ ಹಾಗೂ ಜನ ಸಾಮಾನ್ಯರಿಗೆ ಬೇಕಾದ ವಿವಿಧ ಸೇವೆಗಳ ವಿಷಯದಲ್ಲಿ ಸರಕಾರ ಹೊಣೆಯಿಂದ ಜಾರಿಕೊಳ್ಳುವ ಹಾಗೆ ಅವೆಲ್ಲವನ್ನೂ ಖಾಸಗಿಯವರ ಕೈಗೊಪ್ಪಿಸಿ ಕೈ ತೊಳೆದುಕೊಳ್ಳುವ ಆತುರವನ್ನು ತೋರಿಸುವ ಬಜೆಟ್ ಇದಾಗಿದೆಯೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅಭಿಪ್ರಾಯ ವ್ಯಕ್ತಮಾಡಿ, ಒಟ್ಟಾರೆಯಾಗಿ ಈ ಬಜೆಟ್‌ನಿಂದಾಗಿ ರಾಜ್ಯದಲ್ಲಿ ಜನತಾದಳದ ಬಗ್ಗೆ ಹೆಚ್ಚುತ್ತಿರುವ ಅತೃಪ್ತಿ ಮತ್ತಷ್ಟು ಹೆಚ್ಚಲಿದೆ ಎಂದು ಆತಂಕ ವ್ಯಕ್ತಪಡಿಸಿದೆ.

ಹೋದ ವರ್ಷ ಕೇವಲ ನಾಲ್ಕು ತಿಂಗಳುಗಳಿಗೆ 132 ಕೋಟಿ ರೂ. ಕೊರತೆಯ ಬಜೆಟನ್ನು ಸಿದ್ರಾಮಯ್ಯನವರೇ ಮಂಡಿಸಿದ್ದರು. ಆಗ ಲೋಕಸಭೆ ಚುನಾವಣೆ ಅವರ ಮುಂದಿತ್ತು. ಹಾಗಿದ್ದೂ ಅವರ 1996-97ರ ಬಜೆಟ್ ಜನಪರವಾಗಿಲ್ಲೆಂದು ಸಿಪಿಐ (ಎಂ) ಅಭಿಪ್ರಾಯ ವ್ಯಕ್ತ ಮಾಡಿತ್ತು. ನೂತನ ಕೃಷಿ ನೀತಿಯ ಮೇರೆಗೆ ಕೃಷಿಗೆ ಕೈಗಾರಿಕೆಯ ಸ್ಥಾನಕೊಟ್ಟು ಕೃಷಿಯಲ್ಲಿರುವ ಸಾಮರ್ಥ್ಯವನ್ನು ಉಪಯೋಗಿಸುವ ಯೋಜನೆಗಳನ್ನು ರೂಪಿಸಲಾಗುವುದೆಂದು ಅರ್ಥಮಂತ್ರಿಗಳು ಹೇಳಿದ್ದರೂ ಕೂಡ ಬಹುಪಾಲು ಬಡ ಮತ್ತು ಮಧ್ಯಮ ವರ್ಗದ ರೈತರ ಆದಾಯ ಅಧಿಕಗೊಳಿಸುವ ಕುರಿತು ಏನೂ ಇಲ್ಲವೆಂದೂ, ವಿದ್ಯುಚ್ಛಕ್ತಿ ಉತ್ಪಾದನಾ ಹೆಚ್ಚಳಕ್ಕೆ ಸಂಪೂರ್ಣವಾಗಿ ಖಾಸಗೀ ಸಂಸ್ಥೆಗಳನ್ನು ಮುಖ್ಯವಾಗಿ ಕೊಜೆಂಟ್ರಿಕ್ಸ್‌ನಂಥಹ ವಿದೇಶಿ ಸಂಸ್ಥೆಯ ಮೇಲೆ ಹೊಂದಿಕೊಳ್ಳುತ್ತಿದೆಂದೂ, ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಭರವಸೆ ಕೊಡದೆ ಬರೇ ಕ್ಲಾಸ್ ರೂಮುಗಳನ್ನು ಕಟ್ಟುವ ಮತ್ತು ಪ್ರಾಧ್ಯಾಪಕರನ್ನು ನೇಮಿಸುವ ಆಶ್ವಾಸನೆಗಳನ್ನಷ್ಟೇ ಕೊಟ್ಟಿದೆಯೆಂದೂ, ಬರಗಾಲ ನಿವಾರಣೆಗಾಗಲೀ, ಬಡರೈತ-ಕೃಷಿ ಕೂಲಿಗಾರರಿಗೆ ಭೂಮಿ ಹಂಚುವ, ಪಟ್ಟಾ ವಿತರಿಸುವ ಕಾರ್ಯವನ್ನಾಗಲೀ, ಉದ್ಯೋಗಾವಕಾಶದ ಹೆಚ್ಚಳವನ್ನಾಗಲೀ ಬಜೆಟ್‌ನಲ್ಲಿ ಸ್ಪಷ್ಟವಾಗಿ ತಿಳಿಸಿ ಹೇಳಿಲ್ಲವೆಂದು ಸಿಪಿಐ(ಎಂ) ಬಜೆಟ್ಟಿನ ಕುರಿತು ಅಭಿಪ್ರಾಯ ವ್ಯಕ್ತಮಾಡಿತ್ತು.

ಈ ವರ್ಷದ ಬಜೆಟ್ಟನ್ನು ವಿಶ್ಲೇಷಿಸಿದರೆ ರಾಜ್ಯದ ಅಭಿವೃದ್ಧಿಗಾಗಿ ಬೇಕಾದ ನೀರಾವರಿ, ವಿದ್ಯುತ್, ಭೂ ಸುಧಾರಣೆ, ಭೂಮಿ ಹಂಚಿಕೆ, ಕನಿಷ್ಟಕೂಲಿ, ಗ್ರಾಮಾಭಿವೃದ್ಧಿ, ಶಿಕ್ಷಣ, ಕುಡಿಯುವ ನೀರಿನ ಸಮಸ್ಯೆ, ಕೈಗಾರೀಕರಣಗಳ ಕುರಿತು ಬಜೆಟ್‌ನಲ್ಲಿ ಹೇಳಿಕೊಳ್ಳುವಂಥ ಅಂಶಗಳಿಲ್ಲೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಮಾತೊಂದು-ಕೃತಿಯೊಂದು

ತಮ್ಮ ಬಜೆಟ್ ಮಂಡಿಸುವಾಗ ಅರ್ಥಮಂತ್ರಿ ಸಿದ್ರಾಮಯ್ಯನವರು ಭಾರತವು ತನ್ನ ಸ್ವಾತಂತ್ರ್ಯದ ಚಿನ್ನದ ಹಬ್ಬವನ್ನು ಆಚರಿಸುತ್ತಿರುವ ಸಂದರ್ಭದಲ್ಲಿಯೇ ನಾವು ಪ್ರಗತಿಯ ಹಾದಿಯಲ್ಲಿ ಸಾಕಷ್ಟು ಮುನ್ನಡೆದಿದ್ದೇವಾದರೂ ನಮ್ಮ ಮುಂದೆ ಇನ್ನೂ ಹಲವಾರು ಸವಾಲುಗಳಿವೆಂದೂ, ಅವುಗಳ ಕುರಿತು ಚಿಂತಿಸಲು ಇದು ಸಕಾಲವೆಂದು ಹೇಳಿ ಮಹಾತ್ಮ

ಬಜೆಟ್ ವಿಹಂಗಮ ನೋಟ

ಕ್ರ.ಸಂ.	ಬಾಬ್ತು	ಬಜೆಟ್ ಅಂದಾಜು 1996-97	ಪರಿಷ್ಕೃತ ಅಂದಾಜು 1996-97	ಬಜೆಟ್ ಅಂದಾಜು 1997-98
	ಪ್ರಾರಂಭ ಶಿಲ್ಕು	- 79.50	- 54.64	- 98.94
	ಎ.ರಾಜಸ್ವ ಲೆಕ್ಕ			
I	ಜಮಾ			
	ರಾಜ್ಯ ತೆರಿಗೆ	6247.14	6044.42	7125.84
	ಕೇಂದ್ರ ತೆರಿಗೆಯಲ್ಲಿ ಪಾಲು	1686.48	1729.80	1983.26
	ಕೇಂದ್ರ ಸರಕಾರದ ಅನುದಾನಗಳು.	1386.27	1211.59	1472.41
	ತೆರಿಗೆಯೇತರ ರಾಜಸ್ವ	1183.17	1308.13	1184.94
	ಒಟ್ಟು -ಎ I	10503.06	10293.94	11766.45
	ಸಾಮಾಜಿಕ ಸೇವೆ	4047.84	3857.08	4624.34
	ಆರ್ಥಿಕ ಸೇವೆ	3072.24	3498.31	3194.30
	ಸಾಮಾನ್ಯ ಸೇವೆ	3285.68	3190.34	3855.32
	ಸಹಾಯಾನುದಾನ ಮತ್ತು ಅಂಶದಾನ	233.21	210.37	291.49
	ಒಟ್ಟು-ಎ II	10638.97	10756.10	11965.45
ಎ.	ರಾಜಸ್ವ ಲೆಕ್ಕ ಹೆಚ್ಚುವರಿ/ಕೊರತೆ	- 135.91	- 462.16	- 199.00
	ಬಿ.ಬಂಡವಾಳಲೆಕ್ಕ			
I.	ಜಮಾ			
	ಭಾರತ ಸರಕಾರದಿಂದ ಸಾಲ	1042.69	984.68	1167.39
	ಬಹಿರಂಗ ಮಾರುಕಟ್ಟೆ ಸಾಲ(ನಿವ್ವಳ)	211.62	232.62	256.33
	ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ	150.27	119.22	186.80
	ಸಾಲಗಳು ಮತ್ತು ಮುಂಗಡಗಳ ವಸೂಲಿ	123.89	324.11	86.69
	ಸಾರ್ವಜನಿಕ ಲೆಕ್ಕ(ನಿವ್ವಳ) ಇತ್ಯಾದಿ	254.92	184.12	181.11
	ಒಟ್ಟು -ಬಿ I	1783.39	1844.75	1878.32
II.	ಬಟವಾಡೆ			
	ಬಂಡವಾಳ ವೆಚ್ಚ(ನಿವ್ವಳ)	1128.63	908.89	996.85
	ಕೇಂದ್ರ ಸಾಲಗಳ ಮರು ಸಂದಾಯ	222.51	220.72	260.69
	ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇತ್ಯಾದಿಗಳಿಗೆ ಸಾಲಗಳ ಮರುಸಂದಾಯ	18.48	16.43	18.43
	ಸಾಲಗಳ ಮತ್ತು ಮುಂಗಡಗಳ ಬಟವಾಡೆ	330.56	280.85	215.26
	ಒಟ್ಟು -ಬಿ II	1700.18	1426.89	1491.23
	ಬಿ. ಬಂಡವಾಳ ಲೆಕ್ಕ ಹೆಚ್ಚಳ/ಕೊರತೆ(-)	83.21	417.86	387.09
	ಸಿ.ವರ್ಷದ ಒಟ್ಟು ಹೆಚ್ಚಳ/ಕೊರತೆ	- 52.70	- 44.30	188.09
	ಡಿ.ಮುಕ್ತಾಯ ಶಿಲ್ಕು ಕಳೆದಾಗ	- 132.20	- 98.94	- 89.15
	ಇ. ಎಲ್‌ಆರ್‌ಎಮ್	0.00	0.00	- 186.00
	ಎಫ್. ಒಟ್ಟು ಹೆಚ್ಚುವರಿ/ಕೊರತೆ	-132.20	-98.94	-96.85

ರಾಜ್ಯದ ಹಣಕಾಸು ಮಂತ್ರಿಗಳ ಭಾಷಣ "ಜನಸಾಮಾನ್ಯರ ಬಗೆಗಿನ ಸರಕಾರದ ಕಾಳಜಿ ಮತ್ತೆ ಅಗ್ರಸ್ಥಾನ ಗಳಿಸಿದೆ" ಎಂದು ಸಾರುತ್ತಾ "ಜೀವನಕ್ಕೆ ಬೇಕಾದ ಅವಶ್ಯಕತೆಗಳು ಎಲ್ಲರಿಗೂ ದೊರೆಯದಿದ್ದಲ್ಲಿ ಅದು ಪೂರ್ಣ ಸ್ವರಾಜ್ಯವೆನಿಸುವುದಿಲ್ಲ" ಎಂದಿದೆ. ಆದರೆ ಅವರ ಮೂರನೇಯ ಬಜೆಟ್ ಕೂಡಾ ತದ್ವಿರುದ್ಧ ದಿಕ್ಕಿನಲ್ಲೇ ಸಾಗಿದೆ.

ಗಾಂಧಿಯವರ ಅಭಿಪ್ರಾಯವನ್ನು ಅಂದರೆ "ನನ್ನ ಕಲ್ಪನೆಯ ಸ್ವರಾಜ್ಯವೆಂದರೆ ಜೀವನದ ಮೂಲ ಅವಶ್ಯಕತೆಗಳನ್ನು ಎಲ್ಲರೂ ಪಡೆಯಲಾಗುವ ರಾಷ್ಟ್ರವನ್ನು ರೂಪಿಸುವುದು, ಜೀವನಕ್ಕೆ ಬೇಕಾದ ಅವಶ್ಯಕತೆಗಳು ಎಲ್ಲರಿಗೂ ದೊರೆಯದಿದ್ದಲ್ಲಿ ಅದು ಪೂರ್ಣ ಸ್ವರಾಜ್ಯವೆನಿಸುವುದಿಲ್ಲ" ಎಂಬುದನ್ನು ಸ್ಮರಿಸಿಕೊಂಡರು. ಆದರೆ ತಮ್ಮ ಆಳ್ವಿಕೆಯಲ್ಲಿ ಮೂರನೆಯ ಬಜೆಟನ್ನು ಮಂಡಿಸುತ್ತಿರುವ ಸಿದ್ರಾಮಯ್ಯನವರ ಅನಿಸಿಕೆಗಳು ಗಾಂಧಿಯವರ ಅಭಿಪ್ರಾಯಗಳಿಗೆತದ್ವಿರುದ್ಧವಾಗಿವೆಂದುಹೇಳಿದರೆತಪ್ಪಾಗಲಾರದು.

ಜೀವನದ ಮೂಲ ಅವಶ್ಯಕತೆಗಳನ್ನು ಎಲ್ಲರೂ ಪಡೆಯುವಂತಾಗಬೇಕಾದರೆ ಉತ್ಪಾದನಾ ಸಾಧನಗಳು ಅಂದರೆ ಕಾರ್ಖಾನೆಗಳು, ವಿದ್ಯುತ್ ಉತ್ಪಾದನೆಗಳು ಸಾರ್ವಜನಿಕ ಕ್ಷೇತ್ರದಲ್ಲಿ ಇರಬೇಕು. ಈ ವಿಷಯದಲ್ಲಿ ಸಿದ್ರಾಮಯ್ಯನವರು ಹಿಂದಿನ ನರಸಿಂಹರಾವ್ ಸರಕಾರದ, ಈಗಿನ ದೇವೇಗೌಡರ ಸರಕಾರದ ನೀತಿಯನ್ನೇ ಅನುಸರಿಸಿ ಕಾರ್ಖಾನೆಗಳನ್ನೂ, ವಿದ್ಯುತ್ ಉತ್ಪಾದನೆಯನ್ನು ಮತ್ತು ವಿತರಣೆಯನ್ನೂ, ರಸ್ತೆಗಳ ನಿರ್ಮಾಣವನ್ನೂ, ನೀರಾವರಿ ಕ್ಷೇತ್ರಗಳನ್ನೂ, ರೈತರ ಪಾಲಿಗೆ ದಕ್ಕತಕ್ಕ ಭೂಮಿಯನ್ನು ಖಾಸಗೀಕರಣಗೊಳಿಸುವ ಘೋಷಣೆ ಮಾಡಿದ್ದಾರೆ. ಜನರ ಅವಶ್ಯಕತೆಗಳನ್ನು ಪೂರೈಸಬೇಕಾದರೆ ಕೈಗಾರಿಕೆ, ವಿದ್ಯುತ್ ಮತ್ತು ಭೂಮಿಯಲ್ಲಿ ಜನಪರ ನೀತಿಗಳು ಅನುಸರಿಸುವಂತಾಗಿ ಜನರಿಗೆ ಅವಶ್ಯವಿರುವ ವಸ್ತುಗಳ ಉತ್ಪಾದನೆಗೆ ಪ್ರಾಶಸ್ತ್ಯ ನೀಡಬೇಕು. ಇವುಗಳನ್ನೆಲ್ಲಾ ಖಾಸಗೀಕರಿಸಿದರೆ, ಆ ಖಾಸಗೀಯವರು ತಮ್ಮ ಲಾಭ ಹೆಚ್ಚಿಸಿಕೊಳ್ಳಲಿಕ್ಕೆ ಬೇಕಾದ ವಸ್ತುಗಳ ಉತ್ಪಾದನೆಗೆ ಗಮನ ಕೊಡುತ್ತಾರಲ್ಲದೆ ಜನರ ಅವಶ್ಯಕತೆಗಳ ಪೂರೈಕೆಗಲ್ಲ ಎಂಬುದನ್ನು ಸಿದ್ರಾಮಯ್ಯನವರು ಗಮನಿಸುವುದು ಅಗತ್ಯ.

ನಿರುದ್ಯೋಗ ಹೆಚ್ಚಳಕ್ಕೇ ದಾರಿ ಪರಿಹಾರಕ್ಕಲ್ಲ

ರಾಜ್ಯದಲ್ಲಿ ಸುಮಾರು 23000 ಕೋಟಿ ಬಂಡವಾಳ ಹೂಡುವ ಭರವಸೆಯನ್ನು ಹೋದ ವರ್ಷ ಬಜೆಟ್ ಮಂಡಿಸುವಾಗ ಆಶ್ವಾಸನೆ ನೀಡಲಾಗಿತ್ತು. ಆದರೆ ಈ ವರ್ಷದ ಬಜೆಟ್‌ನಲ್ಲಿ ಎಷ್ಟು ಬಂಡವಾಳ ಹೂಡಲಾಗಿದೆಂದು ಹೇಳದೆ, 6577.75 ಕೋಟಿ ರೂ ಬಂಡವಾಳ ಹೂಡಿಕೆಯ 20 ಭಾರಿ ಕೈಗಾರಿಕೆಗಳಿಗೆ, 1122.24 ಕೋಟಿ ರೂ. ಹೂಡಿಕೆಯ 92 ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿಗೆ, 229 ಕೋಟಿ ಬಂಡವಾಳ ಹೂಡಿಕೆಯ 8969 ಸಣ್ಣ ಕೈಗಾರಿಕೆಗಳಿಗೆ ಅನುಮೋದನೆ ದೊರೆತಿದೆಂದು ಮಾತ್ರ ಹೇಳಿದ್ದಾರೆ. ಸರಕಾರಿ ನೌಕರಿಯಲ್ಲಿ ಶೇ 5 ರಷ್ಟು ಕಡಿತಗೊಳಿಸಬೇಕೆನ್ನುವ, ಖಾಲಿ ಇರುವ ಲಕ್ಷಾವಧಿ ಸ್ಥಾನಗಳನ್ನು ತುಂಬಬಾರದೆಂಬ ನೀತಿ ಅನುಸರಿಸುತ್ತಿರುವ ಸರಕಾರ ಹೊಸ ಕಾರ್ಖಾನೆಗಳು ಯಾವಾಗ ಉತ್ಪಾದನೆ ಪ್ರಾರಂಭಿಸಬೇಕೆಂಬುದರ ಕುರಿತು ನಿರ್ದಿಷ್ಟ ಧೋರಣೆಯಿಲ್ಲದಿರುವುದರಿಂದನಿರುದ್ಯೋಗಸಮಸ್ಯೆ ಇನ್ನಷ್ಟು ಉಲ್ಬಣಗೊಳ್ಳಬಹುದಾಗಿದೆಂದು ಹೇಳಿದರೆತಪ್ಪಾಗಲಾರದು.

ರಾಜ್ಯದಲ್ಲಿ ಹಲವಾರು ಕಾರ್ಖಾನೆಗಳು ಮುಚ್ಚಿವೆ. ಹಲವಾರು ರೋಗಗ್ರಸ್ಥವಾಗಿವೆ. ಇವುಗಳ ಕುರಿತು ಸರಕಾರ ಬಜೆಟ್‌ನಲ್ಲಿ ಏನೂ ಹೇಳಿಲ್ಲ. ಅದರ ಬದಲಾಗಿ ನಷ್ಟ ಹೊಂದುತ್ತಿರುವ ಸಣ್ಣ ಕೈಗಾರಿಕೆಗಳಿಗೆ ಪರಿಹಾರ ಮತ್ತು ಸಹಾಯ ನೀಡಲು ಒಂದು ಯೋಜನೆಯನ್ನು ರೂಪಿಸಿದೆ ಎಂದು ಮಾತ್ರ ಹೇಳಿದಾರೆ. ಅದಿಗ ಪ್ರಮುಖ ಭಾರಿ ಕೈಗಾರಿಕಾ ಪ್ರದೇಶ ಗಳಲ್ಲಿ ಸಣ್ಣ ಕೈಗಾರಿಕಾ ನೆರವು ಕೇಂದ್ರಗಳನ್ನು ಮತ್ತು ಕೈಗಾರಿಕೋದ್ಯಮಿಗಳು ಮತ್ತು ಉದ್ಯಮಿಗಳಿಗೆ 'ಒನ್‌ಸ್ಟಾಪ್ ಸರ್ವಿಸ್' ದೊರೆಯುವಂತೆ ಕೈಗಾರಿಕಾ ಎಸ್ಟೇಟ್‌ಗಳನ್ನು ಸ್ಥಾಪಿಸುವ ಯೋಜನೆ ಪ್ರಕಟಿಸಲಾಗಿದೆ. ಈಗಿನ ಅನುಭವಗಳ ಪ್ರಕಾರ ಈಗಾಗಲೇ ಕೆಲವು ದೊಡ್ಡ ಕೈಗಾರಿಕೆಗಳು ಅನುಸರಿಸುತ್ತಿರುವ ಇದರಂಥ ನೀತಿಯಿಂದಾಗಿಯೇ ಸಣ್ಣ ಕೈಗಾರಿಕೆಗಳಲ್ಲಿ ದುಡಿಯುವ ಕಾರ್ಮಿಕರನ್ನು ಶೋಷಿಸಿ ಭಾರಿ ಕೈಗಾರಿಕೆಗಳಿಗೆ ಬಿಡಿ ಭಾಗಗಳನ್ನು ಒದಗಿಸಿ, ಅಂಥ ಭಾರೀ ಕೈಗಾರಿಕೆಗಳು ರೋಗಗ್ರಸ್ತವಾಗುವಂತೆ ಮಾಡಿರುವ ಸ್ಪಷ್ಟ ಚಿತ್ರ ನಮ್ಮ ಮುಂದಿದೆ. ಇಂಥ ಯೋಜನೆಗಳಿಂದ ಕಾರ್ಮಿಕರ ಸುಲಿಗೆ ಮತ್ತಷ್ಟು ಹೆಚ್ಚಾಗುತ್ತದೆ. ಭಾರಿ ಕೈಗಾರಿಕೆಗಳು ಮುಚ್ಚಿ ನಿರುದ್ಯೋಗ ಹೆಚ್ಚಾಗುತ್ತದೆ.

ಅಸಂಘಟಿತರನ್ನು ಮರತೇಬಿಟ್ಟಿದ್ದಾರೆ

ಗ್ರಾಮ ಪಂಚಾಯತಿ ಮತ್ತು ನಗರಸಭೆಪುರಸಭೆಗಳ ಆಡಳಿತೆಯಲ್ಲಿ, ಅವುಗಳಿಗೆ ನಡೆಯುವ ಚುನಾವಣೆಗಳಲ್ಲಿ ಹಂತ ಹಂತದಲ್ಲಿ ಕೈವಾಡ ನಡೆಸುತ್ತಿರುವ ಈ ಸರಕಾರ ಅವುಗಳಿಗೆ ಹೆಚ್ಚು ಆರ್ಥಿಕ ಸಹಾಯ ನೀಡುತ್ತಿದೆಂಬ ಹೇಳಿಕೆ ಹಾಸ್ಯಾಸ್ಪದ.

ಉದ್ಯೋಗ, ತರಬೇತಿ ಮತ್ತು ಕಾರ್ಮಿಕ ಎಂಬ ವಿಭಾಗದಲ್ಲಿ ಉದ್ಯೋಗದ ಕುರಿತಾಗಲೀ, ಕಾರ್ಮಿಕರ ಕುರಿತಾಗಲೀ ಚಕಾರವೆತ್ತಲಿಲ್ಲ, ಕನಿಷ್ಟ ವೇತನವೆಂಬುದೊಂದಿದೆ, ಅಸಂಘಟಿತ ಕಾರ್ಮಿಕರ ಹಲವಾರು ಸಮಸ್ಯೆಗಳಿವೆಂಬುದನ್ನು ಸಿದ್ರಾಮಯ್ಯನವರು ಗಮನಿಸಿದಂತಿಲ್ಲ. ಕಾರ್ಮಿಕ ಖಾತೆಗೆ ಕಾರ್ಮಿಕ ಕೋರ್ಟುಗಳಿಗೆ ಸಂಬಂಧ ಪಟ್ಟಂತೆ ವಿವರಣೆ ನೀಡಲು ಕಾರ್ಮಿಕ ಮಂತ್ರಿಯೂ ಆಗಿರುವ ಸಿದ್ರಾಮಯ್ಯನವರು ಮರೆತಂತೆ ಕಂಡುಬರುತ್ತದೆ.

ವಿದ್ಯುತ್ ಕ್ಷೇತ್ರದಲ್ಲಿ ಸೋಲಾಗಿದೆಂದು ಸಿದ್ರಾಮಯ್ಯನವರೇ ಒಪ್ಪಿಕೊಂಡು ಅದನ್ನು ಖಾಸಗಿಯವರಿಗೆ ಒಪ್ಪಿಸುವ ನಿರ್ಣಯ ಪ್ರಕಟಿಸಿ ತಮ್ಮ ಅಸಮಾರ್ಥ್ಯವನ್ನು ಪ್ರದರ್ಶಿಸಿದ್ದಾರೆ.

ತಮ್ಮ ಬಜೆಟ್‌ನಲ್ಲಿ ಒಟ್ಟು ಆದಾಯದಲ್ಲಿ ಬರೇ 16 ಪೈಸೆಯಷ್ಟು ಅಂದರೆ ಶಿಕ್ಷಣ, ಕ್ರೀಡೆಗಳು, ಕಲೆ ಮತ್ತು ಸಂಸ್ಕೃತಿಕ 283.75 ಕೋಟಿ ಅಂದರೆ ಒಟ್ಟು ಬಜೆಟ್ಟಿನಲ್ಲಿ ಶೇ 6.24% ರಷ್ಟು ಹಣ ಮೀಸಲಿಟ್ಟು ಹೋದ ಸಲ ಪ್ರಕಟಿಸಿದಷ್ಟು ಪ್ರಾಥಮಿಕ ಶಾಲಾ ಕೊಠಡಿಗಳನ್ನು ಕಟ್ಟಲಿಕ್ಕಾಗದೆ ಹಾಲಿ ನಿರ್ಮಾಣ ಹಂತದಲ್ಲಿರುವ 5000 ಕೊಠಡಿಗಳ ನಿರ್ಮಾಣವನ್ನು ಪೂರೈಸುವ ಹಾಗೂ ಸ್ವಾತಂತ್ರ್ಯ ಉತ್ಸವದ ಸಂದರ್ಭದಲ್ಲಿ 6000 ಹೊಸ ಶಾಲಾ ಕೊಠಡಿಗಳನ್ನು ನಿರ್ಮಿಸುವ ಆಶ್ವಾಸನೆ ನೀಡಿ, ಸಾಕಷ್ಟು ಶಿಕ್ಷಕರನ್ನು ನೇಮಿಸಿಕೊಳ್ಳುವುದರಲ್ಲಿಯೂ ವಿಫಲರಾಗಿ, ಸರಕಾರಿ ಶಾಲೆಗಳನ್ನು ಸರಿಯಾಗಿ ನಡೆಸಿಕೊಂಡು ಹೋಗುವುದರಲ್ಲಿ ತಮ್ಮ ಅಸಾಮರ್ಥ್ಯವನ್ನು ತೋರ್ಪಡಿಸಿ, ಖಾಸಗೀ ಇಂಗ್ಲಿಷ್ ಶಾಲೆಗಳಿಗೆ ಪ್ರತ್ಯಕ್ಷವಾಗಿಯೇ ಪ್ರೋತ್ಸಾಹ ನೀಡುವ ನಿಲುಮೆ ಪ್ರದರ್ಶಿಸಿದ್ದಾರೆ.

ಸಾರಿಗೆ ಸಂಸ್ಥೆಯ ವಿಭಜನೆ, ಸಾರಿಗೆ ಪ್ರಯಾಣದಲ್ಲಿ ಹೆಚ್ಚಳ, ಅದರ ಆಡಳಿತೆ ಸುಧಾರಿಸುವಲ್ಲಿ, ಸೋರಿಕೆ ತಡೆಹಿಡಿಯುವುದರಲ್ಲಿಯ ಅಸಾಮರ್ಥ್ಯಗಳ ಜೊತೆಯಲ್ಲಿ ಸಾರಿಗೆಯನ್ನೂ ಖಾಸಗೀಕರಣಗೊಳಿಸುವ ನೀತಿ ಖಂಡನೀಯವೇ ಸರಿ.

ಸಿಮೆಂಟ್, ಸೀಮೆಎಣ್ಣೆಗಳ ದರ ಹೆಚ್ಚಳದ ಜೊತೆಯಲ್ಲಿಯೇ ಪ್ರವೇಶಕರದ ಹೆಚ್ಚಳದಿಂದಾಗಿ, ಕೇಂದ್ರ ಸರಕಾರದ ಆರ್ಥಿಕ ನೀತಿಯಿಂದಾಗಿ ಅತ್ಯಾವಶ್ಯಕ ವಸ್ತುಗಳ ಬೆಲೆಗಳ ಹೆಚ್ಚಳಕ್ಕೆ ಸಿದ್ರಾಮಯ್ಯನವರ ಬಜೆಟ್ ನೀತಿ ಇನ್ನಷ್ಟು ಪ್ರೋತ್ಸಾಹ ನೀಡಿ ಬೆಲೆ ಹೆಚ್ಚಳಕ್ಕೆ ಕಾರಣೀಭೂತವಾಗಿ ಜನಜೀವನವನ್ನು ಮತ್ತಷ್ಟು ಸಂಕಷ್ಟಕ್ಕೀಡು ಮಾಡುವುದರಲ್ಲಿ ಸಂಶಯವಿಲ್ಲ.

ಏನೂ ಪರಿಹಾರ ಕಾಣದ ಅಸಂಘಟಿತ ವರ್ಗದ ಜೊತೆಯಲ್ಲಿ ಅಂಗನವಾಡಿ, ಗ್ರಾಮ ಪಂಚಾಯತಿ, ನಗರಸಭೆಗಳ ನೌಕರರೂ ಸೇರಿಕೊಂಡಿದ್ದಾರೆ. ಅವರ ಭವಿಷ್ಯದ ಕುರಿತು ಸಿದ್ರಾಮಯ್ಯನವರ ಬಜೆಟ್ ಮೌನ ತಾಳಿದೆ.

ಸಿದ್ರಾಮಯ್ಯನವರ ಈ ಬಜೆಟ್ಟಿನ ಸಾಧನೆ ಏನೆಂದರೆ ದುಡಿಯುವವರಿಗೆ, ಬಡವರಿಗೆಲ್ಲ 'ಸೊನ್ನೆ' ಲಾಭ, ವಿದ್ಯುತ್, ಕೈಗಾರಿಕೆ, ರಸ್ತೆ ನಿರ್ಮಾಣ ಮೊದಲಾದ ಕಂಟ್ರಾಕ್ಟರಿಗೆ, ಉದ್ಯೋಗಪತಿ ಗಳಿಗೆ 'ಸ್ವರ್ಗ'. ಎರಡನೆಯದಾಗಿ, ಸಾರ್ವಜನಿಕ ಕ್ಷೇತ್ರವನ್ನು ಬಲಪಡಿಸುವುದಿಲ್ಲ, ವಿಸ್ತರಿಸುವುದಿಲ್ಲ, ದೇಶದ ಭದ್ರತೆಗೆ ಮಾರಕವಾದ ಖಾಸಗೀಕರಣಕ್ಕೆ, ಖಾಸಗೀ ಉದ್ಯೋಗ ಪತಿಗಳು, ಬಂಡವಾಳಗಾರರು, ವಿದೇಶಿ ಉದ್ಯೋಗ ಪತಿಗಳಿಗೆ ನಮ್ಮ ಸಂಪನ್ಮೂಲಗಳನ್ನು, ಕೈಗಾರಿಕೆ-ವಿದ್ಯುತ್ ಉತ್ಪಾದನೆಯ ವಿತರಣೆಯನ್ನೂ, ಭೂಮಿಯನ್ನೂ, ಖಾಸಗೀ ಕ್ಷೇತ್ರಕ್ಕೆ ಒಪ್ಪಿಸುವ ಯೋಚನೆ!. ಇದು ರಾಜ್ಯಕ್ಕೂ ದೇಶಕ್ಕೂ ಮಾರಕವಾದ ಅಪಾಯಕಾರಿ ನೀತಿ, ಖಂಡನೀಯ ನೀತಿ.

ಬೆಲೆ ಇಳಿಕೆಯಲ್ಲಿ, ನಿರುದ್ಯೋಗ ನಿವಾರಣೆಯಲ್ಲಿ, ಅಸಂಘಟಿತ ಕಾರ್ಮಿಕರಿಗೆ, ಅಂಗನವಾಡಿ, ಗ್ರಾಮ ಪಂಚಾಯತಿ ನೌಕರರಿಗೆ ಪರಿಹಾರವಿಲ್ಲ, ಇದು ಸಿದ್ರಾಮಯ್ಯನವರ ಬಜೆಟ್ ಕೊಡುಗೆಯಾಗಿದೆ ಎಚ್ಚರಿಕೆ.

ಪ್ರ

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಐಷಾರಾಮಿಗಳ ವೈಭೋಗದ ಯುಗ ಬರಲಿದೆ

ಬಜೆಟ್ಟಿನಲ್ಲಿ ಆಮದು ಸುಂಕವನ್ನು ಸಾರಾಸಗಟಾಗಿ ಕಡಿತ ಮಾಡಿದ್ದು ಸಾಲದೆಂಬಂತೆ ಈಗ ಕೇಂದ್ರ ಹಣಕಾಸು ಮಂತ್ರಿ ಮಹಾಶಯ ಪಿ.ಚಿದಂಬರಂ ಬಳಕೆ ವಸ್ತುಗಳ ಆಮದನ್ನು ಇನ್ನೂ ಉದಾರೀಕರಣ ಮಾಡಲಾಗುತ್ತದೆ ಎಂದಿದ್ದಾರೆ. ಇದಕ್ಕೆ ಕಾರಣವನ್ನು ಅವರು ವಿವರಿಸಿದ್ದಾರೆ.

ಸದ್ಯಕ್ಕೆ ಭಾರತದ ರೂಪಾಯಿ ಪ್ರಬಲವಾಗುತ್ತಿದೆ. ಅಂದರೆ ಡಾಲರಿಗೆದುರು ರೂಪಾಯಿಯ ಬೆಲೆ ಹೆಚ್ಚುತ್ತಿದೆ. ಇದನ್ನು ಸರಿತೂಗಿಸಲು ಈ ಉದಾರೀಕರಣ ಅತ್ಯವಶ್ಯ ಎಂದಿದ್ದಾರೆ. ಅವರು ಇದು ಇನ್ನೊಂದು ರೀತಿಯಲ್ಲಿ ರೂಪಾಯಿಯ ಅಪಮೌಲ್ಯ ಮಾಡಿದಂತೆ.

ಇಲ್ಲಿ ಈ ಉದಾರೀಕರಣವಾದಿಗಳ ತರ್ಕವನ್ನು ನೋಡಿ: ರೂಪಾಯಿ ಪ್ರಬಲವಾದರೆ ಅದರಿಂದ ಡಾಲರಿನ ಆಕರ್ಷಣೆ ಕಡಿಮೆಯಾಗುತ್ತದೆ. ರಫ್ತು ಮಾಡಲು ರಫ್ತುದಾರರಿಗೆ ಉತ್ಸಾಹವಿರುವುದಿಲ್ಲ. ಆದ್ದರಿಂದ ರೂಪಾಯಿಯ ಬಲವನ್ನು ಕಡಿಮೆ ಮಾಡಬೇಕು. ಆಗ ಡಾಲರು ಆಕರ್ಷಕವಾಗುತ್ತದೆ: ಅದರ ಬೆಲೆ ಹೆಚ್ಚುತ್ತದೆ. ಇದರಿಂದ ರಫ್ತುದಾರರು ಹೆಚ್ಚು ರಫ್ತು ಮಾಡುತ್ತಾರೆ.

ಭಾರತದ ವ್ಯಾಪಾರ ಬಾಕಿ ಕಡಿಮೆಯಾಗುತ್ತದೆ. ಈ ರೂಪಾಯಿ ಬೆಲೆ ಇಳಿಸಲು ಅವರು ಅನುಸರಿಸುವ ವಿಧಾನ ವೇನು? ಬಳಕೆ ವಸ್ತುಗಳ ಆಮದನ್ನು ಉದಾರೀಕರಿಸುವುದು. ಆಗ ಆಮದು ಮಾಡಿಕೊಳ್ಳಲು ಡಾಲರ್ ಅವಶ್ಯವಾಗುತ್ತದೆ. ಡಾಲರಿಗೆ ಬೇಡಿಕೆ ಹೆಚ್ಚುತ್ತದೆ. ಬೇಡಿಕೆ ಹೆಚ್ಚಿದರೆ ಬೆಲೆ ಹೆಚ್ಚುತ್ತದೆ.

ಬಳಕೆ ವಸ್ತುಗಳೆಂದರೆ ಜನಸಾಮಾನ್ಯರು ಬಳಸುವ ಹೇರ್‌ಪಿನ್ನುಗಳಲ್ಲ, ತಂಬಿಗೆ ಕೊಡಗಳಲ್ಲ. ಬದಲಿಗೆ ಅತ್ಯಾಧುನಿಕ ಕಾರುಗಳು, ವಾಚುಗಳು, ಟೇಪ್‌ರೆಕಾರ್ಡರ್, ಟೆಲಿವಿಷನ್, ವಿಡಿಯೋ ಪ್ಲೇಯರ್, ಕ್ಯಾಮರಾ ಇತ್ಯಾದಿ. ಈ ವಸ್ತುಗಳನ್ನು ಬಳಸುವವರಾರು. ಶ್ರೀಮಂತರು ಮಾತ್ರ.

ಇಲ್ಲಿ ಇನ್ನೊಂದು ಸೂಕ್ಷ್ಮವೂ ಇದೆ. ಈ ವಸ್ತುಗಳನ್ನು ಆಮದು ಮಾಡಿಕೊಳ್ಳುವುದರಿಂದ ಅಮೂಲ್ಯವಾದ, ವಿದೇಶಿ ವಿನಿಮಯ ಹೊರಗೆ ಹರಿದು ಹೋಗುತ್ತದೆ. ಬಹುರಾಷ್ಟ್ರೀಯ ಕಂಪನಿಗಳ ವ್ಯಾಪಾರ ಮತ್ತು ಲಾಭ ಹೆಚ್ಚುತ್ತದೆ. ಅದೇ ಸಮಯಕ್ಕೆ ನಮ್ಮ ದೇಶದಲ್ಲಿನ ಈ ವಸ್ತುಗಳನ್ನು ಉತ್ಪಾದಿಸುವ ಉದ್ದಿಮೆಗಳು ನಾಶವಾಗಿ ಅಲ್ಲಿನ ಕೆಲಸಗಾರರು ನಿರುದ್ಯೋಗಿಗಳಾಗುತ್ತಾರೆ.

ಇಷ್ಟೆಲ್ಲಾ ಅನಾಹುತಗಳಾಗುವುದಾದರೂ ಉದಾರೀಕರಣವಾದಿಗಳು ಆಮದು ಉದಾರೀಕರಣವೇ ಲಾಭದಾಯಕ ಎನ್ನುತ್ತಾರೆ. ಯಾರಿಗೆ ಇದು ಲಾಭದಾಯಕ? ನೀವೇ ಹೇಳಿ.

ರಾವ್ ನೀಡಿದ ಲಂಚ

ಜೆಎಂಎಂನ ಶೈಲೇಂದ್ರ ಮೆಹತೋ ಈಗ ನಿಜವನ್ನು ಸಿಡಿಸಿದ್ದಾರೆ. 1993ರ ಜುಲೈ 28ರಂದು ನಡೆದ ವಿಶ್ವಾಸ ಮತದಾನ ಮಾಡಲು ಅಂದಿನ ಪ್ರಧಾನ ಮಂತ್ರಿಗಳಾದ ಪಿ.ವಿ.ನರಸಿಂಹರಾಯರು ತಮಗೆ 50 ಲಕ್ಷ ರೂಪಾಯಿಗಳ ಲಂಚ ನೀಡಿದ್ದರು ಎಂಬುದನ್ನು ಅವರು ಈಗ ಒಡೆದು ಹೇಳಿದ್ದಾರೆ.

ಸಿಬಿಐ ತನಿಖೆಗೆ ಒಳಪಟ್ಟಿರುವ ಈ ಪ್ರಕರಣದಲ್ಲಿ ರಾವ್ ಅವರ ವಿರುದ್ಧ ಸಾಕಷ್ಟು ಪುರಾವೆಗಳಿವೆ ಎಂದು ಸಿಬಿಐ ಆಗಲೇ ಹೇಳಿದೆ. ಈಗ ಶೈಲೇಂದ್ರ ಮಹತೋ ಇಡೀ ಘಟನಾವಳಿಗಳನ್ನು ನೆನಪಿಸಿಕೊಂಡು ಹೇಳಿಕೆ ನೀಡಿದ್ದಾರೆ. ಈ ಹೇಳಿಕೆಯ ವಿವರಗಳು ಕೆಳಗಿನಂತಿವೆ.

ಅಂದಿನ ಕೇಂದ್ರ ಗೃಹ ಮಂತ್ರಿ ಬೂಟಾಸಿಂಗ್ ಜೆಎಂಎಂ ಸಂಸದರಾದ ಸೂರಜ್ ಮಂಡಲ್, ಶಿಬು ಸೊರೇನ್ ಮತ್ತು ಸಿಮೋನ್ ಮರಂಡಿಯವರನ್ನು ತಮ್ಮ ಮನೆಗೆ ಆಹ್ವಾನಿಸಿದರು. ಅಲ್ಲಿಂದ ಅವರೆಲ್ಲಾ ಪಿ.ವಿ.ನರಸಿಂಹರಾಯರ ಮನೆಗೆ ಹೋದರು. ನರಸಿಂಹರಾಯರು ವಿಶ್ವಾಸ ಮತವನ್ನು ತಮ್ಮ ಪರವಾಗಿ ನೀಡುವಂತೆ ಕೋರಿದರು. ಈ ಸಹಾಯ ಮಾಡಿದರೆ ತಾನು ಈ ಸಂಸದನಿಗೆ ಸಹಾಯ ಮಾಡುವುದಾಗಿ ಅವರು ಹೇಳಿದರು.

ಜುಲೈ 28ರಂದು ಎಲ್ಲ ನಾಲ್ವರು ಅವಿಶ್ವಾಸ ಸೂಚನೆಯ ವಿರುದ್ಧ ಮತ ನೀಡಿದರು.

ಜುಲೈ 29ರಂದು ಮಂಡಲರ ಗೃಹದಲ್ಲಿ ಮಂಡಲ್ 50 ಲಕ್ಷ ರೂಪಾಯಿಗಳು ಈಗಾಗಲೇ ಬಂದಿವೆ ಉಳಿದದ್ದು ಇನ್ನೊಂದೆರಡು ದಿನಗಳಲ್ಲಿ ಬರುತ್ತದೆ ಎಂದು ಮೆಹತೋ ಹೇಳಿದರು.

ನರಸಿಂಹರಾಯರ ಮಗ ರಾಜೇಶ್ವರ ರಾವ್ 'ರಾಮ ಲಖನ್ ಸಿಂಗ್ ಯಾದವ್ ಮತ್ತು ಅವರ ಗುಂಪಿಗೂ ತಲಾ 50 ಲಕ್ಷ ರೂಪಾಯಿಗಳು ಮತ್ತು ಒಂದೊಂದು ಪೆಟ್ರೋಲ್ ಬಂಕ್ ಮತ್ತೂ ಹರ್‍ಯಾಣಾ ನಗರ ಅಭಿವೃದ್ಧಿ ಪ್ರಾಧಿಕಾರದ ಒಂದೊಂದು ಸೈಟು ನೀಡಲಾಗಿದೆ" ಎಂದು ಹೇಳಿದರಂತೆ. ಇದಲ್ಲದೆ ಆವತ್ತಿನ ದಿನ ಮತದಾನದಿಂದ ಹೊರಗುಳಿದವರಿಗೆ ತಲಾ 30 ಲಕ್ಷ ರೂಪಾಯಿಗಳನ್ನು ನೀಡಲಾಗಿದೆ ಎಂದರಂತೆ.

ಅನಂತರ ತಮಗೆ 50 ಲಕ್ಷ ರೂಪಾಯಿಗಳನ್ನು ನೀಡಿದ್ದು ಮತ್ತು ಆ ಹಣವನ್ನು ಅವರು ಬ್ಯಾಂಕಿಗೆ ಜಮಾ ಮಾಡಿದ್ದರ ವಿವರವನ್ನು ಮೆಹತೋ ನೀಡಿದ್ದಾರೆ.

ಈ ಹೇಳಿಕೆಯಲ್ಲಿ ಸತ್ಯವಿಲ್ಲದೆ ಇರಲು ಸಾಧ್ಯವಿಲ್ಲ. ಹಾಗಾದರೆ ನಮ್ಮ ಉದಾರೀಕರಣದ ಹರಿಕಾರ ನರಸಿಂಹರಾಯ ಅಧಿಕಾರ ನಡೆಸಿದ್ದೇ ಇಂತಹ ಭ್ರಷ್ಟಾಚಾರದ ಬೃಹತ್ ಕಾಂಡಗಳಿಂದ.

ಇಂತಹ ವ್ಯಕ್ತಿ ಪ್ರತಿಪಾದಿಸುವ ಉದಾರೀಕರಣದಲ್ಲಿ ಎಂತಹ ನೈತಿಕತೆ, ಕಾಳಜಿ ಇದ್ದೀತು ನೀವೇ ಹೇಳಿ?

ಕೊನೆಗೂ ಮೂರು ಕಾಸಿನಷ್ಟು ತೆರಿಗೆ ತೆತ್ತ ರಿಲೈಯನ್ಸ್ ಕಂಪನಿ

ಬಂಡವಾಳಿಗರು ತೆರಿಗೆ ತಪ್ಪಿಸುವುದು ಸಾಮಾನ್ಯ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ತೆರಿಗೆ ತಪ್ಪಿಸಿದವರೂ ಮರ್‍ಯಾದಸ್ಥರೇ. ದಿರೂಭಾಯ್ ಅಂಬಾನಿಯ ರಿಲೈಯನ್ಸ್ ಗುಂಪಿನ ಕಂಪನಿಗಳು ಬಹುದೊಡ್ಡ ಉದ್ದಿಮೆ. ಅಂಬಾನಿ ಕುಟುಂಬದ ಈ ಕಂಪನಿಗಳು ಕಳೆದ 20 ವರ್ಷಗಳಲ್ಲಿ ತೆರಿಗೆ ತೆತ್ತದ್ದೇ ಇಲ್ಲವೆಂದರೆ ನಿಮಗೆ ಆಶ್ಚರ್ಯವಾದೀತು.

ಹಾಗಾದರೆ ಈ ಕಂಪನಿಗಳು ಲಾಭ ಮಾಡಲೇ ಇಲ್ಲವೇನೋ ಪಾಪ ಎಂದಿರಾ. ಈ ಕಂಪನಿಗಳು ಲಾಭ ಮಾಡದೇ ಇಲ್ಲ. ಆದರೆ ತೆರಿಗೆ ಮಾತ್ರ ತೆರಲಿಲ್ಲ. ಈ ಕಂಪನಿಗಳ ಒಟ್ಟು ಆಸ್ತಿಗಳ ಬೆಲೆ ಎಷ್ಟು ಗೊತ್ತೆ? ಹದಿನೈದು ಸಾವಿರ ಕೋಟಿ ರೂಪಾಯಿಗಳು. 1977ರಲ್ಲಿ ಬರೀ 33 ಕೋಟಿ ರೂಪಾಯಗಳ ಆಸ್ತಿಹೊಂದಿದ್ದ ಈ ಕಂಪನಿ ಈಗ 15000 ಕೋಟಿ ರೂಪಾಯಿಗಳ ಆಸ್ತಿ ಹೊಂದಿದ್ದರೆ ಅವೆಲ್ಲಾ ಲಾಭದಿಂದಲೇ ಬಂದವು.

ನಮ್ಮ ದೇಶದ ಕಾನೂನುಗಳನ್ನು ತಮಗೆ ಬೇಕಾದಂತೆ ಅರ್ಥೈಸಿ ತೆರಿಗೆಯನ್ನು ಹೇಗೆ ತಪ್ಪಿಸಬಹುದೆಂಬುದಕ್ಕೆ ಇದು ಜ್ವಲಂತ ಉದಾಹರಣೆ.

ಮಾರ್ಚ್ 1997ಕ್ಕೆ ಕೊನೆಗೊಳ್ಳುವ ಹಣಕಾಸು ವರ್ಷದಲ್ಲಿ ಸುಮಾರು 1200 ಕೋಟಿ ರೂಪಾಯಿಗಳ ಲಾಭವನ್ನು ಕಂಪನಿ ಮಾಡಲಿದೆಯಂತೆ.

ಇಷ್ಟೆಲ್ಲಾ ಲಾಭಕ್ಕೆ ಈ ಕಂಪನಿ ಈಗ ತೆತ್ತಿರುವ ಮುಂಗಡ ತೆರಿಗೆ ಎಷ್ಟು ಗೊತ್ತೆ? ಬರೀ 50 ಕೋಟಿ ರೂಪಾಯಿಗಳು. ಇಷ್ಟನ್ನೂ ತೆರಬೇಕಾದ ಅವಶ್ಯಕತೆ ಇರಲಿಲ್ಲ. ಒಳ್ಳೆಯ ಸಂಪ್ರದಾಯ ಹಾಕಬೇಕೆಂದು ತೆರಿಗೆ ತೆರುತ್ತಿದ್ದೇವೆಂದು ಈ ಕಂಪನಿಯ ಮಾಲಿಕ ಮಹಾಶಯ ಹೇಳಿದ್ದಾನೆ.

ಹೇಗಿದೆ ಈ ನ್ಯಾಯ?

ಧಣಿ ಹೇಳುತ್ತಾನೆ ತಲೆಬಾಗಿ ಕೇಳು

ಈ ಧಣಿ ಐಎಂಎಫ್‌ನ ಅಧ್ಯಕ್ಷ ಮೈಕೆಲ್ ಕ್ಯಾಮಡೆಸಸ್. ಐಎಂಎಫ್ ವಿಶ್ವಬ್ಯಾಂಕ್‌ಗಳ ಅಧ್ಯಕ್ಷರುಗಳು ನಮ್ಮ ದೇಶದ ಬಜೆಟ್ ಸಮಯದಲ್ಲಿ ಭಾರತ ಭೇಟಿಗೆ ಬರುವುದು. ಮತ್ತು ಬಜೆಟ್ಟಿನ ಹಿಂದೆ ಮುಂದೆ ನಮ್ಮ ಹಣಕಾಸು ಮಂತ್ರಿ, ಪ್ರಧಾನಮಂತ್ರಿಗಳು ಯಾವುದೇ ಜಾಗತಿಕ ಸಭೆಯಲ್ಲಿ ಇವರನ್ನು ಭೇಟಿ ಮಾಡುವುದು ಕಾಕತಾಳೀಯವೇನಿರಲಿಕ್ಕಿಲ್ಲ. ಅವರು ಅವರ ವ್ಯವಹಾರಕ್ಕಾಗಿಯೇ ಬರುತ್ತಾರೆ/ಭೇಟಿ ಮಾಡುತ್ತಾರೆ.

ಈ ಕ್ಯಾಮಡೆಸಸ್ ಮಹಾಶಯ ಈ ಸಾರಿ ಬಂದವನು ರೂಪಾಯಿಯ ಪೂರ್ಣ ಪರಿವರ್ತನೀಯತೆಯೆಡೆಗೆ ಕೆಲಸ ಮಾಡಿ ಎಂದು ನಮ್ಮ ಪ್ರಧಾನಮಂತ್ರಿ ಮತ್ತು ಹಣಕಾಸು ಮಂತ್ರಿ ಪಿ.ಚಿದಂಬರಂಗಳಿಗೆ ಆದೇಶ ನೀಡಿದ್ದಾನೆ. ಇದರಿಂದ ಭಾರತದ ಆರ್ಥಿಕ ಜಾಗತಿಕ ಆರ್ಥಿಕದೊಳಗೆ ಸುಲಭವಾಗಿ ಮಿಳಿತಗೊಂಡು ಜಾಗತೀಕರಣವಾಗುತ್ತದೆ ಎಂದಿದ್ದಾನೆ. ಈತ ದೇಶದ ಹಿತೈಷಿಯೇನೋ ಎಂಬಂತೆ 'ಭಾರತ ಕೂಡಲೇ ದುಮುಕುವುದು ನಮಗೆ ಬೇಕಿಲ್ಲ. ಆದರೆ ಹಂತ ಹಂತವಾಗಿ ತ್ವರಿತವಾಗಿ ರೂಪಾಯಿಯ ಪೂರ್ಣ ಪರಿವರ್ತನೀಯತೆ ತರಬೇಕು" ಎಂದಿದ್ದಾನೆ.

ಮತ್ತೂ ಮುಂದುವರೆದು ಪೂರ್ಣ ಪರಿವರ್ತನೀಯತೆಗೆ ಆರ್ಥಿಕ ಅಂಶಗಳು ಪ್ರಬಲವಾಗಿರಬೇಕು. ವಿದೇಶೀ ವಿನಿಮಯದ ಮೀಸಲು ಸಾಕಷ್ಟಿರಬೇಕು. ಆರ್ಥಿಕದ ಅಡಿಪಾಯ ಗಟ್ಟಿಯಾಗಿರಬೇಕು ಎಂದು ಹೇಳಿದ್ದಾನೆ.

ಆದರೆ ಇವರಿಗೆ ಭಾರತ ಪ್ರಬಲವಾದ ಆರ್ಥಿಕವಾಗಬೇಕೆಂಬ ಬಯಕೆಯಿಲ್ಲ. ಬದಲಿಗೆ ಭಾರತ ಅಭಿವೃದ್ಧಿ ಹೊಂದಿದ ದೇಶಗಳ ಲಾಭದಾಯಕ ವ್ಯವಹಾರಗಳಿಗೆ ಅನುಕೂಲವಾಗಿರಬೇಕು ಎಂಬುದೇ ಇದೆ. ಈ ಕರಾಳ ಹೇತುವಿಗೆ ಎಂತಹ ಮೆರಗು ನೀಡಿ ಮಾತನಾಡುತ್ತಾರೆ? ನೀವೇ ಯೋಚಿಸಿ ಹೇಳಿ?

ಇದು ನಿಮಗೆ ಗೊತ್ತೆ?

ಇದು ನಿಮಗೆ ಗೊತ್ತೆ? ಎಂಬುದನ್ನು ವಿಚಾರ ಮಾಡಿ ಹೇಳಿ.

ಹಲವು ಬಹುರಾಷ್ಟ್ರೀಯ ಕಂಪನಿಗಳು ಜಗತ್ತಿನ ಬಹುತೇಕ ದೇಶಗಳಿಗಿಂತ ಹೆಚ್ಚು ಸಂಪತ್ತುಳ್ಳವಂತೆ. ವಿಶ್ವ ಸಂಸ್ಥೆಯ ವಿಶ್ಲೇಷಣೆಯೊಂದರ ಪ್ರಕಾರ ಇದು ತಿಳಿದು ಬಂದಿದೆ. ಈ ಬಹುರಾಷ್ಟ್ರೀಯ ಕಂಪನಿಗಳು ಮೂರನೇ ಜಗತ್ತಿನ ದೇಶಗಳಿಗೆ ತೀರಾ ಅಪಾಯಕಾರಿಯಾಗಬಲ್ಲವು ಎಂದು ಈ ವಿಶ್ಲೇಷಣೆ ತಿಳಿಸಿದೆ.

ನೂರು ಅತಿ ಶ್ರೀಮಂತ ಬಹುರಾಷ್ಟ್ರೀಯ ಕಂಪನಿಗಳನ್ನು ತೆಗೆದುಕೊಂಡರೆ ಅವುಗಳಲ್ಲಿ 50 ಮೆಗಾ ಕಾರ್ಪೋರೇಶನ್ ಎಂದು ಕರೆಯಬಹುದಾದಷ್ಟು ದೊಡ್ಡವಂತೆ. ಈಗ ಜಾಗತೀಕರಣದಿಂದ ಈ ಮೆಗಾ ಕಾರ್ಪೋರೇಶನ್‌ಗಳು ಬಡ ದೇಶಗಳ ಶಕ್ತಿ, ಅಧಿಕಾರವನ್ನು ತುಳಿಯಬಲ್ಲಂತಹವು.

ಮೂರನೇ ಜಗತ್ತಿನ ದೇಶಗಳ ಬಗೆಗಿನ ತಜ್ಞ ಡಾ|ಕೋರ್ಟಿನ್ ಪ್ರಕಾರ ಈ ಕಾರ್ಪೋರೇಶನ್‌ಗಳು ತಮ್ಮ ಲಾಭದ ಬಗ್ಗೆ ಯಾವಾಗಲೂ ಚಿಂತಿಸುತ್ತಿರುತ್ತವೆ ಹೊರತು ಬೇರೇನೂ ಅಲ್ಲ. ಇದಕ್ಕಾಗಿ ನಮ್ಮ ಪ್ರತಿಸ್ಪರ್ಧಿಗಳನ್ನು ರಾಜಕೀಯ ಮತ್ತು ಆರ್ಥಿಕ ಶಕ್ತಿ ಬಳಸಿ ಓಡಿಸುವ ಹುನ್ನಾರದಲ್ಲಿರುತ್ತವಂತೆ. ಲಾಭಕ್ಕಾಗಿ ಅತ್ಯಂತ ಆಧುನಿಕ ತಂತ್ರಜ್ಞಾನ ಬಳಸುವ ಇವು ಕೋಟಿಗಟ್ಟಲೆ ಜನರನ್ನು ನಿರುದ್ಯೋಗಿಗಳನ್ನಾಗಿಸುತ್ತವೆ.

ಅವರು ಮೂರನೇ ಜಗತ್ತಿನ ದೇಶಗಳು ರಫ್ತಿನ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಬೇಕು. ವಿದೇಶೀ ಹೂಡಿಕೆಯ ಮೇಲೂ ಅವಲಂಬಿಸಬಾರದು ಬದಲಿಗೆ ತಮಗೆ ಎಂತಹ ಹೂಡಿಕೆ ಬೇಕು ಎಂಬುದನ್ನು ತಾವೇ ನಿರ್ಧರಿಸಬೇಕು ಎಂದು ಸೂಚಿಸಿದ್ದಾರೆ.

ಉದಾರೀಕರಣದಿಂದಾಗಿ ಭಾರತದೊಳಗೆ ಇಂತಹದೇ ಅಪಾಯವನ್ನು ಸೃಷ್ಟಿಸಲಾಗುತ್ತಿದೆ. ಭಾರತಕ್ಕೆ ಇದು ಎಚ್ಚರಿಕೆಯ ಘಂಟೆಯಲ್ಲವೇ? ಎಂಬುದು ಸ್ಪಷ್ಟ.

"ಜನಗಳ ಹಿತಾಸಕ್ತಿ ಗಮನಿಸಿ ಧೋರಣೆ ರೂಪಿಸಿ"

ಪುಟ 1ರಿಂದ

ಅಧಿಕಾರ ಹೊಂದಿರಬೇಕು ಎಂದು ಸಲಹೆ ಮಾಡಿದ್ದಾರೆ. ಪ್ರಸಿದ್ಧ ನ್ಯಾಯಾಂಗ ತಜ್ಞರು ಮತ್ತು ಇತರ ಪ್ರತಿನಿಧಿಗಳಿರುವ ಈ ಆಯೋಗಕ್ಕೆ ಸ್ವತಂತ್ರ ಸ್ವರೂಪವಿರಬೇಕು. ಈಗಾಗಲೇ ವಕೀಲರ ಮತ್ತು ಇತರನ್ಯಾಯಾಂಗ ಸಂಘಟನೆಗಳು ಇಂತಹ ಪ್ರಸ್ತಾವವನ್ನು ಮುಂದಿಟ್ಟಿವೆ ಎಂದು ಎಡಪಕ್ಷಗಳು ಪ್ರಧಾನ ಮಂತ್ರಿಗಳಿಗೆ ತಮ್ಮ ಪತ್ರದಲ್ಲಿ ನೆನಪಿಸಿದ್ದಾರೆ.

ಅಧಿಕಾರದ ದುರುಪಯೋಗವನ್ನು ಕಾನೂನು ಬದ್ಧಗೊಳಿಸಬೇಡಿ

ಮುಂದುವರಿದು ಎಡ ಪಕ್ಷಗಳ ಪ್ರಧಾನ ಕಾರ್ಯದರ್ಶಿಗಳ ಈ ಪತ್ರ ಹಿಂದಿನ ಕೇಂದ್ರ ಪೆಟ್ರೋಲಿಯಂ ಮಂತ್ರಿ ಪೆಟ್ರೋಲ್ ಪಂಪ್‌ಗಳು ಹಾಗೂ ಗ್ಯಾಸ್ ಏಜೆಂಸಿಗಳ ನೀಡಿಕೆಯಲ್ಲಿ ತನ್ನ ಅಧಿಕಾರದ ದುರುಪಯೋಗ ಮಾಡಿದ್ದು, ಅದನ್ನೀಗ ಊರ್ಜಿತಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂಬ ಮಾತನ್ನು ಪ್ರಸ್ತಾಪಿಸುತ್ತಾ ಈ ಅಂಶ ಈಗಾಗಲೇ ನ್ಯಾಯಾಲಯದ ಮುಂದಿರುವಾಗ ಅಧಿಕಾರದ ದುರುಪಯೋಗವನ್ನು ಕಾನೂನು ಬದ್ಧಗೊಳಿಸುವ ಕ್ರಮ ಸರಿಯಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಸಂಯುಕ್ತ ರಂಗದ 'ಸಮಾನ ಕನಿಷ್ಠ ಕಾರ್ಯಕ್ರಮ' ಮಂತ್ರಿಗಳು ತಮ್ಮ ಮರ್ಜಿಗೆ ಅನುಸಾರವಾಗಿ ಕೋಟಾ ಹಂಚುವ ಪದ್ಧತಿಯನ್ನು ರದ್ದು ಮಾಡಬೇಕು ಎಂದಿದೆ ಎಂಬುದನ್ನು ಎಡಪಕ್ಷಗಳ ಮುಖಂಡರು ಪ್ರಧಾನ ಮಂತ್ರಿಗಳಿಗೆ ನೆನಪಿಸಿದ್ದಾರೆ..

ವಿದ್ಯುತ್ತಿನ ವಿತರಣೆ, ರವಾನೆಯಲ್ಲಿ ಖಾಸಗಿ ವಲಯದ ಪ್ರವೇಶಕ್ಕೆ ಅನುಕೂಲ ಮಾಡಿಕೊಡುವಂತೆ ವಿದ್ಯುತ್ ಶಾಸನವನ್ನು ತಿದ್ದುಪಡಿ ಮಾಡುವ ಒಂದು ಮಸೂದೆಯನ್ನು ತರುತ್ತಿರುವ ಬಗ್ಗೆ ಎಡಪಕ್ಷಗಳ ಮುಖಂಡರು ತಮ್ಮ ತೀವ್ರ ಆತಂಕವನ್ನು ಪಧಾನಿಗಳಿಗೆ ಬರೆದ ಪತ್ರದಲ್ಲಿ ವ್ಯಕ್ತ ಮಾಡಿದ್ದಾರೆ. ಈ ಮಸೂದೆಯ ಪ್ರಕಾರ ಪ್ರತಿಯೊಂದು ರಾಜ್ಯ ಸರಕಾರ ತನ್ನ ರಾಜ್ಯದೊಳಗೆ ಹಾಗೂ ಕೇಂದ್ರ ಸರಕಾರ ಅಂತರ-ರಾಜ್ಯ ವಿದ್ಯುತ್ ರವಾನೆಗೆ ಕುರಿತಂತೆ ಖಾಸಗಿ ಕಂಪನಿಗಳಿಗೆ ಪರವಾನಿಗೆ ನೀಡಬಹುದು. ವಿದ್ಯುತ್ ರವಾನೆಯ ಸಂಸ್ಥೆಗಳ ಸಂಖ್ಯೆಯನ್ನು ಹೆಚ್ಚಿಸುವುದಾಗಲೀ, ವಿದ್ಯುತ್ ಉತ್ಪಾದನೆ ಮತ್ತು ರವಾನೆಯನ್ನು ಪ್ರತ್ಯೇಕಿಸುವುದನ್ನು ಪ್ರೋತ್ಸಾಹಿಸುವುದಾಗಲೀ ಸಂಪೂರ್ಣ ತರ್ಕಹೀನ ಎಂದಿರುವ ಎಡಪಕ್ಷಗಳ ಮುಖಂಡರು ಇದರಿಂದ ವಿದ್ಯುತ್ ಗ್ರಿಡ್ ವ್ಯವಸ್ಥೆಯಲ್ಲಿ ಆರಾಜಕತೆ ಮತ್ತು ಕಾರ್ಯನಿರ್ವಹಣೆಯಲ್ಲಿ ದೋಷಗಳು ಉಂಟಾಗುತ್ತವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ವಿದ್ಯುತ್ ವಲಯದ ಬಿಕ್ಕಟ್ಟು ಇನ್ನಷ್ಟು ಉಲ್ಬಣಗೊಂಡು ವಿದ್ಯುತ್ತಿನ ಸಮತೋಲದ ವಿತರಣೆಗೆ ಭಾರೀ ಪೆಟ್ಟು ಬೀಳುತ್ತದೆ ಹಾಗೂ ಬಳಕೆದಾರರು ಹೆಚ್ಚಿನ ದರ ತೆರಬೇಕಾಗುತ್ತದೆ. ಆದ್ದರಿಂದ ಸರಕಾರ ಈ ಅಂಶದ ಬಗ್ಗೆ, ವಿದ್ಯುತ್ ವಲಯ ಮತ್ತು ದೇಶದ ಆರ್ಥಿಕದ ಮೇಲೆ ಇದರ ಪರಿಣಾಮಗಳ ಬಗ್ಗೆ ಸರಿಯಾದ ಚರ್ಚೆ ನಡೆಯಲು ಅವಕಾಶ ಮಾಡಿಕೊಡಲು ಈ ಮಸೂದೆಯನ್ನು ಮುಂದೂಡಬೇಕು ಎಂದು ಎಡಪಕ್ಷಗಳು ಪ್ರಧಾನಿಗಳನ್ನು ಆಗ್ರಹ ಪಡಿಸಿವೆ.

ಹಿಂದಿನ ಚುನಾವಣೆಗಳಲ್ಲಿ ಎಲ್ಲಾ ಪ್ರಮುಖ ರಾಷ್ಟ್ರೀಯ ರಾಜಕೀಯ ಪಕ್ಷಗಳು ಭರವಸೆ ನೀಡಿರುವ ಮಹಿಳಾ ಮೀಸಲಾತಿ ಮಸೂದೆಯಲ್ಲಿ ಇನ್ನೂ ವಿಳಂಬವಾಗುತ್ತಿರುವ ಬಗ್ಗೆ ತೀವ್ರ ಖೇದ ವ್ಯಕ್ತಪಡಿಸಿರುವ ಎಡ ಪಕ್ಷಗಳ ಮುಖಂಡರು ಈ ಸಂಸತ್ ಅಧಿವೇಶನದಲ್ಲೇ ಈ ಮಸೂದೆಯನ್ನು ಅಂಗೀಕರಿಸುವಂತೆ ಮಾಡುವುದು ಸಂಯುಕ್ತ ರಂಗ ಸರಕಾರದ ಅಧ್ಯ ಕರ್ತವ್ಯ ಎಂದು ಹೇಳಿದ್ದಾರೆ.

"ಸಮಾನ ಕನಿಷ್ಠ ಕಾರ್ಯಕ್ರಮ"ದ ಇನ್ನೊಂದು ವಚನವಾದ ಕೃಷಿಕೂಲಿಕಾರರಿಗೆ ಕೇಂದ್ರೀಯ ಶಾಸನ ಕುರಿತಾದ ಮಸೂದೆಯನ್ನು ಕೂಡಾ ಸರಕಾರ ಇನ್ನಷ್ಟು ವಿಳಂಬ ಮಾಡದೆ ಸಂಸತ್ತಿನ ಮುಂದೆ ತರಬೇಕು ಎಂದಿರುವ ಈ ಮುಖಂಡರು ಎಡಪಕ್ಷಗಳು ಈ ಶಾಸನಕ್ಕೆ ಬಹಳ ಮಹತ್ವ ನೀಡುತ್ತವೆ, ಏಕೆಂದರೆ ಇದು ಗ್ರಾಮೀಣ ಬಡ ಜನರಲ್ಲಿ ಅತೀ ಹೆಚ್ಚು ಸಂಕಷ್ಟಪೀಡಿತರಾದ ಜನಗಳಿಗೆ ಪ್ರಯೋಜನಕಾರಿಯಾಗುತ್ತದೆ ಎಂದು ಹೇಳಿದ್ದಾರೆ.



ಉತ್ತರಪ್ರದೇಶದಲ್ಲಿ ಮತ್ತೊಮ್ಮೆ ಬಿಜೆಪಿ-ಬಿಎಸ್‌ಪಿ ಸಮಯಸಾಧಕತನ

ಉತ್ತರ ಪ್ರದೇಶದಲ್ಲಿ ಒಂದೂವರೆ ವರ್ಷದ ಹಿಂದೆ ತನ್ನ ಬೆಂಬಲವನ್ನು ಹಿಂದಕ್ಕೆ ಪಡೆದು ಉರುಳಿಸಿದ ಮಾಯಾವತಿಯನ್ನು ಬೆಂಬಲಿಸಲು, ಆಕೆಯ ಪಕ್ಷದೊಡನೆ ಸೇರಿ ಸರಕಾರವನ್ನು ರಚಿಸಲು ಈಗ ಬಿಜೆಪಿ ಮುಂದಾಗಿದೆ. ಈ ಮೂಲಕ ತನ್ನ ಸಮಯ ಸಾಧಕ ಅಧಿಕಾರದಾಹದ ರಾಜಕೀಯದ ಇತಿಹಾಸದಲ್ಲಿ ಇನ್ನೊಂದು ಪುಟವನ್ನು ಸೇರಿಸಿಕೊಂಡಿದೆ. ರಾಜ್ಯ ಮಟ್ಟದಲ್ಲಿ "ರೊಟೇಶನ್"ನಲ್ಲಿ ಮುಖ್ಯಮಂತ್ರಿ ಪದವಿಯನ್ನು ಹಂಚಿಕೊಳ್ಳುವ 'ಸರದಿ ರಾಜಕೀಯ'ವನ್ನು ಆರಂಭಿಸಿದ ಅಪಕೀರ್ತಿಗೂ ಈಗ ಅದು ಒಳಗಾಗಿದೆ. 13 ದಿನಗಳ ಮಾಜಿ ಪ್ರಧಾನಿ ವಾಜಪೇಯಿಯವರ ನಿವಾಸದಲ್ಲಿ ನಡೆದ ಭೋಜನ ಕೂಟದಲ್ಲಿ ಬಿಜೆಪಿ ಮತ್ತು ಬಿಎಸ್‌ಪಿ ಮುಖಂಡರು ಈ ನಿರ್ಣಯಕ್ಕೆ ಬಂದರಂತೆ. ಮೊದಲ ಆರು ತಿಂಗಳು ಮಾಯಾವತಿ ಮುಖ್ಯಮಂತ್ರಿಯಾಗಿ ಕಾನ್ಶೀರಾಮ್‌ರವರ ಒಂದಂಶದ ಬೇಡಿಕೆ ಈಡೇರಿಸಿ ಆರು ತಿಂಗಳ ನಂತರ ಬಿಜೆಪಿಯ ಕಲ್ಯಾಣ್‌ಸಿಂಗ್ ಮುಖ್ಯಮಂತ್ರಿಯಾಗುತ್ತಾರಂತೆ. ಒಂದು ವರ್ಷದನಂತರ ಈ ವ್ಯವಸ್ಥೆಯ ವಿಮರ್ಶೆ ಮಾಡಲಾಗುವುದಂತೆ.

ಬಿಜೆಪಿ ಬೆಂಬಲ ಪಡೆದ ಹಿಂದಿನ ಬಿಎಸ್‌ಪಿ ಸರಕಾರ ನಾಲ್ಕು ತಿಂಗಳಷ್ಟೇ ಇತ್ತು. ಬಿಜೆಪಿ ಸರದಿ ಮುಖ್ಯಮಂತ್ರಿ ಕಲ್ಯಾಣ್‌ಸಿಂಗ್‌ರಿಗೆ ಈ ವ್ಯವಸ್ಥೆ ಒಪ್ಪಿಗೆಯಿರಲಿಲ್ಲ ಎಂಬ ಸುದ್ದಿಗಳೂ ಇವೆ. "ನಾನು ಯಥಾಸ್ಥಿತಿವಾದಕ್ಕೆ ವಿರೋಧಿ. ಭವಿಷ್ಯದ ಬಗ್ಗೆ ಯಾವ ಗ್ಯಾರಂಟಿಯನ್ನೂ ಕೊಡಲಾರೆ" ಎಂಬ ಎಂದಿನ ಅಬ್ಬರದ ಕಾನ್ಶೀರಾಮ್‌ರವರ ನುಡಿ ಬಿಜೆಪಿಯ ಹಲವರಲ್ಲಿ ಸಂದೇಹವನ್ನು ಸರಕಾರ ರಚನೆಯ ಮೊದಲೇ ಹುಟ್ಟಿಸಿದೆಯಂತೆ.

ಉತ್ತರ ಪ್ರದೇಶದ ರಾಜ್ಯಪಾಲರು ಬಿಎಸ್‌ಪಿ-ಬಿಜೆಪಿ ಸರಕಾರ ರಚನೆಗೆ ಅನುವು ಮಾಡಿಕೊಟ್ಟ ನಂತರ ಬಿಜೆಪಿ ಲೋಕಸಭೆಯಲ್ಲಿ ಮಂಡಿಸಿದ್ದ ತನ್ನ ನಿಲುವಳಿಯನ್ನು ಹಿಂತೆಗೆದುಕೊಂಡಿದೆ. ಉತ್ತರಪ್ರದೇಶದಲ್ಲಿ ರಾಜ್ಯಪಾಲ ಭಂಡಾರಿಯವರ ಆಡಳಿತದಲ್ಲಿ "ಅರಾಜಕತೆ, ವಿನಾಶ" ತಾಂಡವವಾಡುತ್ತಿದೆಯಾದ್ದರಿಂದ ಅವರನ್ನು ರಾಜ್ಯಪಾಲ ಹುದ್ದೆಯಿಂದ ವಜಾ ಮಾಡಬೇಕು ಎಂದು ಲೋಕಸಭೆಯಲ್ಲಿ ಭಾರೀ ಗದ್ದಲ ಎಬ್ಬಿಸಿದ ಬಿಜೆಪಿ ಮುಖಂಡರು ಈಗ ಸದ್ದಿಲ್ಲದೆ ತಮ್ಮ ನಿಲುವಳಿಯನ್ನು ವಾಪಸು ಪಡೆದಿದ್ದಾರೆ. ಇದ್ದಕ್ಕಿದ್ದಂತೆ ರೊಮೇಶ್ ಬಂಡಾರಿ ಒಳ್ಳೆಯ ಮನುಷ್ಯ ದಕ್ಷ ವ್ಯಕ್ತಿಯಾಗಿ ಬಿಟ್ಟನೇ ಎಂದು ಸಂಯುಕ್ತ ರಂಗದ ಮುಖಂಡರ ಛೇಡಿಕೆಗಳಿಗೆ ಉತ್ತರ ಕೊಡಲಾರದೆ ಮೌನವಾಗಿದ್ದಾರೆ. ಆದರೆ ಅವರ ಮುಖ್ಯಮಂತ್ರಿ ಮಾಯಾವತಿ ರೊಮೇಶ್ ಬಂಡಾರಿ ತೊಲಗಬೇಕು ಎಂದು ಹೇಳಿದ್ದಾರೆ!

ವಾಸ್ತವವಾಗಿ ಬಿಜೆಪಿ ಈ ನಿಲುವಳಿ ತಂದದ್ದು ಉತ್ತರಪ್ರದೇಶದಲ್ಲಿನ ತನ್ನ ಹತಾಶೆಯನ್ನು ಮರೆಮಾಚಲು. ಈಗ ಬಿಎಸ್‌ಪಿ ಕೃಪೆಯಿಂದ ಈ ಹತಾಶೆ ತಾತ್ಕಾಲಿಕವಾಗಿ ಶಮನಗೊಂಡಿರುವಾಗ ಆ ನಿಲುವಳಿ ಏಕೆ ಬೇಕು? ಲೋಕಸಭೆಯಲ್ಲಿ ಈ ನಿಲುವಳಿಯ ಮೇಲೆ ಚರ್ಚೆ ನಡೆದಿದ್ದರೂ ಬಿಜೆಪಿಯ ಪಾತ್ರ ಬಯಲಾಗುತ್ತಿತ್ತು. ಈಗಲೂ ಅದು ಬಯಲಾಗಿದೆ. ಮಾಯಾವತಿ ಮತ್ತು ಬಿಜೆಪಿ ಮುಖಂಡರು ಉತ್ತರಪ್ರದೇಶದಲ್ಲಿನ ಹಲವು ಹಗರಣಗಳ ತನಿಖೆಯಾಗುವುದೆಂದು ಹೇಳಿದ್ದಾರೆ. ಆದರೆ ಇತ್ತೀಚೆಗೆ ಬಿಜೆಪಿಯ ಒಬ್ಬ ಪ್ರಮುಖ ಶಾಸಕ ಬ್ರಹ್ಮದತ್ ದ್ವಿವೇದಿಯವರ ಕೊಲೆಯ ತನಿಖೆಯ ಬಗ್ಗೆ ಏನೂ ಹೇಳಲಿಲ್ಲ. ಈ ಕೊಲೆಯಲ್ಲಿ ಬಿಜೆಪಿಯ ಒಂದು ವಿಭಾಗವೂ ಶಾಮೀಲಾಗಿದೆ ಎಂಬ ಆರೋಪ ಇದೆ.

ಉತ್ತರ ಪ್ರದೇಶದ ಜನ ನಿಜವಾಗಿಯೂ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ರಾಜ್ಯಪಾಲರ ನೇತೃತ್ವದ ಆಡಳಿತ ಜನಗಳ ಕೆಲವು ಪ್ರಮುಖ ಸಮಸ್ಯೆಗಳನ್ನು ಕೈಗೆತ್ತಿಕೊಂಡಿರಲಿಲ್ಲ. ಕಬ್ಬು ಬೆಳೆಗಾರರಿಗೆ ತಮ್ಮ ಕಬ್ಬನ್ನು ಮಿಲ್ಲುಗಳಿಗೆ ಮಾರಲು ಆಗುತ್ತಿಲ್ಲ, ದಿನವಿಡೀ ವಿದ್ಯುತ್ ಕಡಿತ ರಾಜ್ಯದ ಎಲ್ಲೆಡೆ ವ್ಯಾಪಕವಾಗಿದೆ, ಅಧಿಕಾರಶಾಹೀ ಯಂತ್ರ ಭ್ರಷ್ಟಾಚಾರದಿಂದ ಕೂಡಿದೆ, ಅಲ್ಪಸ್ವಲ್ಪವಿದ್ದ ರೇಶನ್ ವ್ಯವಸ್ಥೆಯೂ ಕುಸಿದಿದೆ, ಇವೆಲ್ಲದರ ಫಲವಾಗಿ ಅಪರಾಧಗಳ ಸಂಖ್ಯೆ ವಿಪರೀತವಾಗಿದೆ. ರಾಜ್ಯ ಆಡಳಿತ ಮನಬಂದಂತೆ ಖಾಸಗೀಕರಣ ನಡೆಸಿ ಸಾವಿರಾರು ಕಾರ್ಮಿಕರನ್ನು ಬೀದಿಗೆಸೆಯುತ್ತಿದೆ. ಆದರೆ ಬಿಜೆಪಿ ಸಂಸತ್ತಿನಲ್ಲಿ ರಾಜ್ಯಪಾಲರ ವಿರುದ್ಧ ನಿಲುವಳಿ ಮಂಡಿಸಿದಾಗ ಇವನ್ನೆಲ್ಲಾ ಗಮನಕ್ಕೆ ತೆಗೆದುಕೊಂಡಿಲ್ಲ ಎಂಬುದು ಈಗ ಅದನ್ನು ಹಿಂತೆಗೆದುಕೊಂಡಿರುವುದರಿಂದ ಸ್ಪಷ್ಟವಾಗಿದೆ. ಹೀಗಿರುವಾಗ ಸಮಯಸಾಧಕರ ಹೊಸ ಸರಕಾರ ಜನಗಳ ಈ ತುರ್ತು ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಬಹುದೆಂಬ ನಿರೀಕ್ಷೆ ಉತ್ತರಪ್ರದೇಶದ ಜನಸಾಮಾನ್ಯರಿಗೆ ಇರಲು ಹೇಗೆ ಸಾಧ್ಯ.

ಜನಗಳ ಹಿತಾಸಕ್ತಿ ಈಡೇರಿಸುವ ಸುಭದ್ರ ಸರಕಾರದ ನಿರೀಕ್ಷೆಯಿಲ್ಲ

-ಸಿಪಿಐ(ಎಂ) ಪಾಲಿಟ್‌ಬ್ಯೂರೋ

ಉತ್ತರ ಪ್ರದೇಶದಲ್ಲಿ ಬಿಜೆಪಿ-ಬಿಎಸ್‌ಪಿ ಮತ್ತೊಮ್ಮೆ ಜೊತೆಗೂಡಿರುವುದರಿಂದ ಅಲ್ಲಿ ಚುನಾವಣೆಗಳ ನಂತರ ಉಂಟಾಗಿರುವ ದೀರ್ಘ ಅನಿಶ್ಚಿತತೆ ಕೊನೆಗೊಂಡಿದ್ದರೂ ಈ ಸಿನಿಕ ವ್ಯವಸ್ಥೆ ಜನಗಳ ಹಿತಾಸಕ್ತಿ ಈಡೇರಿಸುವ ಒಂದು ಸುಭದ್ರವೆನಿಸುವ ಸರಕಾರವನ್ನು ನೀಡುವ ನಿರೀಕ್ಷೆ ಅಷ್ಟೇನೂ ಇಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಪ್ರತಿಕ್ರಿಯಿಸಿದೆ. ಈ ಕೂಟದಲ್ಲಿ ಒಂದು ಪಕ್ಷ 'ಹಿಂದುತ್ವ'ವನ್ನು ಪ್ರತಿಪಾದಿಸಿದರೆ, ಇನ್ನೊಂದು 'ಮನುವಾದಿ' ಶಕ್ತಿಗಳ ವಿರುದ್ಧ ಹೋರಾಡುತ್ತೇವೆ ಎನ್ನುತ್ತಿರುವಾಗ ಇವೆರಡರ ನಡುವಿನ ಮೂಲಭೂತ ವೈರುಧ್ಯವನ್ನು ಪರಿಹರಿಸಲು ಸಾಧ್ಯವಿಲ್ಲವೆಂದು ಪೊಲಿಟ್‌ಬ್ಯೂರೋ ಹೇಳಿದೆ.

ಆರು ತಿಂಗಳಿಗೊಮ್ಮೆ ಸರದಿ ಪ್ರಕಾರ ಮುಖ್ಯಮಂತ್ರಿಗಳನ್ನು ಬದಲಿಸುವ ಸಿನಿಕ ಪ್ರಸ್ತಾಪವೇ ಈ ಕೂಟದಲ್ಲಿ ಸರಕಾರದ ನಾಯಕತ್ವದ ಬಗ್ಗೆ ಬಗೆಹರಿಸಲಾರದ ಒತ್ತಡಗಳಿವೆ ಎಂಬುದನ್ನು ಸಾಬೀತು ಮಾಡಿದೆ. ಇಂತಹ ಒಂದು ಸಿನಿಕ ಒಪ್ಪಂದ ಆಡಳಿತದ ಮೇಲೆ ಎಂತಹ ಪರಿಣಾಮ ಬೀರಬಹುದೆಂದು ಯಾರೂ ಬೇಕಾದರೂ ಊಹಿಸಿಕೊಳ್ಳಬಹುದು ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಬಿಎಸ್‌ಪಿ ಪಕ್ಷ ಬಿಜೆಪಿಯತ್ತ 'ಪಕ್ಷಾಂತರ' ಹೊಂದಿರುವುದು ಮಾಯಾವತಿಯ ನೇತೃತ್ವದಲ್ಲಿ ಒಂದು ಜಾತ್ಯಾತೀತ ಸರಕಾರ ರಚಿಸಲಾಗುವುದು ಎಂದು ಕಾಂಗ್ರೆಸ್ (ಐ) ಮತ್ತೆ-ಮತ್ತೆ ಹೇಳಿದ ಮಾತುಗಳ ಟೊಳ್ಳುತನವನ್ನು ಬಯಲಿಗೆಳೆದಿದೆ. ಬಿಎಸ್‌ಪಿ ಜಾತ್ಯಾತೀತ ನೀತಿಗಳಿಗೆ ಬದ್ಧವಾಗಲು ನಿರಾಕರಿಸುತ್ತಿರುವುದರಿಂದ ಆಕೆಯ ನೇತೃತ್ವದಲ್ಲಿ ಒಂದು ಸರಕಾರ ರಚಿಸಲು ತಾನು ಸಿದ್ಧವಿಲ್ಲ ಎಂಬ ಸಂಯುಕ್ತ ರಂಗದ ನಿಲುವು ಸರಿ ಎಂದು ಈಗ ಸಾಬೀತಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಮತ್ತೊಮ್ಮೆ ಬಿಜೆಪಿಯೊಂದಿಗೆ ಅದು ಎರಡನೇ ಮೈತ್ರಿ ಮಾಡಿಕೊಂಡಿರುವ ಸಂಗತಿ ಈ ಪಕ್ಷ ಕೋಮುವಾದದ ವಿರುದ್ಧ ಹೋರಾಟದಲ್ಲಿ ಸಂಪೂರ್ಣ ಅವಿಶ್ವಸನೀಯ ಶಕ್ತಿ ಎಂಬುದನ್ನು ತೋರಿಸಿಕೊಟ್ಟಿದೆ ಎಂದಿದೆ.

ಹರ್ಯಾಣ ಮುನ್ಸಿಪಲ್ ನೌಕರರ ಹೋರಾಟಕ್ಕೆ ಜಯ

ಸರಿಯಾದ ರೀತಿಯಲ್ಲಿ ಸಂಬಳ ಪಾವತಿಯೂ ಸೇರಿದಂತೆ ಹಲವಾರು ಬೇಡಿಕೆಗಳನ್ನು ಮುಂದಿಟ್ಟು ಸುದೀರ್ಘ ಹೋರಾಟ ನಡೆಸಿದ ಹರ್ಯಾಣದ ಮುನ್ಸಿಪಲ್ ನೌಕರರಿಗೆ ಕೊನೆಗೂ ವಿಜಯದ ಮಾಲೆ ಬಿದ್ದಿದೆ. 80 ದಿನಗಳಿಂದ ನಡೆಸುತ್ತಿದ್ದ ಮುಷ್ಕರಹಾಗೂ 43 ದಿನಗಳಿಂದ ನಡೆಸುತ್ತಿದ್ದ ಉಪವಾಸ ಸತ್ಯಾಗ್ರಹ ಮಾರ್ಚ್ 3ರಂದು ಕೊನೆಗೊಂಡಿತು.

ಮುನ್ಸಿಪಲ್ ನೌಕರರ ದಿಟ್ಟ ಹೋರಾಟಕ್ಕೆ ಮಣಿದ ಎಚ್‌ವಿಪಿ-ಬಿಜೆಪಿ ಮೈತ್ರಿ ಕೂಟದ ಸರಕಾರ ಉದ್ಯೋಗಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಹೋರಾಟ ನಿರತ ನೌಕರರ ಒಗ್ಗಟ್ಟನ್ನು ಮುರಿಯಲು ಸರಕಾರ ನಡೆಸಿದ ತಂತ್ರಗಳೆಲ್ಲ ವಿಫಲಗೊಂಡವು. ಮಾರ್ಚ್ 3 ರಂದು ಚಂಢಿಗಡದಲ್ಲಿ ನಗರಪಾಲೀಕಾ ಕರ್ಮಚಾರಿ ಸಂಘದೊಂದಿಗೆ ಒಪ್ಪಂದ ಮಾಡಿಕೊಂಡಿತು.

ಮುನ್ಸಿಪಲ್ ಖಾತೆ ಮಂತ್ರಿ ಶಶಿಪಾಲ್ ಮೆಹ್ತಾ ಸ್ವತಃ ರೋಹ್ತಕ್‌ಗೆ ಆಗಮಿಸಿ 43 ದಿನಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಮುನ್ಸಿಪಲ್ ನೌಕರರ ಮುಖಂಡರಾದ ಪೂನಮ್ ಚಾಂದ್ ರತಿ(ನಗರಪಾಲಿಕಾ ಕರ್ಮಚಾರಿ ಸಂಘದ ಅಧ್ಯಕ್ಷರು) ಮತ್ತು ಮಾಸ್ಟರ್ ಷೇರಸಿಂಗ(ಸರ್ವ ಕರ್ಮಚಾರಿ ಸಂಘದ ಅಧ್ಯಕ್ಷರು) ಅವರಿಗೆ ಹಣ್ಣಿನ ರಸವನ್ನು ಕೊಟ್ಟರು.

ಪ್ರತಿತಿಂಗಳ ಎರಡನೇ ತಾರೀಖಿನೊಳಗೆ ಮುನಿಸಿಪಲ್ ನೌಕರರಿಗೆ ವೇತನ ಪಾವತಿ ಮಾಡಲು ಸರಕಾರ ಸಮ್ಮತಿಸಿದೆ. ಇದು ಒಪ್ಪಂದದ ಮುಖ್ಯ ಅಂಶವಾಗಿದೆ. ಮುಷ್ಕರ ನಿರತರ ವಿರುದ್ಧ ಹೂಡಿದ್ದ ಎಲ್ಲಾ ಮೊಕದ್ದಮೆಗಳನ್ನು ವಾಪಾಸು ಪಡೆಯಲೂ ಸರಕಾರ ಒಪ್ಪಿಕೊಂಡಿದೆ.

ಬೇರೆ ಹುದ್ದೆ ಸಮಸ್ಯೆಗಳ ಇತ್ಯರ್ಥಕ್ಕಾಗಿ ಇನ್ನೊಂದು ಸುತ್ತಿನ ಮಾತುಕತೆ ನಡೆಯಲಿದೆ.

ರಾಜ್ಯದ ಮುನ್ಸಿಪಲ್ ನೌಕರರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸಂಘಗಳು ನಡೆಸಿದ ಮಾತುಕತೆಗಳು ವಿಫಲವಾದ ನಂತರ ಎಚ್‌ವಿಪಿ-ಬಿಜೆಪಿ ಸರಕಾರದ ನೌಕರ ವಿರೋಧಿ ಧೋರಣೆಯನ್ನು ಪ್ರತಿಭಟಿಸಿ 1996 ಡಿಸೆಂಬರ್ 16ರಂದು ಮುಷ್ಕರವನ್ನು ಆರಂಭಿಸಲಾಗಿತ್ತು. ರಾಜ್ಯದೆಲ್ಲೆಡೆಯ 20000ಕ್ಕೂ ಹೆಚ್ಚು ಪುರುಷ ಮತ್ತು ಮಹಿಳಾ ಕಾರ್ಮಿಕರು ಮುಷ್ಕರದಲ್ಲಿಪಾಲ್ಗೊಂಡಿದ್ದರು.

ಮುನ್ಸಿಪಲ್ ನೌಕರರಲ್ಲಿ ಬಹುಭಾಗ ದಲಿತ ವರ್ಗಕ್ಕೆ ಸೇರಿದವರು. ತಿಂಗಳುಗಟ್ಟಲೆ ಕಾಲ ಅವರಿಗೆ ಸಂಬಳ ಕೊಡದೆ ಸತಾಯಿಸಲಾಗುತ್ತಿತ್ತು. ಅಲ್ಲದೆ ಬಹಳಷ್ಟು ಜನರು ದೀರ್ಘ ಕಾಲದಿಂದ ಕೆಲಸದಲ್ಲಿದ್ದರೂ ಅವರ ಸೇವೆಯನ್ನು ಕಾಯಂಗೊಳಿಸಿರಲಿಲ್ಲ. ವೇತನದಲ್ಲಿ ಕಡಿತ ಮಾಡಿದ ಭವಿಷ್ಯ ನಿಧಿ ಮೊತ್ತವನ್ನು ಠೇವಣಿ ಇಡುತ್ತಿರಲಿಲ್ಲ.

ರಾಜ್ಯ ಸರಕಾರದ ದಿವ್ಯ ನಿರ್ಲಕ್ಷತನವಲ್ಲದೆ ಸ್ಥಳೀಯ ಸಂಸ್ಥೆಗಳ ದುರಾಡಳಿತ ಹಾಗೂ ವಿಪರೀತ ಭ್ರಷ್ಟಾಚಾರ ನೌಕರರ ಹೀನ ಪರಿಸ್ಥಿತಿಗೆ ಕಾರಣವಾಗಿತ್ತು.

ಬನ್ಸಿಲಾಲರ ನೇತೃತ್ವದ ಸರಕಾರದ ನೀತಿಯ ವಿರುದ್ಧ ಮುನ್ಸಿಪಲ್ ನೌಕರರು ಕೆಂಬಾವುಟದಡಿಯಲ್ಲಿ ಸಂಘಟಿತರಾಗಿ ಹೋರಾಟ ನಡೆಸಿದ್ದರಿಂದ ಕಾವಿ ಕೂಟದ ಕಣ್ಣು ಕೆಂಪಾಯಿತು. ಇದು ರಾಜಕೀಯ ಪ್ರೇರಿತ ಎಂದು ಹೇಳಿ ಚಳುವಳಿಯನ್ನು ಬಗ್ಗುಬಡಿಯಲು ಪ್ರಯತ್ನಿಸಿತು. 600 ಮಹಿಳೆಯರೂ ಸೇರಿದಂತೆ 6000 ಕ್ಕೂ ಹೆಚ್ಚು ಮಂದಿಯನ್ನು ಎಸ್ಮಾ ಕಾನೂನಿನಡಿ ಬಂಧಿಸಿ ಸೆರೆಮನೆಗೆ ತಳ್ಳಿತು. 5000 ಕ್ಕೂ ಹೆಚ್ಚು ನೌಕರರನ್ನು ಕೆಲಸದಿಂದ ತೆಗೆದು ಹಾಕಿತು. ಮುನ್ಸಿಪಲ್ ನೌಕರರಿಗೆ ವೇತನ ಕೊಡುವುದು ತನ್ನ ಹೊಣೆಯಲ್ಲ ಎಂದು ಜವಾಬ್ದಾರಿಯಿಂದ ನುಣಿಚಿಕೊಳ್ಳಲು ಬನ್ಸಿಲಾಲ್ ಸರಕಾರ ಪ್ರಯತ್ನಿಸಿತು. ಆದರೆ ಇದ್ಯಾವುದಕ್ಕೂ ಜನರ ಬೆಂಬಲ ಸಿಗಲಿಲ್ಲ. ಜನಸಮೂಹ ಚಳುವಳಿ ನಿರತ ನೌಕರರಿಗೆ ಬೆಂಬಲವಾಗಿ ನಿಂತಿತು. ಹರ್ಯಾಣದ ರಾಜ್ಯ ಸರಕಾರಿ ನೌಕರರು ಮುನ್ಸಿಪಲ್ ನೌಕರರ ಚಳುವಳಿಗೆ ಬೆಂಬಲವಾಗಿ ಫೆಬ್ರವರಿ 13 ರಂದು ರಾಜ್ಯವ್ಯಾಪಿ ಮುಷ್ಕರ ನಡೆಸಿದ್ದು ಒಂದು ದೊಡ್ಡ ವಿದ್ಯಮಾನ.

ವಿಜಯೋತ್ಸವ

ಇದೀಗ ಹೋರಾಟಕ್ಕೆ ದೊರೆತ ವಿಜಯ ಮುನ್ಸಿಪಲ್ ನೌಕರರಲ್ಲಿ ನವಚೇತನವನ್ನು ಹುಟ್ಟಿಸಿದೆ. ಒಪ್ಪಂದದ ಸುದ್ದಿ ಹರಡುತ್ತಲೇ ರಾಜ್ಯದೆಲ್ಲೆಡೆ ನೌಕರರು ಹರ್ಷೋಲ್ಲಾಸದಿಂದ ವಿಜಯೋತ್ಸವವನ್ನು ಆಚರಿಸಿದರು.

ನೌಕರರು ಈಗ ನಮ್ಮ ಮುಂದಿರುವ ಇತರೇ ಸವಾಲುಗಳನ್ನು ಎದುರಿಸಲು ಸಜ್ಜಾಗುತ್ತಿದ್ದಾರೆ. ವಿದ್ಯುತ್‌ರಂಗದ ಖಾಸಗೀಕರಣ, ಬೆಲೆಯೇರಿಕೆ, ಭ್ರಷ್ಟಾಚಾರ ಮತ್ತು ಅಧಿಕಾರಿಗಳ ಸರ್ವಾಧಿಕಾರಿ ವರ್ತನೆ ವಿರುದ್ಧ ಅಲ್ಲದೆ, ಐದನೇ ವೇತನ ಆಯೋಗದ ಶಿಫಾರಸ್ಸಿನ ಹಿನ್ನೆಲೆಯಲ್ಲಿ ಕೇಂದ್ರ ಸರಾಕರಿ ನೌಕರರಿಗೆ ಸಮನಾದ ವೇತನ ನೀಡಬೇಕೆಂದು ಹೋರಾಟಕ್ಕೆ ತಯಾರಿ ನಡೆಸುತ್ತಿದ್ದಾರೆ.

ಹರ್ಯಾಣ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಒಪ್ಪಂದದ ಬಗ್ಗೆ ತೃಪ್ತಿ ವ್ಯಕ್ತಪಡಿಸಿದೆ ಹಾಗೂ ಧೀರ ಹೋರಾಟ ನಡೆಸಿ ಯಶಸ್ಸು ಸಾಧಿಸಿದ ಮುನ್ಸಿಪಲ್ ನೌಕರರನ್ನು ಅಭಿನಂದಿಸಿದೆ.

ಕಾಂಗ್ರೆಸ್ ಮುಖಂಡ ಕಲ್ಪನಾಥ್ ರಾಯ್‌ಗೆ 10 ವರ್ಷ ಜೈಲು ಶಿಕ್ಷೆ

ಭೂಗತ ಜಗತ್ತಿನ ದೊರೆ ಎಂದೇ ಕುಖ್ಯಾತನಾದ ದಾವೂದ್ ಇಬ್ರಾಹಿಂ ಗುಂಪಿನ ಕೆಲವು ದುಷ್ಕರ್ಮಿಗಳಿಗೆ ಆಶ್ರಯ ನೀಡಿದ್ದ ಕೇಂದ್ರ ಮಾಜಿ ಸಚಿವ, ಕಾಂಗ್ರೆಸ್ ಸಂಸತ್ ಸದಸ್ಯ ಕಲ್ಪನಾಥ ರಾಯ್‌ಗೆ ನಿಯೋಜಿತ ಟಾಡಾ ನ್ಯಾಯಾಲಯ ಮಾರ್ಚ್ 17 ರಂದು ಹತ್ತು ವರ್ಷ ಸೆರೆಮನೆ ವಾಸ ಹಾಗೂ 10 ಲಕ್ಷ ರೂಪಾಯಿ ದಂಡ ವಿಧಿಸಿ ತೀರ್ಪು ನೀಡಿದೆ.

ಭಯೋತ್ಪಾದನೆ ಹಾಗೂ ವಿಚ್ಛಿದ್ರಕಾರಿ ಚಟುವಟಿಕೆ ವಿರೋಧಿ ಕಾನೂನಿನ(ಟಾಡಾ) ಪ್ರಕಾರ ದಾಖಲಾಗಿದ್ದ ಈ ಮೊಕದ್ದಮೆಯ ಇತರ ಒಂಭತ್ತು ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಎಸ್.ಎನ್.ಧಿಂಗ್ರ ಭಾರೀ ಮಹತ್ವದ ತೀರ್ಪನ್ನು ನೀಡಿದರು.

1992ರ ಸೆಪ್ಟೆಂಬರ್‌ನಲ್ಲಿ ಮುಂಬಯಿಯ ಜೆಜೆ ಆಸ್ಪತ್ರೆಯಲ್ಲಿ ಗುಂಡಿನ ಕಾಳಗ ನಡೆದಿತ್ತು. ಈ ದುಷ್ಕೃತ್ಯದಲ್ಲಿ ಭಾಗಿಯಾಗಿದ್ದ ದಾವೂದ್ ಇಬ್ರಾಹಿಂ ಗುಂಪಿನ ಹಲವರಿಗೆ ಆಗ ಕೇಂದ್ರ ವಿದ್ಯುತ್ ಮಂತ್ರಿ ಆಗಿದ್ದ ಕಲ್ಪನಾಥ ರಾಯ್ ದೆಹಲಿಯ ಎನ್‌ಪಿಸಿಸಿ ಹಾಗೂ ಮುಂಬಯಿಯ ಉಪ್ಪ... ನಗರ ರಾಜ್ಯ ವಿದ್ಯುತ್ ಮಂಡಳಿಯ ಅತಿಥಿ ಗೃಹದಲ್ಲಿ ಆಶ್ರಯ ನೀಡಿದ್ದರು.

ಹಂತಕರಿಗೆ ಆಶ್ರಯ ನೀಡಿದ್ದಕ್ಕಾಗಿ ಕಲ್ಪನಾಥ ರಾಯ್ ಮತ್ತು ಬಿಜೆಪಿಯ ಮಾಜಿ ಸಂಸತ್ ಸದಸ್ಯ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ 1996 ಮೇ 24 ರಂದು ಸಿಬಿಐ ಆರೋಪ ಪಟ್ಟಿ ಸಲ್ಲಿಸಿತ್ತು. ಆದರೆ ಬ್ರಿಜ್ ಭೂಷಣ್ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ಸಾಕಷ್ಟು ಸಾಕ್ಷ್ಯಾಧಾರ ಇಲ್ಲವೆಂಬ ಆಧಾರದಲ್ಲಿ ಅವರನ್ನು ಆರೋಪ ಮುಕ್ತಗೊಳಿಸಲಾಗಿದೆ. ಆದರೆ ಸಿಬಿಐ ಈ ಬಗ್ಗೆ ಅಪೀಲು ಹೋಗುವುದಾಗಿ ಹೇಳಿದೆ.

ಹರ್ಯಾಣ ಆಳುವ ಪಕ್ಷದಲ್ಲಿ ಬಂಢಾಯ

ಹರ್ಯಾಣ ಆಳುವ ಪಕ್ಷವಾದ ಹರ್ಯಾಣ ವಿಕಾಸ ಪಕ್ಷ(ಎಚ್‌ವಿಪಿ)ದಲ್ಲಿನ ಬಿಕ್ಕಟ್ಟು ಉಲ್ಬಣಗೊಂಡಿದೆ. ಇಲ್ಲಿ ಹೆಚ್‌ವಿಪಿ-ಬಿಜೆಪಿ ಮೈತ್ರಿಕೂಟ ಅಧಿಕಾರದಲ್ಲಿದ್ದರೂ ಎಚ್‌ವಿಪಿ ಪ್ರಮುಖ ಪಾಲುದಾರ ಪಕ್ಷವಾಗಿದೆ.

ರಾಜ್ಯದಲ್ಲಿ ವಿದ್ಯುತ್ ಕ್ಷೇತ್ರಗಳನ್ನು ಖಾಸಗೀಕರಿಸುವ ವಿಚಾರ ಬಿಕ್ಕಟ್ಟಿನ ಹುಟ್ಟಿಗೆ ಕಾರಣವಾಗಿದೆ. ವಾಸ್ತವವಾಗಿ ಖಾಸಗೀಕರಣ ಪ್ರಸ್ತಾವವನ್ನು ವಿರೋಧಿಸಿ ವಿದ್ಯುತ್ ಸಚಿವ ಜಸ್ವಂತ್ ಸಿಂಗ್ ರಾಜೀನಾಮೆಯನ್ನೇ ಕೊಟ್ಟಿದ್ದಾರೆ.

ಖಾಸಗೀಕರಣ ವಿಚಾರ ಮಾತ್ರವಲ್ಲ, ಮುಖ್ಯಮಂತ್ರಿ ಬನ್ಸಿಲಾಲರ ಕಾರ್ಯವೈಖರಿ ಮತ್ತು ರಾಜ್ಯ ಸರಕಾರದ ಕಾರ್ಯನಿರ್ವಹಣೆಯಲ್ಲಿ ಮುಖ್ಯಮಂತ್ರಿಯ ಕುಟುಂಬ ಸದಸ್ಯರು ಹಸ್ತಕ್ಷೇಪ ಮಾಡುತ್ತಿರುವುದೂ ಅತೃಪ್ತಿಗೆ ಕಾರಣವಾಗಿದೆ.

ಎಚ್‌ವಿಪಿಯ ... ಸಂಸತ್ ಸದಸ್ಯ ಜಯಪ್ರಕಾಶ್ ಮತ್ತು ಖಾಸಗೀಕರಣ ಯೋಜನೆಯನ್ನು ಪ್ರತಿಭಟಿಸಿ ರಾಜೀನಾಮೆ ಕೊಟ್ಟಿದ್ದ ಜಸ್ವಂತ್‌ಸಿಂಗ್ ಮಾರ್ಚ್ 16ರಂದು ಭಿವಾನಿಯಲ್ಲಿ ನಡೆದ ಬೃಹತ್ ರೈತ ಸಮಾವೇಶವೊಂದರಲ್ಲಿ ತಮ್ಮ ಪಕ್ಷದ ನಾಯಕನನ್ನು ಕಟುವಾಗಿ ಟೀಕಿಸಿದರು.

ಕಳೆದ ವರ್ಷ ಮೇ ತಿಂಗಳಲ್ಲಿ ಬಿಜೆಪಿ ಜೊತೆ ಸೇರಿ ಸರಕಾರ ರಚಿಸಿದಂದಿನಿಂದಲೂ ಎಚ್.ವಿ.ಪಿ.ಯಲ್ಲಿ ಅತೃಪ್ತಿ ತಾಂಡವವಾಡುತ್ತಿತ್ತು. ಅದು ಈಗ ದೊಡ್ಡ ಪ್ರಮಾಣದಲ್ಲಿ ಸ್ಫೋಟಗೊಳ್ಳುತ್ತಿದೆ.

ಎರಡು ತಿಂಗಳ ಹಿಂದೆ ಅತೃಪ್ತಿ ಒಂದು ಸ್ವರೂಪವನ್ನು ಪಡೆಯಲು ಆರಂಭಿಸಿತು. ಬನ್ಸಿಲಾಲರ ಕಾರ್ಯವೈಖರಿ ಮತ್ತು ಸರಕಾರದ ಕೆಲಸಗಳಲ್ಲಿ ಮುಖ್ಯಮಂತ್ರಿ ಕುಟುಂಬ ಸದಸ್ಯರು ಮೂಗುತೂರಿಸುವುದನ್ನು ಜಯಪ್ರಕಾಶ್ ಕಟುವಾಗಿ ಟೀಕಿಸಿದರು. ಅಲ್ಲದೆ ನೌಕರರ ಮುಷ್ಕರವನ್ನು ಸರಕಾರ ನಿರ್ವಹಿಸಿದ ರೀತಿ ಹಾಗೂ ಮುಷ್ಕರ ನಿರತರ ಮೇಲೆ ಸಿಐಡಿ ಕಣ್ಗಾವಲು ಇರಿಸಿದ್ದನ್ನು ಅವರು ವಿರೋಧಿಸಿದರು.

ಆಗ ಬೆನ್ನಲ್ಲೇ ಇಂಧನ ಖಾತೆಯ ಸಚಿವ ಸ್ಥಾನಕ್ಕೆ ಜಸವಂತಸಿಂಗ್ ರಾಜಿನಾಮೆ ಕೊಟ್ಟರು. ರಾಜ್ಯದಲ್ಲಿ ಇಂಧನ ಕ್ಷೇತ್ರವನ್ನು ಖಾಸಗೀಕರಿಸುವ ವಿಚಾರದಲ್ಲಿ ಮುಖ್ಯಮಂತ್ರಿ ಜೊತೆ ಉಂಟಾದ ತೀವ್ರವಾದ ಭಿನ್ನಾಭಿಪ್ರಾಯಗಳೇ ಅವರ ಪದತ್ಯಾಗಕ್ಕೆ ಕಾರಣ.

ಪಿತೂರಿ

ರಾಜ್ಯದಲ್ಲಿ ಇಂಧನ ಕ್ಷೇತ್ರವನ್ನು ಖಾಸಗೀಕರಿಸಲು ಬನ್ಸಿಲಾಲ್ ವಿಶ್ವಬ್ಯಾಂಕ್‌ನೊಂದಿಗೆ ಸೇರಿ ಪಿತೂರಿ ಹೂಡಿದ್ದಾರೆ ಎಂದು ಜಸ್ವಂತ್ ಸಿಂಗ್ ಮಾ.16 ರ ರ್‍ಯಾಲಿಯಲ್ಲಿ ಆರೋಪಿಸಿದರು. ಹರ್ಯಾಣ ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯ ನಾಲ್ಕು ಜಿಲ್ಲೆಗಳ ಆಸ್ತಿ ಪಾಸ್ತಿಯನ್ನು ಮಾರಾಟ ಮಾಡಲು ಮುಖ್ಯಮಂತ್ರಿ ಹೊರಟಿದ್ದಾರೆ ಎಂದು ಅವರು ಹೇಳಿದರು.

ಈ ಜಿಲ್ಲೆಗಳಲ್ಲಿ ವಿದ್ಯುತ್ ಮಂಡಳಿಯನ್ನು ಹಂತಹಂತವಾಗಿ ಖಾಸಗೀಕರಿಸುವ ಯೋಜನೆಯಿದೆ. ಕಾಂಗ್ರೆಸ್ಸಿನ ಮಾಜಿ ಮಂತ್ರಿ ಧರ್ಮವೀರ ಈಚೆಗೆ ಸ್ಥಾಪಿಸಿದ ಹೊಸ ಸಂಘಟನೆ ಕಿಸಾನ್ ಏಕತಾ ಮಂಚ್ ಈ ರ್‍ಯಾಲಿಯನ್ನು ಸಂಘಟಿಸಿತ್ತು.

ಉಚಿತವಾಗಿ ನೀರು ಮತ್ತು ವಿದ್ಯುತ್ತನ್ನು ಸರಬರಾಜು ಮಾಡದಿದ್ದರೆ ಏಪ್ರಿಲ್ ಒಂದರಿಂದ ವಿದ್ಯುತ್ ಬಿಲ್ ಹಾಗೂ ಕಾಲುವೆ ನೀರು ತೆರಿಗೆಯನ್ನು ಪಾವತಿ ಮಾಡುವುದಿಲ್ಲ ಎಂದು ರ್‍ಯಾಲಿ ರಾಜ್ಯ ಸರಕಾರಕ್ಕೆ ಎಚ್ಚರಿಕೆ ನೀಡಿತು. ತಾನು ಮುಂದಿಟ್ಟಿರುವ 13 ಬೇಡಿಕೆಗಳನ್ನು ಈಡೇರಿಸದಿದ್ದರೆ ಜೂನ್ 13ರಂದು ರಾಜ್ಯ ಬಂದ್ ನಡೆಸುವುದಾಗಿಯೂ ಎಚ್.ವಿ.ಪಿ-ಬಿಜೆಪಿ ಸರಕಾರವನ್ನು ವಜಾಮಾಡುವಂತೆ ರಾಷ್ಟ್ರಪತಿಗೆ ಮನವಿ ಸಲ್ಲಿಸಿರುವುದಾಗಿಯೂ ಕಿಸಾನ್ ಏಕತಾ ಮಂಚ್ ಹೇಳಿದೆ.

ಮದ್ಯ ಕಳ್ಳಸಾಗಾಣಿ

ರಾಜ್ಯದಲ್ಲಿ ಮದ್ಯವನ್ನು ಕಳ್ಳಸಾಗಾಟ ಮಾಡಲಾಗುತ್ತಿದೆ. ಪ್ರಭಾವಿ ರಾಜಕಾರಣಿಗಳ ಸಂಬಂಧಿಗಳು ಇಂಥ ದಂಧೆಯಲ್ಲಿ ತೊಡಗಿದ್ದಾರೆ. ಇದನ್ನು ತಕ್ಷಣವೇ ಪಡೆಯದಿದ್ದಲ್ಲಿ ಈ ರಾಜಕಾರಣಿಗಳು ಗ್ರಾಮಗಳನ್ನು ಪ್ರವೇಶಿಸಲು ಅವಕಾಶ ಕೊಡುವುದಿಲ್ಲ ಹಾಗೂ ಅವರಿಗೆ ಸಾಮಾಜಿಕ ಬಹಿಷ್ಕಾರ ಹಾಕಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಒಟ್ಟಿನಲ್ಲಿ ಹರ್ಯಾಣದ ಎಚ್‌ವಿಪಿ-ಬಿಜೆಪಿ ಮೈತ್ರಿಕೂಟ ಸರಕಾರ ಈಗ ಆಳುವ ಪಕ್ಷದ ಮುಖಂಡರ ನೇತೃತ್ವದ ಆಂದೋಲನವನ್ನು ಎದುರಿಸಬೇಕಾದ ಸನ್ನಿವೇಶ ಸೃಷ್ಟಿಯಾಗಿದೆ.

ಭಾರತ-ಪಾಕಿಸ್ತಾನ ಗೆಳೆತನ ಬೆಳೆಸುವುದು ಹೇಗೆ?

- ಹರ್ಕಿಶನ್ ಸಿಂಗ್ ಸುರ್ಜಿತ್

ಕಳೆದ ಐದು ದಶಕಗಳಲ್ಲಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಮೂರು ಯುದ್ಧಗಳು ನಡೆದವು ಎಂಬ ಒಂದು ಖೇದದ ಸಂಗತಿ ಒಂದೆಡೆಯಾದರೆ, ಕಳೆದ 25 ವರ್ಷಗಳಲ್ಲಿ ನಾಲ್ಕನೇ ಯುದ್ಧವಾಗಿಲ್ಲ ಎಂಬ ಸಂಗತಿ ಮತ್ತೊಂದೆಡೆ. ಜತೆಗೆ ಇತ್ತೀಚೆಗೆ ಪಾಕಿಸ್ತಾನಿ ಆಳರಸ ದ್ವೇಷಮಯ ನಿಲುವಿನಲ್ಲಿ ಕಾಣಬರುತ್ತಿರುವ ಬದಲಾವಣೆ-ಇವು ನಮ್ಮೆರಡು ದೇಶಗಳ ನಡುವಿನ ಸಂಬಂಧಗಳು ಅಭಿವೃದ್ಧಿಹೊಂದಲು ಇರುವ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂಬತ್ತ ಬೊಟ್ಟು ಮಾಡುತ್ತಿವೆ. ಇದು ಯಾವ ದಾರಿಯಲ್ಲಿ ಸಾಗಲು ಸಾಧ್ಯ? ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಇಲ್ಲಿ ವಿಶ್ಲೇಷಿಸಿದ್ದಾರೆ.

ಆಗಸ್ಟ್ 1947ರಲ್ಲಿ ಸ್ವತಂತ್ರವಾದುದಿನಿಂದ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಮೂರು ಯುದ್ಧಗಳು ನಡೆದಿವೆ. ಹೀಗೆ ಇವೆರೆಡು ದೇಶಗಳ ನಡುವಿನ ಸಂಬಂಧಗಳು ಬಹಳ ಕಸಿವಿಸಿಯ ದಾರಿಯಲ್ಲಿ ಸಾಗಿರುವುದು ನಿಜ. ಆದರೆ ಈ ಎರಡುದೇಶಗಳಜನತೆಈಉಪಖಂಡದಲ್ಲಿ ಈಗಲೂ ಶಾಂತಿ ಬಯಸುತ್ತಾರೆ, ತಮ್ಮ ಅಮೂಲ್ಯ ಸಂಪನ್ಮೂಲಗಳನ್ನು ಯುದ್ಧಗಳಲ್ಲಿ ವ್ಯರ್ಥಗೊಳಿಸದೆ ಅಭಿವೃದ್ಧಿಗೆ ಬಳಸುವಂತಾಗಬೇಕು. ಎಂದು ಬಯಸುತ್ತಾರೆ ಎಂಬುದೂ ಅಷ್ಟೇನಿಜ.

1973ರಲ್ಲಿ ಭಾರತದ ಪ್ರಧಾನಿ ಇಂದಿರಾಗಾಂಧಿ ಹಾಗೂ ಪಾಕಿಸ್ತಾನದ ಪ್ರಧಾನಿ ಝುಲ್ಫಿಕರ್ಅಲಿ ಭುಟ್ಟೋ ಸಹಿಹಾಕಿದ ಸಿಮ್ಲಾ ಒಪ್ಪಂದ ಈ ದಿಕ್ಕಿನಲ್ಲೊಂದು ಪ್ರಮುಖ ಹೆಜ್ಜೆಯಾಗಿತ್ತು. 1971-72ರ ಯುದ್ಧದ ನಂತರ ನಡೆದ ಈ ಒಪ್ಪಂದ ಮುಖ್ಯವಾಗಿ ಕಾಶ್ಮೀರವೂ ಸೇರಿದಂತೆ ನಮ್ಮ ವಿವಾದಗಳನ್ನುದ್ವಿಪಕ್ಷೀಯವಾಗಿ ಪರಿಹರಿಸಿಕೊಳ್ಳುತ್ತೇವೆ, ಮೂರನೇ ದೇಶದ ಮಧ್ಯಪ್ರವೇಶಕ್ಕೆ ಅವಕಾಶ ಕೊಡುವುದಿಲ್ಲ ಎಂಬ ಬಗ್ಗೆ ಒತ್ತು ನೀಡಿತ್ತು. ಈ ಒಪ್ಪಂದದ ನಂತರ ಕಳೆದ ಕಾಲು ಶತಕದ ಅವಧಿಯಲ್ಲಿ ನಾಲ್ಕನೇ ಯುದ್ಧನಡೆದಿಲ್ಲವೆಂಬುದುಈಒಪ್ಪಂದದ ಪರಿಣಾಮದ ಬಗ್ಗೆ ಬಹಳ ಹೇಳುತ್ತದೆ.

ದುರದೃಷ್ಟವಶಾತ್ ಪಾಕಿಸ್ತಾನದ ಆಳುವ ವ್ಯವಸ್ಥೆ ಈ ಒಪ್ಪಂದದ ಹಿಂದಿರುವ ಭಾವನೆಯನ್ನು ಗೌರವಿಸಿಲ್ಲ.1987ರಿಂದೀಚೆಗೆ ಭಯೋತ್ಪಾದಕರಿಗೆ ನೈತಿಕ, ರಾಜಕೀಯ, ಮಿಲಿಟರಿ ಹಾಗೂ ಹಣಕಾಸು ಸಹಾಯ ನೀಡಿ ಭಾರತದ ವಿರುದ್ಧ ಒಂದು ಪರೋಕ್ಷ ಯುದ್ಧವನ್ನೇ ನಡೆಸಿದ್ದಾರೆ. ಅಷ್ಟೇಅಲ್ಲ, ಕಾಶ್ಮೀರದ ಪ್ರಶ್ನೆಯನ್ನು ಅಂತರ್ರಾಷ್ಟ್ರೀಯ ಪ್ರಶ್ನೆಯಾಗಿಸಲು ಪ್ರಯತ್ನಿಸಿದ್ದಾರೆ. ಅಂತರ್ರಾಷ್ಟ್ರೀಯ ಮಾನವ ಹಕ್ಕುಗಳ ಸಮ್ಮೇಳನ, ಇಸ್ಲಾಮಿದೇಶಗಳ ಸಂಘಟನೆ ಇತ್ಯಾದಿ ವೇದಿಕೆಗಳಲ್ಲಿ ಅದನ್ನೆತ್ತಲು ಪ್ರಯತ್ನಿಸಿದ್ದಾರೆ.

ಭಾರತ-ಪಾಕಿಸ್ತಾನಗಳ ನಡುವಿನ ಸಂಬಂಧಗಳನ್ನು ಇನ್ನೂ ಎತ್ತರಕ್ಕೆ ಒಯ್ಯಲು ಸಾಧ್ಯವಾಗದಿರುವುದು, ನಮ್ಮ ಉಪಖಂಡದಲ್ಲಿ ಹಗೆತನ ವಾತಾವರಣವಿರುವುದುಪಾಕಿಸ್ತಾನಿ ಆಳರಸರ ಇಂತಹನಿಲುವುಗಳಿಂದಾಗಿ ಎಂಬುದಂತೂ ನಿಸ್ಸಂದೇಹ. ಭಾರತ ಸರಕಾರ ಮತ್ತೆ-ಮತ್ತೆ ಶಿಮ್ಲಾ ಒಪ್ಪಂದಕ್ಕೆ ತಾನು ಬದ್ಧ ಎಂದು ಸಾರಿದ್ದರೂ, ಪಾಕಿಸ್ತಾನದ ಎರಡು 'ಪ್ರಧಾನ ಪಕ್ಷಗಳೂ ಅಂದರೆ ಭುಟ್ಟೋರವರ ಪಿಪಿಪಿ ಮತ್ತು ನವಾಜ್ ಶರೀಫ್‌ರ ಮುಸ್ಲಿಂ ಲೀಗ್ ಪಕ್ಷಗಳು, ಅಷ್ಟೇಅಲ್ಲ ಜಮಾತ್-ಎ-ಇಸ್ಲಾಮೀ ಮತ್ತಿತರ ಪಕ್ಷಗಳೂ ತಮ್ಮ ಜನಗಳ ಗಮನವನ್ನು ನಿಜವಾದ ಸಮಸ್ಯೆಗಳಿಂದ ಬೇರೆಡೆಗೆ ತಿರುಗಿಸಲು ಕಾಶ್ಮೀರದ ಪ್ರಶ್ನೆಯ ಮೇಲೆ ಭಾವೋನ್ಮಾದ ಎಬ್ಬಿಸಲು ಪ್ರಯತ್ನಿಸಿವೆ.

ಆದರೆ ಇತ್ತೀಚೆಗೆ ಪಾಕಿಸ್ತಾನದಲ್ಲಿ ನಡೆದ ಚುನಾವಣೆಯಲ್ಲಿ ಈ ವಿಷಯದಲ್ಲಿ ಒಂದು ಬದಲಾವಣೆ ಕಂಡಿದೆ. ಮೊತ್ತ ಮೊದಲ ಬಾರಿಗೆ ಅಲ್ಲಿ ಕಾಶ್ಮೀರ ಒಂದು ಚುನಾವಣಾ ವಿಷಯವಾಗಿರಲಿಲ್ಲ. ಪಾಕಿಸ್ತಾನದ ಜನತೆಗೆ ಆಳುವ ವರ್ಗಗಳ ಪಕ್ಷಗಳಿಂದ ಆಗಿರುವ ಬೇಸರವೂ ಇದಕ್ಕೆ ಕಾರಣವಿರಬಹುದು. ಮತದಾನ ಹಿಂದೆಂದೂ ಕಾಣದಷ್ಟು ಕಡಿಮೆ ಕೇವಲ 25% ಮಾತ್ರ ಎಂಬುದು ಗಮನಾರ್ಹ.

ಬೆನಝಿರ್‌ಭುಟ್ಟೋ, ಆಳ್ವಿಕೆಯಲ್ಲಿನ ಭ್ರಷ್ಟಾಚಾರದ ತಾಂಡವ, ದುರಾಡಳಿತ ಹಾಗೂ ಮುಖ್ಯವಾಗಿ ತನ್ನ ಸಿಂಧ್ ಪ್ರಾಂತ್ಯದಲ್ಲಿ ಮತ್ತು ಇತರೆಡೆ ಕಾನೂನು ಮುರಿದು ಕೊಲೆಗಳನ್ನು ನಡೆಸಿದ ಆಪಾದನೆಗಳಿಂದ ಆಕೆ ಮೂಲೆಗೊತ್ತಲ್ಪಟ್ಟದ್ದು ಚುನಾವಣಾ ಫಲಿತಾಂಶಗಳಿಂದ ಸ್ಪಷ್ಟವಾಗಿದೆ. ನವಾಜ್‌ಷರೀಫರ ಮುಸ್ಲಿಂ ಲೀಗ್ ಕೂಡಾ ಬಹಳ ಸಾಧಿಸಿದ್ದೇನೆ ಎಂದು ಹೇಳುವಂತಿಲ್ಲ. ಜನಗಳ ನಿರ್ಲಕ್ಷದ ಹಿನ್ನೆಲೆಯಲ್ಲಿ ಅದಕ್ಕೆ ರಾಷ್ಟ್ರೀಯ ಅಸೆಂಬ್ಲಿಯಲ್ಲೇನೋ ದೊಡ್ಡ ಬಹುಮತ ಸಿಕ್ಕಿದೆ. ಬಹುಪಾಲು ಸೇನಾಧಿಕಾರಿಗಳಿರುವ ಪಂಜಾಬ್ ಪ್ರಾಂತ್ಯದಲ್ಲೂ ಸಿಕ್ಕಿದೆ. ಆದರೆ ಸಿಂಧ್‌ನಲ್ಲಿ ಎಂಕ್ಯೂಎಂನೊಡನೆ ಕೈಮಿಲಾಯಿಸಿದರೂ, ಬಲೂಚಿ ಸ್ಥಾನದಲ್ಲೂ ಅದರ ಸಾಧನೆ ಅಷ್ಟೇನಿಲ್ಲ, ವಾಯುವ್ಯ ಪ್ರಾಂತ್ಯದಲ್ಲೂ ಅದು ವಾಲಿಖಾನರ ಅವಾಮಿ ರಾಷ್ಟ್ರೀಯ ಪಕ್ಷದ ಬೆಂಬಲ ಪಡೆಯಬೇಕಾಗಿ ಬಂದಿದೆ.

ಚುನಾವಣಾ ವಿಜಯ ಸಾಧಿಸಿದ ಕೂಡಲೇ ನವಾಜ್ ಷರೀಫ್ ಭಾರತದೊಡನೆ ಬೇಷರತ್ ಮಾತುಕತೆ ನಡೆಸುವುದಾಗಿ ಹೇಳಿದರು. ಭಾರತದ ಮುಖಂಡರು ಆತನ ಈ ಹೇಳಿಕೆಯಿಂದ ಸ್ವಲ್ಪ ಹೆಚ್ಚಾಗಿಯೇ ಉತ್ಸಾಹಿತರಾದರು. ಈಗ ಅಲ್ಲಿ ಒಂದು ರಾಷ್ಟ್ರೀಯ ಭದ್ರತಾ ಮಂಡಳಿ ರಚನೆಯಾಗಿ ಅಧ್ಯಕ್ಷ, ಪ್ರಧಾನ ಮಂತ್ರಿ ಹಾಗೂ ಮಿಲಿಟರಿ ನಡುವೆ ಒಂದು ಒಪ್ಪಂದದಂತಾಗಿ ಮಿಲಿಟರಿಯ ಪಾತ್ರ ಹೆಚ್ಚಿದೆ ಎಂಬುದನ್ನು ಭಾರತ ಸರಕಾರ ಗಮನಿಸಿಲ್ಲ. ಅತ್ತ ನವಾಜ್ ಷರೀಫ್ ಕೂಡಾ ಹಿಂದೇಟು ಹಾಕಲಾರಂಭಿಸಿದ್ದಾರೆ. ಒಟ್ಟಿನಲ್ಲಿ ಭಾರತ ಸರಕಾರ ಆಶಿಸಿದಂತೆ ಕಾಶ್ಮೀರ ಸಮಸ್ಯೆಯ ಪರಿಹಾರ ಸದ್ಯಕ್ಕಂತೂ ಅಜೆಂಡಾದಲ್ಲಿ ಬಂದಿಲ್ಲ.

ಸತ್ಯಾಂಶವೆಂದರೆ ಭಾರತ-ಪಾಕಿಸ್ತಾನಗಳ ಜನ ಸಾಮಾನ್ಯರ ನಡುವೆ ಪರಸ್ಪರ ಬಹಳಷ್ಟು ಉತ್ತಮ ಭಾವನೆಗಳಿದ್ದರೂ ಪಾಕಿಸ್ತಾನದ ಆಳುವ ವರ್ಗ ಕೂಟ ಇನ್ನೂ ಸಿದ್ಧವಾಗಿಲ್ಲ. ಅಲ್ಲದೆ ಅಮೆರಿಕನ್ ಸಾಮ್ರಾಜ್ಯಶಾಹಿಯ ಹಿತಾಸಕ್ತಿಯ ಪ್ರಶ್ನೆಯೂ ಇದೆ. ಹಿಂದೊಮ್ಮೆ ಕಾಶ್ಮೀರದಲ್ಲಿ ಜನಮತಗಣನೆ ನಡೆಯಬೇಕು ಎಂದು ಅದು ಹೇಳಿದ್ದು ಎಲ್ಲರಿಗೂ ನೆನಪಿದೆ. ಈಗ ಸೋವಿಯತ್ ಒಕ್ಕೂಟದ ಪತನದ ನಂತರ ಪಾಕಿಸ್ತಾನದಲ್ಲಿ ಅದಕ್ಕೆ ಆಸಕ್ತಿ ಹಿಂದಿನಷ್ಟು ಇಲ್ಲವಾದರೂ ಕೆಲವು ತಿಂಗಳ ಹಿಂದೆ ರೊಬಿನ್ ರಾಫೆಲ್ ಕಾಶ್ಮೀರದ ಪ್ರಶ್ನೆ ಇತ್ಯರ್ಥವಾಗಿಲ್ಲ ಎಂದಿರುವುದು, ಕೇವಲ ತೀರಾ ಇತ್ತೀಚೆಗೆ ಕೂಡಾ ಅಮೆರಿಕನ್ ಉಪಾಧ್ಯಕ್ಷ ಅಲ್‌ಗೋರೆಯವರ ಹೇಳಿಕೆ ಕಂಡಾಗ ಅಮೆರಿಕಾದ ಆಳರಸರ ಧೋರಣೆಗಳಲ್ಲಿ ಮೂಲಭೂತ ಬದಲಾವಣೆ ಆಗಿಲ್ಲ ಎಂಬುದು ಸ್ಪಷ್ಟ.

ಭಾರತ ಇತ್ತೀಚೆಗೆ ತನ್ನ ನೆರೆದೇಶಗಳಾದ ಬಾಂಗ್ಲಾದೇಶ, ನೇಪಾಳ, ಭೂತಾನದೊಂದಿಗೆ ಸಂಬಂಧ ಸುಧಾರಿಸಿಕೊಂಡಿದೆ. ಚೀಣಾದ ಭಾರತ ಸಂಬಂಧಗಳೂ ಈಗ ಹೊಸ ಉತ್ತಮ ಆಧಾರದಮೇಲೆ ಬೆಳೆಯುತ್ತಿವೆ. ಆದ್ದರಿಂದ ಪಾಕಿಸ್ತಾನೀ ಆಳರಸರು ಸಿದ್ಧರಿದ್ದರೆ, ಭಾರತ-ಪಾಕಿಸ್ತಾನ ಸಂಬಂಧಗಳಲ್ಲೂ ಹೊಸ ಅಧ್ಯಾಯ ಆರಂಭವಾಗಬಹುದು.

ಆದರೆ ಇದರಲ್ಲಿ ಕಾಶ್ಮೀರ ಮೊದಲ ವಿಷಯವಾಗುತ್ತದೆ ಎಂದು ನಿರೀಕ್ಷಿಸುವುದು ಮಾತ್ರ ಮೊದ್ದುತನವಾಗುತ್ತದೆ. ಭಾರತ-ಚೀಣಾ ಸಂಬಂಧಗಳಲ್ಲಿನ ಅನುಭವವನ್ನು ಇಲ್ಲಿ ಗಮನಿಸಬೇಕು. ಹಿಂದೆ ಎರಡು ದೇಶಗಳ ಗಡಿವಿವಾದವನ್ನು ಮೊದಲು ಪರಿಹರಿಸಿಕೊಳ್ಳಬೇಕು ಎಂಬ ಬಗ್ಗೆ ಒತ್ತು ನೀಡಲಾಗುತ್ತಿತ್ತು. ಆಗಏನೂ ಪ್ರಗತಿ ಕಾಣಲಿಲ್ಲ. ಭಾರತ ಮತ್ತುಚೀಣಾ ಗಡಿ ವಿವಾದವನ್ನು ಸದ್ಯಕ್ಕೆ ಬದಿಗಿಟ್ಟು ಇತರ ಅಂಶಗಳ ಮೇಲೆ ಅಂದರೆಆರ್ಥಿಕ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಬೆಸೆಯುವತ್ತ ಗಮನ ಹರಿಸಲು ನಿರ್ಧರಿಸಿದ ಮೇಲೆ ಎರಡು ದೇಶಗಳ ನಡುವಿನ ಸೆಳೆತ ಕಮ್ಮಿಯಾಗಿ ಎರಡೂ ದೇಶಗಳ ಜನಗಳ ನಡುವೆ ಪರಸ್ಪರ ಉತ್ತಮ ಅಭಿಪ್ರಾಯ ಬೆಳೆಯಲು ಅವಕಾಶವಾಯಿತು.

ಇದೇ ರೀತಿ ಭಾರತ-ಪಾಕಿಸ್ತಾನ ಸಂಬಂಧಗಳನ್ನು ಉತ್ತಮ ಪಡಿಸಲು ಒಂದೆಡೆ ಶಿಮ್ಲಾ ಒಪ್ಪಂದಕ್ಕೆ ಅಕ್ಷರಶಃ ಎರಡೂ ದೇಶಗಳು ಬದ್ಧವಾಗಿ, ಈಗಿರುವ ಹತೋಟಿ ರೇಖೆಯನ್ನು ಹಾಗೆಯೇ ಇಟ್ಟುಕೊಂಡು ಯಾವುದೇ ಮೂರನೇ ದೇಶದ ಮಧ್ಯಪ್ರವೇಶವಿಲ್ಲದೆ ಮಾತುಕತೆ ಆರಂಭಿಸಬೇಕು. ಈ ನಡುವೆ ಆರ್ಥಿಕ-ಸಾಂಸ್ಕೃತಿಕ ರಂಗಗಳಲ್ಲಿ ಸಹಕಾರ ಬೆಳಸಲು ಹಾಗೂ ಜನಗಳ ನಡುವೆ ಸಂಬಂಧಗಳನ್ನು ಬೆಸೆಯಲು ಕ್ರಮಗಳನ್ನು ಕೈಗೊಂಡರೆ ಇವು ಬೆಳೆಯುವ ಸಾಧ್ಯತೆಗಳು ಬಹಳಷ್ಟಿವೆ.

ಇಲ್ಲಿ ಮತ್ತೊಂದು ವಿಷಯವನ್ನೂ ನೆನಪಿಟ್ಟುಕೊಳ್ಳಬೇಕು. ಭಾರತ ಮತ್ತು ಪಾಕಿಸ್ತಾನದ ಆರ್ಥಿಕಗಳು ಗಮನಾರ್ಹ ಮಟ್ಟದವರೆಗೆ ಪರಸ್ಪರ ಬೆಸೆದುಕೊಂಡಿದೆ. ಉದಾಹರಣೆಗೆ ಭಾರತದ ರೂಪಾಯಿಯ ಅಪಮೌಲ್ಯವಾದಾಗಲೆಲ್ಲಾ, ಸಾಮಾನ್ಯವಾಗಿ ಅದಕ್ಕನುಗುಣವಾಗಿ ಪಾಕಿಸ್ತಾನಿ ರೂಪಾಯಿ ಕೂಡಾ ಅಪಮೌಲ್ಯಗೊಂಡಿದೆ. ಭಾರತ ಮತ್ತು ಪಾಕಿಸ್ತಾನಗಳ ನಡುವೆ ಕಾನೂನುಬದ್ಧವಾದ ವ್ಯಾಪಾರ ವಹಿವಾಟು ನಡೆಯುತ್ತಿದ್ದರೂ ದೊಡ್ಡ ಪ್ರಮಾಣದಲ್ಲಿ ವಿವಿಧ ಸರಕುಗಳ-ಸೇವೆಗಳ ಕಾನೂನುಬಾಹಿರ ವ್ಯಾಪಾರ-ವಹಿವಾಟುಗಳೂ ನಡೆಯುತ್ತಿವೆ. ಅಂದರೆ ಎರಡೂ ದೇಶಗಳಿಗೆ ಪರಸ್ಪರರ ಅಗತ್ಯವಿದೆ. ಎರಡೂ ದೇಶಗಳ ಆರ್ಥಿಕ ಸಂಬಂಧಗಳು ಉತ್ತಮಗೊಂಡರೆಅದರಿಂದಇಬ್ಬರಿಗೂಪ್ರಯೋಜನವಿದೆ.

ಸಾಂಸ್ಕೃತಿಕ ಸಂಬಂಧಗಳ ಬಗ್ಗೆಯಂತೂ ಹೇಳಬೇಕಾಗಿಯೇ ಇಲ್ಲ. ಚೀಣಾ, ಮಂಗೋಲಿಯಾ, ಇರಾನ್, ಮಧ್ಯ ಏಶ್ಯಾ, ಅರಬ್ ಜಗತ್ತು ಮತ್ತು ಯುರೋಪ್ ಹೀಗೆ ವಿವಿಧ ಮೂಲಗಳಿಂದ ಪ್ರಭಾವವನ್ನು ತನ್ನದಾಗಿಸಿಕೊಂಡ ಸಾವಿರಾರು ವರ್ಷಗಳ ಇತಿಹಾಸವಿರುವ ಸಂಸ್ಕೃತಿಯ ಸಮಾನ ಪರಂಪರೆ ಎರಡೂ ದೇಶಗಳಿಗಿವೆ. ಆದ್ದರಿಂದಲೇ ನಮ್ಮೆರಡು ಜನಗಳ ನಡುವೆ ಕಂದರ ಉಂಟು ಮಾಡುವ ಪಾಕಿಸ್ತಾನಿ ಆಳರಸರ ಸಂಕುಚಿತ ಪ್ರಯತ್ನಗಳು ಶೋಚನೀಯವಾಗಿ ಸೋತವು. ಇತ್ತೀಚೆಗೆ ನಡೆದ ಎರಡು ಸಾಂಸ್ಕೃತಿಕ ಉತ್ಸವಗಳಲ್ಲಿ - ನವೆಂಬರ್ 1996ರಲ್ಲಿ ಚಂಡಿಗಡದ ಬಳಿ ಮೊಹಾಲಿಯಲ್ಲಿ ಹಾಗೂ ಹೊಸವರ್ಷದ ಮುನ್ನಾದಿನ ಅಮೃತಸರದಲ್ಲಿ ಎರಡೂ ದೇಶಗಳ ಕವಿಗಳು, ಹಾಡುಗಾರರು, ಇತರ ಸಾಂಸ್ಕೃತಿಕ ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಜನಸಾಮಾನ್ಯರು ಯಾವುದೇ ದ್ವೇಷ-ಅಸೂಯೆಯ ಛಾಯೆಯೂ ಇಲ್ಲದೆ ಇದನ್ನು ಮೆಚ್ಚಿಕೊಂಡರು.

ಇಂತಹ ರಂಗಗಳಲ್ಲಿ ಈ ರೀತಿ ಸಂಬಂಧಗಳನ್ನು ಬೆಸೆದಾಗ ಪಾಕಿಸ್ತಾನಿ ಆಳರಸರಿಗೆ ತಮ್ಮ ಭಾರತ-ವಿರೋಧಿ ನಿಲುವು ಅರ್ಥಹೀನ ಎಂದು ಅರಿವಾಗಿ ಅವರೂ ಅದಕ್ಕನುಗುಣವಾಗಿ ಸ್ಪಂದಿಸಲಾರಂಭಿಸುತ್ತಾರೆ. ಈ ರೀತಿ ಎರಡೂ ದೇಶಗಳ ನಡುವಿನ ಸಂಬಂಧಗಳು ಸಕಾರಾತ್ಮಕವಾಗಿ ಅಭಿವೃದ್ಧಿ ಹೊಂದಿ ವಿವಾದಾತ್ಮಕ ವಿಷಯಗಳ ಬಗ್ಗೆಯೂ ಪರಿಹಾರ ಪಡೆಯಲು ಹಾದಿ ಮಾಡಿಕೊಡಲು ಸಾಧ್ಯ.

ಬಸ್ ದರ ಏರಿಕೆ ವಿರುದ್ಧ ಚಳುವಳಿ

ಸಿಂದಗಿ: ಕಾಂಗ್ರೆಸ್ ಸರಕಾರದಲ್ಲಿನ ನೀತಿಗಳನ್ನೇ ಮುಂದುವರಿಸಿಕೊಂಡು ಹೊರಟಿರುವ ರಾಜ್ಯ ಜನತಾದಳ ಸರಕಾರದ ಜನವಿರೋಧಿ ವಿದ್ಯುತ್ ನೀತಿ ಹಾಗೂ ಬಸ್‌ದರ ಏರಿಕೆಯಿಂದಾಗಿ ರೈತರು ಸಂಕಷ್ಟಕ್ಕೊಳಗಾಗಿದ್ದಾರೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಅಧ್ಯಕ್ಷ ಕಾಂ|| ಅಣ್ಣರಾಯ ಈಳಗೇರ ಅವರು ರಾಜ್ಯ ಸರಕಾರವನ್ನು ಕಟುವಾಗಿ ಟೀಕಿಸಿದ್ದಾರೆ.

ರಾಜ್ಯ ಸರಕಾರದ ವಿದ್ಯುತ್ ನೀತಿ ಹಾಗೂ ಸಾರಿಗೆ ಬೆಲೆಏರಿಕೆ ನೀತಿ ವಿರೋಧಿಸಿ ಮಾಚ್ 13ರಂದು ಸಿಂಧಗಿ ಬಸ್ ನಿಲ್ದಾಣದ ಗೇಟಿನ ಎದುರುಗಡೆ ರಸ್ತೆ ತಡೆ ಚಳುವಳಿಯನ್ನು ನಡೆಸುತ್ತಿದ್ದ ರೈತರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು ಪ್ರಯಾಣಿಕರಿಗೆ ನಕಲಿ ಟಿಕೇಟುಗಳನ್ನು ವಿತರಿಸುವುದರಿಂದ ಹಿಡಿದು ಕಳಪೆ ಮಟ್ಟದ ಬಸ್ಸಿನ ಬಿಡಿಭಾಗಗಳನ್ನು ಖರೀದಿ ಮಾಡುವವರೆಗೂ ಸಂಸ್ಥೆಯ ಹಣ ಸೋರಿ ಹೋಗುತ್ತಿದ್ದು ಅದನ್ನು ತಪ್ಪಿಸುವವರೆಗೂ... ತಪ್ಪಿಸಬೇಕೇ ಹೊರತು ಬಸ್ಸಿನ ದರ ಏರಿಸುವುದಲ್ಲ, ಈಗ ಏರಿಸಿರುವ ಬಸ್ಸಿನ ದರವನ್ನು ಇಳಿಸಬೇಕು ಎಂದು ಸರಕಾರಕ್ಕೆ ಆಗ್ರಹಿಸಿದರು

ಕಾಂ|| ಸಿದ್ದಣ್ಣಾ ಐರೋಡಗಿ ಎ.ಎಚ್.ಹೊನ್ನುಟುಗಿ ಮುಂತಾದವರು ಮಾತನಾಡಿದರು. ಬಸ್ ನಿಲ್ದಾಣದಲ್ಲಿ ಒಂದು ಗಂಟೆಯವರೆಗೂ ರಸ್ತೆ ತಡೆ ಚಳುವಳಿ ನಡಿಸಿದ ರೈತರು ಅಂಬೇಡ್ಕರ್ ಚೌಕದಿಂದ ಮೆರವಣಿಗೆ ಹೊರಟು ನಗರದ ಮುಖ್ಯ ಬೀದಿಗಳಲ್ಲಿ ಹಾಯ್ದು ಕೆಇಬಿ ಗೆ ತೆರಳಿ ಪಿಕೆಟಿಂಗ್ ಚಳುವಳಿ ನಡೆಸಿದರು. ಮೆರವಣಿಗೆ ಉದ್ದಕ್ಕೂ ಬಸ್ಸು ಪ್ರಯಾಣ ದರ ವಿರೋಧಿಸಿ ಕೆಇಬಿಯವರ ವಿದ್ಯುತ್ ನೀತಿ ವಿರೋಧಿಸಿ ರೈತರ ಶೋಷಣೆಗಳನ್ನು ಕೂಗುತ್ತಿದ್ದರು. ಮೆರವಣಿಗೆಯ ನೇತೃತ್ವವನ್ನು ರೈತ ಸಂಘದ ತಾಲ್ಲೂಕು ಖಜಾಂಜಿ ಚಿನ್ನಪ್ಪ ಕುಂಬಾರ, ಚಿನ್ನಪ್ಪ ಹೂಗಾರ, ಸಹ ಕಾರ್ಯದರ್ಶಿ ಶ್ರೀಶೈಲ ಸುಣಗಾರ, ಕರಿಮಸಾಬ ದೊಡ್ಡಮನಿ, ಇಬ್ರಾಹಿಂ ಸಾಬ ನಾಗರಾಣ, ಕಾದಿರ ಸಾಮ ಬಾಗವಾನ ಮುಂತಾದವರು ವಹಿಸಿದ್ದರು.

ರಾಯಚೂರು: ಜನತಾದಳ ಸರಕಾರ ಬಸ್ ದರ ಏರಿಸಿರುವುದನ್ನು ವಿರೋಧಿಸಿ ಮಾರ್ಚ್ 11 ರಂದು ಜಿಲ್ಲೆಯ ಜಾಲಹಳ್ಳಿ ಸಿಪಿಐ(ಎಂ) ತಾಲ್ಲೂಕು ಸಮಿತಿಯು ರಸ್ತೆ ತಡೆ ಚಳುವಳಿಯನ್ನು ನಡೆಸಿತು. ಈ ಚಳುವಳಿಯಲ್ಲಿ ಪಕ್ಷದ ಮುಖಂಡರು ಹಾಗೂ ಸಾಮೂಹಿಕ ಸಂಘಟನೆಗಳ ಮುಖಂಡರೂ ಭಾಗವಹಿಸಿದ್ದರು.

ಈ ಚಳುವಳಿಯ ನೇತೃತ್ವವನ್ನು ಸಿಪಿಐ(ಎಂ)ಜಾಲಹಳ್ಳಿ ಶಾಖೆ ಕಾರ್ಯದರ್ಶಿ ಪಿ.ಗಿರಿಯಪ್ಪ ವಹಿಸಿದ್ದರು.

ದೊಡ್ಡಬಳ್ಳಾಪುರ: ರಾಜ್ಯ ಸರಕಾರದ ಬಸ್ ದರ ಏರಿಕೆಯನ್ನು ಪ್ರತಿಭಟಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ)ಮಾರ್ಚ್ 10 ರಂದು ದೊಡ್ಡಬಳ್ಳಾಪುರದಲ್ಲಿ ಪ್ರತಿಭಟನಾ ಮೆರವಣಿಗೆ ಮತ್ತು ಕೆಎಸ್ಆರ್‌ಟಿಸಿ ಬೆಲೆ ಏರಿಕೆ-ಖಾಸಗೀಕರಣಗಳ ಭೂತ ದಹನವನ್ನು ಏರ್ಪಡಿಸಿತ್ತು.

ಈ ಸಭೆಯನ್ನುದ್ದೇಶಿಸಿ ಡಿವೈಎಫ್ಐನ ಮುಖಂಡರಾದ ಬಿ.ಜಿ.ಹೇಮಂತ ರಾಜುರವನ್ನು ಮಾತನಾಡುತ್ತಾ 'ಕರ್ನಾಟಕ ರಾಜ್ಯ ಸರಕಾರವು ಇತ್ತೀಚೆಗೆ ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣ ದರವನ್ನು ವಿಪರೀತ ಏರಿಸಿರುವುದು ಬಡವರನ್ನು ತೀರಾ ಕಂಗೆಡಿಸುವ ಕ್ರಮವಾಗಿದೆ. ಈಗಾಗಲೇ ವಿದ್ಯುತ್ ಖೋತಾದಿಂದ ರೈತರು ಮತ್ತು ಕಾರ್ಮಿಕರು ಕಷ್ಟದಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಪ್ರಯಾಣ ದರ ಏರಿಸಿರುವುದು ಗಾಯದ ಮೇಲೆ ಬರೆ ಎಳೆದಂತೆ ಆಗಿದೆ" ಎಂದರು.

ಈ ಪ್ರತಿಭಟನಾ ಕಾರ್ಯಕ್ರಮದಲ್ಲಿ 150 ಜನ ಭಾಗವಹಿಸಿದ್ದರು.

ಹುಬ್ಬಳ್ಳಿ: ರಾಜ್ಯದ ಜನತಾದಳ ಸರಕಾರ ಈಗಾಗಲೇ ಎಲ್ಲ ಅಗತ್ಯ ಸಾಮಾನುಗಳ ಬೆಲೆ ಏರಿಸಿರುವುದರಿಂದ ಸಾಮಾನ್ಯ ಜನ ತತ್ತರಿಸಿ ಹೋಗಿದ್ದು ಗಾಯದ ಮೇಲೆ ಬರೆ ಎಳೆದಂತೆ ಬಸ್ ದರಗಳನ್ನು ಏರಿಸಿರುವ ಕ್ರಮವನ್ನು ವಿರೋಧಿಸಿ ಸಿಐಟಿಯು ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಮಾರ್ಚ್ 11 ರಂದು ಒಂದು ಗಂಟೆಗಳ ಕಾಲ ಕಾರ್ಮಿಕರು ಕೇಂದ್ರ ಬಸ್ ನಿಲ್ದಾಣದಲ್ಲಿ ಮತ ಪ್ರದರ್ಶನ ಮಾಡುವುದರ ಮುಖಾಂತರ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು.

ಸಾರಿಗೆ ಸಂಸ್ಥೆ ವಿಭಜನೆ ಮಾಡುವುದು ಸರಿಯಲ್ಲ, ಖಾಸಗೀಕರಣ ಮಾಡಲು ನಾವು ಬಿಡುವುದಿಲ್ಲ ಸಂಸ್ಥೆಯ ಮೂಲಭೂತ ಸಮಸ್ಯೆಗಳನ್ನು ಗುರುತಿಸಲು ವಿಫಲವಾದ ಸರಕಾರ ಜನ ಸಾಮಾನ್ಯರ ಮೇಲೆ ಹೊರೆ ಹೊರಿಸುತ್ತಿರುವುದನ್ನು ಖಂಡಿಸುತ್ತೇವೆ. ತಕ್ಷಣ ಬಸ್ ದರವನ್ನು ಇಳಿಸದಿದ್ದರೆ ಉಗ್ರ ಹೋರಾಟ ಮಾಡುವುದು ಅನಿವಾರ್ಯ ಎಂದು ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಿ.ಜೆ.ಗೋಂದಕರ, ಪ್ರದರ್ಶನಕಾರರನ್ನು ಉದ್ದೇಶಿಸಿ ಮಾತನಾಡಿದರು. ನಂತರ ಕೇಂದ್ರ ಬಸ್ ನಿಲ್ದಾಣದ ನಿಯಂತ್ರಣಾಧಿಕಾರಿಗಳ ಮುಖಾಂತರ ಸಾರಿಗೆ ಮಂತ್ರಿಗಳಿಗೆ ಮನವಿ ಅರ್ಪಿಸಲಾಯಿತು. ಮೈಸೂರು ಕಿರ್ಲೋಸ್ಕರ್ ಕೆಲಸಗಾರರ ಸಂಘದ ಮುಖಂಡರಾದ ಕೃಷ್ಣಪ್ರಭು, ವಿ.ಎಂ.ಜೋಶಿ, ಎಸ್ಎಫ್ಐ ಜಿಲ್ಲಾ ಕಾರ್ಯದರ್ಶಿ ಮಹೇಶ್ ಪತ್ತಾರ್, ಸದನ್ ಹೇರೋ ಕಾರ್ಮಿಕರ ಮುಖಂಡರಾದ ರಮೇಶ ಬೆನಕಟ್ಟಿ ಮುಂತಾದವರು ಹೋರಾಟದ ನೇತೃತ್ವ ವಹಿಸಿದ್ದರು. ಕೊನೆಯಲ್ಲಿ ಕೆ.ಪಿ.ಜೋಶಿ ವಂದಿಸಿದರು.

'ರಾಮ್ ಕೆ ನಾಮ್' ವಿರುದ್ಧ ಕೂಗು

ಇದ್ದದ್ದು ಇದ್ದ ಹಾಗೆ ಹೇಳಿದರೆ......

ಖ್ಯಾತ ವ್ಯಂಗ್ಯಚಿತ್ರಕಾರ ಹರಿಣಿ ಅವರು 'ನಿರಂತರ' ಸಂವಾದದಲ್ಲಿ ಮಾತನಾಡುತ್ತಾ "ತಮ್ಮ ಮುಖವನ್ನು ಕನ್ನಡಿಯಲ್ಲಿ ನೋಡಿಕೊಳ್ಳಲು ಸಮಾಜದ ನಾಯಕರು ಹೆದರುತ್ತಾರೆ" ಎಂದಿದ್ದರು. ಇದು ಹೌದು ಎಂಬುದು ಮತ್ತೊಮ್ಮೆ ಸಾಬೀತಾಗಿದೆ.

'ರಾಮ್ ಕೆ ನಾಮ್' ಸಾಕ್ಷ್ಯಚಿತ್ರ ಹಿಡಿದ ಕನ್ನಡಿಯಲ್ಲಿ ತಮ್ಮ ಕುರೂಪಿ ಮುಖವನ್ನು ಕಂಡ ಸಂಘ ಪರಿವಾರ ಕನ್ನಡಿಯೇ ಸರಿಯಿಲ್ಲ ಎಂದು ಗದ್ದಲ ಎಬ್ಬಿಸಿದ್ದಾರೆ. 'ರಾಮ್ ಕೆ ನಾಮ್' ಸಾಕ್ಷ್ಯಚಿತ್ರ ಎಲ್.ಕೆ.ಅಡ್ವಾಣಿ ಅವರ ನೇತೃತ್ವದಲ್ಲಿ ಕೋಮುವಾದಿ ಕೂಟ ಆರಂಭಿಸಿದ ಮೊದಲ ರಥಯಾತ್ರೆ ಇಡೀ ದೇಶದಲ್ಲಿ ಕೋಮುವಾದವನ್ನು ತನ್ನ ಸ್ವಾರ್ಥದ ಪೂರೈಕೆಗಾಗಿ ಹರಡುತ್ತಾ ಹೋದುದನ್ನು ಚಿತ್ರಿಸುತ್ತದೆ. ಧರ್ಮವನ್ನು ರಾಜಕಾರಣದೊಂದಿಗೆ ಬೆರೆಸಬಾರದು ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬಲವಾಗಿ ನಂಬಿದೆ ಮತ್ತು ಪ್ರಚಾರ ಮಾಡಿದೆ. ಆದರೆ ಬಿಜೆಪಿ ಸೇರಿದಂತೆ ಸಂಘ ಪರಿವಾರ ದೆಹಲಿಯ ಗದ್ದುಗೆ ಏರಲು ಸುಲಭದ ದಾರಿಯಾಗಿ ಧರ್ಮವನ್ನು ರಾಜಕಾರಣದೊಂದಿಗೆ ಬೆರೆಸಿ ಕೋಮು ವಿಷ ಹರಡಿ ಇಡೀ ದೇಶದಲ್ಲಿ ಮುಗ್ಧ ಜನರ ರಕ್ತದೋಕುಳಿಗೆ ಕಾರಣವಾಗಿದೆ.

ಇದ್ದದ್ದನ್ನು ಇದ್ದ ಹಾಗೆ 'ರಾಮ್ ಕೆ ನಾಮ್' ಚಿತ್ರಿಸಿದ್ದಕ್ಕೆ ಬಿಜೆಪಿಗೆ ಕೆಂಡದಂತಹ ಕೋಪ ಬಂದಿದೆ. ರಾಮ್ ಕೆ ನಾಮ್‌ನ ನಿರ್ದೇಶಕ ಆನಂದ್ ಪಟವರ್ಧನ್ ಜೀವದ ಹಂಗು ತೊರೆದು ಕೋಮುವಾದಿಗಳ ಕರಾಳ ಮುಖವನ್ನು ಬಯಲಿಗೆಳೆದಿದ್ದಾರೆ.

ಯಾವುದೇ ಸಾಕ್ಷ್ಯಚಿತ್ರ ರಾಷ್ಟ್ರ, ಅಂತರಾಷ್ಟ್ರ ಮಟ್ಟದ ಮನ್ನಣೆ ಗಳಿಸಿದರೆ ದೂರದರ್ಶನದಲ್ಲಿ ಪ್ರಸಾರ ಮಾಡಬೇಕು ಎಂಬ ನಿಯಮವಿದ್ದರೂ ಸಹಾ ಮಸೀದಿ ಉರುಳಿಸುತ್ತಿದ್ದಾಗ ಆರಾಮವಾಗಿ ಮನೆಯ ಟಿವಿ ಮುಂದೆ ಕುಳಿತಿದ್ದ ನರಸಿಂಹರಾಯರ ಸರಕಾರ ಈ ಸಾಕ್ಷ್ಯಚಿತ್ರ ಎಂಟು ರಾಷ್ಟ್ರ, ಅಂತರ್‌ರಾಷ್ಟ್ರೀಯ ಪ್ರಶಸ್ತಿಯನ್ನು ಗಳಿಸಿದ್ದರೂ ದೂರದರ್ಶನದಲ್ಲಿ ಪ್ರಸಾರ ಮಾಡಲು ಅವಕಾಶ ಕೊಟ್ಟಿರಲಿಲ್ಲ.

ಆದರೂ ಆನಂದ ಪಟವರ್ಧನ್ ಕೋಮುವಾದಿಗಳ ವಿರುದ್ಧ ಅದನ್ನು ಬೆಂಬಲಿಸುತ್ತಿರುವ ಕಾಂಗ್ರೆಸ್ ಸರಕಾರದ ವಿರುದ್ಧ ಹೋರಾಡಲು ನ್ಯಾಯಾಲಯದ ಮೆಟ್ಟಲು ಹತ್ತಿದರು. ಸತತವಾಗಿ ಐದು ವರ್ಷ ನ್ಯಾಯಾಲಯದಲ್ಲಿ ಹೋರಾಡಿದ ನಂತರ 'ರಾಮ್ ಕೆ ನಾಮ್'ಗೆ ಅಂತೂ ಜಯ ಸಿಕ್ಕಿತು.

ಮುಂಬೈ ನ್ಯಾಯಾಲಯ ದೂರದರ್ಶನಕ್ಕೆ ಕಪಾಳ ಮೋಕ್ಷ ಮಾಡಿ ಕೂಡಲೇ ರಾಮ್‌ಕೆನಾಮ್ ಪ್ರಸಾರ ಮಾಡುವಂತೆ ಆದೇಶಿಸಿತು. ಮಾತ್ರವಲ್ಲ ಜನರು ನೋಡುವ ಹೊತ್ತಿನಲ್ಲಿಯೇ ಪ್ರಸಾರ ಮಾಡಬೇಕೆಂದು ತಿಳಿಸಿತು. ಬೆಚ್ಚಿಬಿದ್ದ ದೂರದರ್ಶನ ತನ್ನ ಮೊದಲಿನ ಕಾರ್ಯಕ್ರಮವನ್ನೆಲ್ಲಾ ಮೂಲೆಗೆ ತಳ್ಳಿ ಎರಡುವಾರದಹಿಂದೆಸಾಕ್ಷ್ಯಚಿತ್ರವನ್ನುಪ್ರಸಾರಮಾಡಿತು.

ಸಾಕ್ಷ್ಯಚಿತ್ರ ನೋಡಿದವರೆಲ್ಲರೂ ಕೋಮುವಾದಿಗಳ ನಿಜ ಸ್ವರೂಪ ತಿಳಿಯುವಂತಾದದ್ದೇ ಸಂಘ ಪರಿವಾರವನ್ನು ಬೆಚ್ಚಿ ಬೀಳಿಸಿದೆ. ಈ ಸಾಕ್ಷ್ಯಚಿತ್ರ ಪ್ರಸಾರವಾದದ್ದು ಹೇಗೆ? ಎಂದು ಬಿಜೆಪಿ ಸದಸ್ಯರು ರಾಜ್ಯಸಭೆಯಲ್ಲಿ ಗದ್ದಲ ಎಬ್ಬಿಸಿದ್ದಾರೆ. 'ಭೂತದ ಬಾಯಲ್ಲಿ ಭಗವದ್ಗೀತೆ' ಎಂಬಂತೆ ಈ ಕೋಮುವಾದಿಗಳೇ ರಾಮ್ ಕೆ ನಾಮ್ ಸಾಕ್ಷ್ಯಚಿತ್ರದಿಂದ ಲಕ್ಷಾಂತರ ಜನರ ಧಾರ್ಮಿಕ ಭಾವನೆಗಳಿಗೆ ನೋವುಂಟಾಗಿದೆ ಎಂದು ರಾಜ್ಯಸಭೆಯಲ್ಲಿ ಕೂರಗಿದ್ದಾರೆ.

ಎಡಪಕ್ಷಗಳ ಸದಸ್ಯರು ಈ ಸಾಕ್ಷ್ಯ ಚಿತ್ರ ಸಮಕಾಲೀನ ಸ್ಥಿತಿಯ ಅತ್ಯುತ್ತಮ ಚಿತ್ರಣ ಎಂದು ಬೆಂಬಲಿಸಿದ್ದಾರೆ. ಸಿಪಿಎಂನ ಬಿಪ್ಲವ್ ದಾಸ್‌ಗುಪ್ತಾ ಸಿಪಿಐನ ಗುರುದಾಸ್‌ದಾಸ್‌ಗುಪ್ತ ಬಿಜೆಪಿ ಸದಸ್ಯರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಈ ಹಿಂದಿನ ಕಾಂಗ್ರೆಸ್ ಸರಕಾರ ಈ ಚಿತ್ರವನ್ನು ನಾಲ್ಕು ವರ್ಷಗಳ ಕಾಲ ಪ್ರಸಾರ ಮಾಡದೆ ತಡೆಹಿಡಿದಿತ್ತು. ಆದರೆ ಈಗಿನ ಸರಕಾರ ಇದನ್ನು ಪ್ರಸಾರ ಮಾಡಿದ್ದಾದರೂ ಹೇಗೆ? ಎಂದು ಆಕ್ರೋಶ ವ್ಯಕ್ತಪಡಿಸಿವೆ.

ಕಾಂಗ್ರೆಸ್ ಸದಸ್ಯರೇ ಎಡಪಕ್ಷಗಳ ನಿಲುವನ್ನು ಬೆಂಬಲಿಸಿ ಕಾಂಗ್ರೆಸ್ ಸರಕಾರ ಈ ಸಾಕ್ಷ್ಯ ಚಿತ್ರವನ್ನು ಯಾವ ಆಧಾರದಲ್ಲಿ ತಡೆ ಹಿಡಿಯಿತು ಎಂಬುದರ ದಾಖಲೆಗಳನ್ನು ಸದನದಲ್ಲಿ ಮಂಡಿಸಬೇಕು ಎಂದು ಆಗ್ರಹಿಸಿ ಬಿಜೆಪಿಯ ಬಾಯಿ ಮುಚ್ಚಿಸಿದ್ದಾರೆ.

'ಕಡಿಮೆ ಅವಧಿಯದ್ದು ಆದರೆ ಹೇಳಿಕೆ ಬಲವಾದದ್ದು' ಎಂದು ಸಾಕ್ಷ್ಯಚಿತ್ರವನ್ನು ಪ್ರಶಂಸಿಸಲಾಗಿದೆ. ಇದು ಹೌದು ಎಂಬುದನ್ನು 'ರಾಮ್ ಕೆ ನಾಮ್' ನಿಜ ಮಾಡಿದೆ. ಅತ್ಯಂತ ಕಡಿಮೆ ಅವಧಿಯಲ್ಲಿ ಕೋಮುವಾದಿಗಳು ಇಡೀ ದೇಶಕ್ಕೆ ಕಿಚ್ಚು ಹಚ್ಚಿದ್ದನ್ನು ಬಲವಾಗಿ ತೋರಿಸಿದ್ದಾರೆ.

ಕಳೆದ ವಾರ ಈ ಪುಟದಲ್ಲಿ "ಅಚಿಕ" ಅಂಕಣದಲ್ಲಿ ಪ್ರಕಟವಾದ "ಕುರಿಗಳು...ಸಾರ್.... ಕುರಿಗಳು"ನಲ್ಲಿನ ಕೊನೆಯ ಪ್ಯಾರಾದಲ್ಲಿ ಒಂದು ಗಂಭೀರ ಮುದ್ರಣ ದೋಷವಿದ್ದು ಅದನ್ನು ಈ ರೀತಿ ಓದಿಕೊಳ್ಳುವುದು-

"ಈ ಬಾರಿಯ ಬಜೆಟ್ ನಂತರ ನವದೆಹಲಿಯಲ್ಲಿ ಇನ್ನೊಂದು ಪುಕಾರು ತೀವ್ರವಾಗಿ ಹಬ್ಬದೆಯಂತೆ. ಸಿಐಐ ಮತ್ತು ಐಎಂಎಫ್ ಸೇರಿ ಮನಮೋಹನ ಸಿಂಗ್‌ರ ರೂಪದಲ್ಲಿ ಇಲ್ಲದಿದ್ದರೂ ಅದೇ ರೀತಿಯ ತಳಿಯನ್ನು ಕೃತಕವಾಗಿ ತಯಾರಿಸುವ ತಂತ್ರಜ್ಞಾನದಲ್ಲಿ ಸಫಲವಾಗಿದ್ದು ಅದರ ಫಲವೇ ಚಿದಂಬರಂ ಎಂಬ ವದಂತಿ ಹಬ್ಬದೆಯಂತೆ. ಅದೇ ರೀತಿ ದೇವೇಗೌಡರು ನರಸಿಂಹರಾಯರ ತದ್ರೂಪಿ ಎಂದೂ ಪುಕಾರು ಹಬ್ಬಿದೆಯಂತೆ. ಆದರೆ ಇದು ಸುಳ್ಳು ವದಂತಿ. ರೂಪ ಬೇರೆ 'ತದ್ರೂಪಿ ಸಿದ್ಧಾಂತದ ತಲೆ' ಇರುವ ಮನುಷ್ಯನ ಸೃಷ್ಟಿ ಅಸಾಧ್ಯ ಎಂದು ಒಬ್ಬ ವಿಜ್ಞಾನಿ ಅಭಿಪ್ರಾಯಪಟ್ಟಿದ್ದಾರಂತೆ."

ಓಹ್! ಪಶ್ಚಿಮ ಬಂಗಾಳ

ಅಂದು ಆ ಪುಟ್ಟ ಹುಡುಗ
ದುರ್ಗಾದೇವಿಯ ಜಾತ್ರೆಯ ಮಧ್ಯೆ
ಬಾರದಿದ್ದ ನಗು ನುಂಗಿಕೊಂಡ ಅಳಲು
ಮಾಸಲು ಅಂಗಿ, ಎಣ್ಣೆ ಇಲ್ಲದ ಕೂದಲು
ಶೂನ್ಯದಲ್ಲಿ ಅದೇ ನೋವು ಚೀರಾಟ
ಅವ್ವನ ಎದೆಯಾಳದೊಳಗೆ
ಬಚ್ಚಿಟ್ಟುಕೊಂಡ ಯಾತನೆ
ಎಲ್ಲೋ ಬಚ್ಚಿಟ್ಟುಕೊಂಡ ಹಾವು
ತೇರನೆಳೆದಷ್ಟೇ ಚಿತ್ರ ಸುತ್ತಿದ್ದು
ಅಷ್ಟೇ ತೊಟ್ಟಿಲ ಸುತ್ತಿಸಿದ್ದು
ಚೆಂಗುಲಾಬಿಯ ತೋರಿಸಿದ್ದು
ಹುಡುಗನಿಗಾವುದು ಬೇಕಿಲ್ಲ
ಅಲ್ಲಿ ಕಂಡ
ಅವರ ತೋಳಿನ ಬಂದೂಕಿನ ನಳಿಗೆ
ತೇರಿಗೆಸೆದ ರಕ್ತದೆಸಳುಗಳು
ಬಿಚ್ಚಿಟ್ಟ ಕೆಂಪು ಹಾವು
ಉತ್ಸವದ ಜನ ಜಂಗುಳಿಯ ಮಧ್ಯೆ
ಕೆಂಪು ಗುಲಾಬಿಯ ಎಸಳು ಮುದುಡಿದರೆ
ಅಳುನುಂಗಿ ಮುತ್ತಿಟ್ಟ
ಹಬ್ಬ ಮುಗಿದಾಗ
ಕಾಲಡಿಯ ಚೆಂಗುಲಾಬಿ ಎಸಳುಗಳು
ಹುಡುಗನ ಮುಷ್ಟಿಗೇರಿತು
ಓರಗೆಯ ಹುಡುಗರ ಕರೆದ
ಎಸಳುಗಳ ಒಂದೊಂದೆ ನೀಡಿ
ಬಿತ್ತಿದ ಬೀಜಕ್ಕೆ ನೀರುಣಿಸಿದ
ಜೀವ ತುಂಬಿ
ಬಂಜರು ಭೂಮಿಯಲ್ಲಿ ಈಗ
ಬಂಗಾರದ ತೆನೆ ತೂಯ್ಯುತ್ತಿದೆ
ತಾಯ ಬಸಿರೊಳಗೆ ಕಿಲ ಕಿಲ ನಗು
ತೊಟ್ಟಿಲೊಳಗೆ ಕೇಕೆ
ಇಂದು ಜಾತ್ರೆಯೊಳಗೆ ಜಯಘೋಷ
ಈಗ ಹುಡುಗನಲ್ಲಿ
ಇಪ್ಪತ್ತರ ತಾರುಣ್ಯಕ್ಕಿರುವ
ಹೊಳಪು ಕಣ್ಣಿನ ಚಿರಯುವಕ

– ಎಸ್.ರಾಜ್‌ಕುಮಾರ್

ಕೃಪೆ: 'ನಿರಂತರ'

ಜನರಿಗೆ ಸ್ಪಂದಿಸುವ ಪತ್ರಿಕೋದ್ಯಮ ಅಗತ್ಯ

– ಬಿ.ಮಾಧವ

ಮಂಗಳೂರು: ಜನರ ನೋವಿಗೆ ಸ್ಪಂದಿಸುವ, ಅವರ ಪ್ರಶ್ನೆಗಳನ್ನು ಬಗೆಹರಿಸುವ ಪತ್ರಿಕೋದ್ಯಮ ಇಂದಿನ ಅಗತ್ಯ ಎಂದು ಕಾರ್ಮಿಕ ಮುಖಂಡ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಮಾಧವ ಅವರು ಅಭಿಪ್ರಾಯಪಟ್ಟರು.

ಸಮಾನ ಮನಸ್ಕ ಸಂಘಟನೆಗಳು ರೂಪಿಸಿರುವ 'ನಿರಂತರ' ಗೋಡೆ ಪತ್ರಿಕೆ ಹಮ್ಮಿಕೊಂಡಿದ್ದ 'ರಾಮ್‌ಕೆನಾಮ್' ಸಾಕ್ಷ್ಯ ಚಿತ್ರ ಕುರಿತ ಸಂವಾದ ವನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಇಂದಿನ ಪತ್ರಿಕೆಗಳು ಕೆಲವು ವರ್ಗಗಳ ಹಿತಾಸಕ್ತಿಯನ್ನು ಮಾತ್ರ ರಕ್ಷಿಸದೆ ಜನಸಮೂಹದ ಪರವಾಗಿ ಇರಬೇಕಾದ ಅಗತ್ಯವಿದೆ. ಒಂದು ಪತ್ರಿಕೆ ಮತ್ತೊಂದು ಪತ್ರಿಕೆಯ ಪ್ರತಿಬಿಂಬದಂತಾಗದೆ ದೇಶದ, ಜನರ ಹಿತಾಸಕ್ತಿಯನ್ನು ರಕ್ಷಿಸಲು ಮುಂದಾಗಬೇಕು ಎಂದರು.

ಗೋಡೆ ಪತ್ರಿಕೆ ಜನರ ಮನಸ್ಸನ್ನು ಬಿಂಬಿಸಲು ಸಾಧ್ಯ. ಜನರಿಗೆ ಬೇಕಾದ ಸುದ್ದಿಗಳನ್ನು ಕೊಡಲು ಸಾಧ್ಯ. ಜನರಿಗೆ ಆಸಕ್ತಿ ಇರುವ ಎಷ್ಟೋ ಪ್ರಶ್ನೆಗಳಿಗೆ ಇಂದಿನ ಪತ್ರಿಕೋದ್ಯಮದಿಂದ ಉತ್ತರ ಸಿಗದಿರುವ ಸಂದರ್ಭದಲ್ಲಿ ಗೋಡೆಪತ್ರಿಕೆಗಳು ಹೊಸ ನೋಟವನ್ನು ನೀಡಲು ಸಾಧ್ಯವಿದೆ ಎಂದರು.


ಖ್ಯಾತ ಸಾಕ್ಷ್ಯ ಚಿತ್ರ ನಿರ್ದೇಶಕ ಆನಂದ ಪಟವರ್ಧನ್ ಅವರ ಹಲವು ಅಂತರ್‌ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದ 'ರಾಮ್ ಕೆ ನಾಮ್' ಸಾಕ್ಷ್ಯ ಚಿತ್ರದ ಬಗ್ಗೆ ಇತ್ತೀಚೆಗೆ ಮುಂಬೈ ಹೈಕೋರ್ಟ್ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಈ ಸಂವಾದವನ್ನು ಹಮ್ಮಿಕೊಳ್ಳಲಾಗಿತ್ತು.

ರಾಷ್ಟ್ರ, ಅಂತರಾಷ್ಟ್ರ ಮಟ್ಟದ ಮನ್ನಣೆ ಪಡೆದ ಸಾಕ್ಷ್ಯ ಚಿತ್ರಗಳನ್ನು ದೂರದರ್ಶನದಲ್ಲಿ ಪ್ರಸಾರ ಮಾಡಬೇಕೆಂಬ ನಿಯಮವಿದ್ದರೂ ಕೂಡಾ 'ರಾಮ್ ಕೆ ನಾಮ್' ಚಿತ್ರವನ್ನು ಪ್ರಸಾರ ಮಾಡಿರಲಿಲ್ಲ. ಇದರ ವಿರುದ್ಧ ನ್ಯಾಯಾಲಯದ ಮೊರೆ ಹೊಕ್ಕ ಪಟವರ್ಧನ್ ಜಯಗಳಿಸಿದರು.

ಜೆ.ಎನ್.ಮೋಹನ್ ಪ್ರಾಸ್ತಾವಿಕ ಮಾತುಗಳನ್ನಾಡಿದರು.ನಾಗೇಶ್‌ಕುಮಾರ್ ಸ್ವಾಗತಿಸಿ,ತಾರಾನಾಥವಂದಿಸಿದರು.

'ರಾಮ್ ಕೆ ನಾಮ್' ದೂರದರ್ಶನದಲ್ಲಿ ಪ್ರಸಾರವಾದುದನ್ನು ಪ್ರತಿಭಟಿಸಿ ಲೋಕಸಭೆಯಲ್ಲಿ ಗಲಭೆ ಎಬ್ಬಿಸಿರುವುದನ್ನು 'ನಿರಂತರ'ವು ಖಂಡಿಸಿದೆ. ಕೋಮು ಸೌಹಾರ್ದತೆಯನ್ನು ಬಲಪಡಿಸುವ ಯಾವುದೇ ಪ್ರಯತ್ನವನ್ನು ನಿರಂತರ ಬೆಂಬಲಿಸುತ್ತದೆ.

ಕೃಪೆ : 'ನಿರಂತರ'



ಉತ್ತರಪ್ರದೇಶದಲ್ಲಿ ಬಿಜೆಪಿ-ಬಿಎಸ್‌ಪಿ ಸಮ್ಮಿಶ್ರ ಸರಕಾರದ ಬಗ್ಗೆ 'ಎಕನಾಮಿಕ್ ಟೈಮ್ಸ್'ನಲ್ಲಿ ಸುರೇಶ್‌ರವರ ವ್ಯಂಗ್ಯ

ಜನುಮದ ಜೋಡಿ - ಚಲನಚಿತ್ರ ಕುರಿತು ಒಂದು ಸಂವಾದ

ಮಾರ್ಚ್ 9ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನಲ್ಲಿ ಜನವಾದಿ ಮಹಿಳಾ ಸಂಘಟನೆ, ಎಸ್‌ಎಫ್‌ಐ ಮತ್ತು ಡಿವೈಎಫ್‌ಐನ ಸಂಯುಕ್ತ ಆಶ್ರಯದಲ್ಲಿ ಜನುಮದ ಜೋಡಿ ಚಲನಚಿತ್ರದ ಒಂದು ಸಂವಾದವನ್ನು ಏರ್ಪಡಿಸಲಾಗಿತ್ತು. ಈ ಸಂವಾದಕ್ಕೆ ಚಲನಚಿತ್ರದ ನಿರ್ದೇಶಕ ಟಿ.ಎಸ್.ನಾಗಾಭರಣ, ಚಿತ್ರಕಥೆ ಬರೆದಿರುವ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ, ಚಿತ್ರದಲ್ಲಿ ಪಾತ್ರ ವಹಿಸಿದ್ದ ಅಶೋಕ್, ಮುಖ್ಯಮಂತ್ರಿ ಚಂದ್ರು, ಸಹ ನಿರ್ದೇಶಕರಾದ ರಘುನಂದನ್ ಹಾಗೂ ಇನ್ನಿತರ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಮೊದಲಿಗೆ ಪ್ರಸ್ತಾವನೆ ಭಾಷಣ ಮಾಡಿದ ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷೆ ಕೆ.ಎಸ್.ವಿಮಲ ಈ ಸಂವಾದದ ಪ್ರಸ್ತುತತೆಯ ಬಗ್ಗೆ ತಿಳಿಸಿದರು. ಟಿ.ಎಸ್.ನಾಗಾಭರಣ ಮಾತನಾಡುತ್ತಾ ಈ ಸಂವಾದವನ್ನೇರ್ಪಡಿಸಿದ್ದ ಮೂರು ಸಂಘಟನೆಗಳಿಗೂ ವಂದನೆಗಳನ್ನು ಹೇಳಿ ಈ ಮಾಧ್ಯಮವನ್ನು ಸಾಹಿತ್ಯಿಕವಾಗಿ ಸಾಮಾಜಿಕವಾಗಿ ಜನರಿಗೆ ಹತ್ತಿರ ಕೊಂಡೊಯ್ಯಬೇಕು ಎಂಬುದೇ ತಮ್ಮ ಆಶಯವೆಂದು ತಿಳಿಸುತ್ತಾ ಮೂಲ ಕಥೆಯಲ್ಲಿ ಗುಜರಾತಿನ ಗ್ರಾಮೀಣ ಜನತೆಯ ಜೀವನ ವಿಧಾನದ ಬಗ್ಗೆ ಬಂದಿದೆ ಅದನ್ನೇ ಮೂಲಕಥೆಗೆ ಧಕ್ಕೆ ಬಾರದ ರೀತಿಯಲ್ಲಿ ಕನ್ನಡ ನಾಡಿನ, ಕನ್ನಡಿಗರಿಗೆ ತಕ್ಕಂತೆ ಮಾರ್ಪಾಡು ಮಾಡಿದುದ್ದಾಗಿಯೂ, ತಮ್ಮ ಚಿತ್ರದಲ್ಲಿ ಈ ಜಾತಿ ಸಮಾಜದಲ್ಲಿ ಹೆಣ್ಣು ಜೀವ ನೋವನ್ನುಂಡು ಕೊನೆಗೆ ಸಮಾಜದ ಕಟ್ಟುಪಾಡನ್ನೆಲ್ಲಾ ಧಿಕ್ಕರಿಸಿ ಹೇಗೆ ಎದ್ದು ನಿಲ್ಲುತ್ತಾಳೆ ಎಂಬುದನ್ನು ತಿಳಿಸಿದರು. ಬರಗೂರು ರಾಮಚಂದ್ರಪ್ಪ ಮಾತನಾಡಿ ಕಲಾತ್ಮಕ ಚಿತ್ರಕ್ಕೆ ತೊಳಲಾಟ ಮತ್ತು ತಳಮಳ ಎರಡೂ ಬೇಕಾಗಿದೆ. ಈ ರೀತಿಯ ತೊಳಲಾಟ ಮತ್ತು ತಳಮಳ ಜನುಮದ ಜೋಡಿಯಲ್ಲಿ ಕಂಡು ಬಂದಿದೆ ಎಂದು ಹೇಳುತ್ತಾ ಸ್ಥಳೀಯ ಸಂಸ್ಕೃತಿಯನ್ನು ತನ್ನ ವಸ್ತುವಿಗೆ ಅಳವಡಿಸಿಕೊಂಡು ಜನಪದೀಯವಾದ ಆಶಯಗಳ ಮೂರ್ತಸ್ವರೂಪ ಇಲ್ಲಿ ಮೂಡಿಬಂದಿದೆ ಎಂದು ಹೇಳಿ ಇಲ್ಲಿ ಸ್ತ್ರೀ ಸ್ವಾತಂತ್ರ್ಯ ಆಯ್ಕೆಯು ಸ್ವಾತಂತ್ರ್ಯವಾಗಿ ಬಂದಿದೆ ಎಂದು ಹೇಳಿದರು.

ಚಿತ್ರನಟ ಅಶೋಕ್ ಮಾತನಾಡಿ ಜಾತಿ ವ್ಯವಸ್ಥೆ ದೂರವಾಗಿ ಆರೋಗ್ಯಪೂರ್ಣ ಸಮಾಜ ಬರಬೇಕು ಎಂಬುದು ತಮ್ಮ ಆಶಯ ಎಂದು ಹೇಳಿದರು. ಮುಖ್ಯಮಂತ್ರಿ ಚಂದ್ರು ಮಾತನಾಡಿ ಇದುವರೆಗೆ ಜನ ಚಪ್ಪಾಳೆ ತಟ್ಟುವಂತಹ ವಿಚಾರಗಳನ್ನು ಕೊಟ್ಟಿ ಲ್ಲವೆ ಎಂದು ನನಗನಿಸುತ್ತದೆ ಎಂದು ಹೇಳಿ ಈ ಒಂದು ಚಿತ್ರದಲ್ಲಿ ಆ ಕೆಲಸ ಆಗಿದೆ ಎಂಬ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಚಿತ್ರದಲ್ಲಿ ಗೌಡರ ಪಾತ್ರ ವಹಿಸಿದ್ದ ಕೃಷ್ಣೇಗೌಡರು ಜನುಮದ ಜೋಡಿಯ ಹಾಡುಗಳಲ್ಲಿ ನೇಟಿವಿಟಿ ಕಂಡುಬಂದಿದೆ ಎಂದು ಹೇಳಿದರು. ಈ ಸಂವಾದದಲ್ಲಿ ಭಾಗವಹಿಸಿದ್ದ ಅನೇಕ ಜನ ಮಾತನಾಡಿ ಹೊಸ ಸಂಘಟನೆಗಳಿಗೆ ವಂದನೆಗಳನ್ನು ಅರ್ಪಿಸಿದರು.

ಕೆ.ಎಸ್.ವಿಮಲ ಮಾತನಾಡಿ, ಹಲವು ಆಯಾಮಗಳಲ್ಲಿ ಚರ್ಚೆ ಇಡೀ ಮಹಿಳಾ ಚಳುವಳಿಗೆ ಸ್ಫೂರ್ತಿ ನೀಡಿದೆ. ಇದಕ್ಕಾಗಿ ನಾಗಾಭರಣರವರಿಗೆ ಜನವಾದಿ ಮಹಿಳಾ ಸಂಘಟನೆ ಕೃತಜ್ಞತೆಗಳನ್ನು ಅರ್ಪಿಸುತ್ತದೆ ಎಂದು ಹೇಳಿ ಮುಂದಿನ ದಿನಗಳಲ್ಲೂ ಉತ್ತಮ ಮೌಲ್ಯಗಳ ಚಲನಚಿತ್ರಗಳನ್ನು ನಿರ್ದೇಶಿಸಲು ಅದಕ್ಕೆ ಸಂಘಟನೆ ಸಹಕರಿಸುತ್ತದೆ ಎಂದು ಹೇಳಿದರು. ಎಸ್‌ಎಫ್‌ಐನ ರಾಜ್ಯ ಕಾರ್ಯದರ್ಶಿ ಪ್ರಕಾಶ್.ಕೆ. ಅವರು ವಂದನಾರ್ಪಣೆ ಮಾಡಿದರು.

– ಕೆ.ಎಸ್.ಶಾರದಾ

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ ಗಾಂಧಿನಗರ, ಬೆಂಗಳೂರು–9 ಮುದ್ರಣ: ಹರಾ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು